

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 25 ಭಾನುವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871


46

ಸಂಪುಟ: 46 | ಸಂಚಿಕೆ: 277 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಅಂಚೆ ಕಚೇರಿಗಳಲ್ಲಿ ಕನ್ನಡ ಮಂಗಮಾಯ!; ಬರೀ ಇಂಗ್ಲಿಷ್, ಹಿಂದಿ ಕಾರುಬಾರು



ಮೈಸೂರಿನ ನಾನಾ ಕಡೆಗಳಲ್ಲಿರುವ ಅಂಚೆ ಕಚೇರಿಯಲ್ಲಿ ಈಗ ಲಭ್ಯವಿರುವ ಹಿಂದಿ ಹಾಗೂ ಇಂಗ್ಲಿಷ್ ಭಾಷೆಯ ಅಕ್ಷರಗಳಲ್ಲಿ ಮುದ್ರಿತಗೊಂಡಿರುವ ಚಲನ್‌ಗಳನ್ನು ಚಿತ್ರದಲ್ಲಿ ಕಾಣಬಹುದು.

ಸಾಮಾನ್ಯರ ಪೇಚಾಟ!

ಮೈಸೂರು, ಜ.24(ಎಸ್‌ಬಿಡಿ)– ಜನ ಸಾಮಾನ್ಯರೇ ಅಧಿಕ ಸಂಖ್ಯೆಯಲ್ಲಿ ಅವಲಂಬಿಸಿರುವ ಅಂಚೆ ಸೇವೆಯಲ್ಲಿ ಸ್ಥಳೀಯ ಭಾಷೆ ಕನ್ನಡ ಮಂಗಮಾಯವಾಗಿದೆ.

ಅಂಚೆ ಕಚೇರಿಗಳಲ್ಲಿ ಖಾತೆಗೆ ಹಣ ಜಮಾ ಮಾಡಲು ಹಾಗೂ ಹಿಂಪಡೆಯಲು ಬಳಸುವ ಚಲನ್‌ಗಳು ಸೇರಿದಂತೆ ಎಲ್ಲಾ ವಹಿವಾಟಿನ ದಾಖಲೆಗಳು ಇಂಗ್ಲಿಷ್ ಹಾಗೂ ಹಿಂದಿಮಯವಾಗಿವೆ. ಪರಿಣಾಮ ಜನಸಾಮಾನ್ಯರು, ದಾಖಲೆ ಭರ್ತಿ ಮಾಡಲು ಬೇರೊಬ್ಬರ ಸಹಾಯ ಪಡೆಯುವ ಪೇಚಾಟ ಸೃಷ್ಟಿಯಾಗಿದೆ ಈ ಹಿಂದೆಯೂ ಅಂಚೆ ಸೇವೆ ಸಂಪೂರ್ಣ ಇಂಗ್ಲಿಷ್ ಹಾಗೂ ಹಿಂದಿಮಯವಾಗಿತ್ತು. 2014 ರಲ್ಲಿ ಕನ್ನಡಪರ ಹೋರಾಟಗಾರರು ರಾಜ್ಯಾದ್ಯಂತ ವ್ಯಾಪಕ ಪ್ರತಿಭಟನೆ ನಡೆಸಿದ್ದ ಪರಿಣಾಮ ಕನ್ನಡದಲ್ಲೂ ಚಲನ್, ಇನ್ನಿತರ ಸ್ಲಿಪ್‌ಗಳನ್ನು ಮುದ್ರಿಸಿ, ಗ್ರಾಹಕರ ಸೇವೆಗೆ ಒದಗಿಸಲಾಗುತ್ತಿತ್ತು. ಆದರೆ ಇತ್ತೀಚಿನ ವರ್ಷಗಳಲ್ಲಿ ಬಹುತೇಕ ಎಲ್ಲಾ ಅಂಚೆ ಕಚೇರಿ ವಹಿವಾಟು, ಇಂಗ್ಲಿಷ್ ಹಾಗೂ ಹಿಂದಿಮಯವಾಗಿವೆ. ಕೆಲವು ರಾಷ್ಟ್ರೀಕೃತ ಬ್ಯಾಂಕ್‌ಗಳ ವ್ಯವಹಾರದಲ್ಲೂ ಇದೇ ಪ್ರವೃತ್ತಿ ಮೂಲಕ ಕನ್ನಡವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿತ್ತು. ಆಗಲೂ ಕನ್ನಡಪರ ಹೋರಾಟಗಾರರು ರಸ್ತೆಗಿಳಿದು ಹೋರಾಟ ನಡೆಸಿದ್ದರಿಂದ ಚಲನ್‌ಗಳು ಹಾಗೂ ವ್ಯವಹಾರಿಕ ದಾಖಲೆಗಳನ್ನು ಇಂಗ್ಲಿಷ್ ಹಾಗೂ ಕನ್ನಡದಲ್ಲಿ ಮುದ್ರಿಸಿ, ಒದಗಿಸಲಾಗುತ್ತಿದೆ. ಆದರೆ ಜನಸಾಮಾನ್ಯರು ಹೆಚ್ಚು ಅವಲಂಬಿತರಾಗಿರುವ ▶ 6ನೇ ಪುಟಕ್ಕೆ

ದೊಡ್ಡ ಮಟ್ಟದ ಹೋರಾಟ ಅನಿವಾರ್ಯ

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಪ್ರತಿಪಾದನೆ


ಪುರುಷೋತ್ತಮ ಬಿಳಿಮಲೆ

ಮೈಸೂರು: ಪತ್ರ ವ್ಯವಹಾರದಿಂದ ಸ್ಥಳೀಯ ಭಾಷೆ ಸಮಸ್ಯೆ ಪರಿಹಾರ ಸಾಧ್ಯವಿಲ್ಲ. ಈ ನಿಟ್ಟಿನಲ್ಲಿ ದೊಡ್ಡಮಟ್ಟದ ಹೋರಾಟ ನಡೆಯಬೇಕಿದೆ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ತಿಳಿಸಿದ್ದಾರೆ.

ಅಂಚೆ ಕಚೇರಿ ವ್ಯವಹಾರದಲ್ಲಿ ಕನ್ನಡ ನಿರ್ಲಕ್ಷಿಸಿರುವ ಬಗ್ಗೆ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿ, ಕೇಂದ್ರ ಸರ್ಕಾರದ ಅಡಿಯಲ್ಲಿ ಬರುವ ಬ್ಯಾಂಕುಗಳು, ಅಂಚೆ ಕಚೇರಿಗಳು, ಬಿಹೆಚ್‌ಇಎಲ್ ಸೇರಿದಂತೆ ಎಲ್ಲಾ ಕಡೆ ಕನ್ನಡೇತರ ಉದ್ಯೋಗಿಗಳನ್ನು ಅತೀ ಹೆಚ್ಚಾಗಿ ನಿಯೋಜಿಸಿದ್ದಾರೆ. ಒಕ್ಕೂಟ ವ್ಯವಸ್ಥೆಯಲ್ಲಿ ಪ್ರಾದೇಶಿಕ ಭಾಷೆಗಳನ್ನು ನಾಶ ಮಾಡಿ, ಹಿಂದಿಯನ್ನು ಹೇರುವ ಹುನ್ನಾರ ತುಂಬಾ ಬಲಿಷ್ಠವಾಗಿ ನಡೆಯುತ್ತಿದೆ. ಆದರೆ ಅದಕ್ಕೆ ಪರಿಣಾಮಕಾರಿಯಾಗಿ ಪ್ರತಿಭಟಿಸಲು ಸಾಧ್ಯವಾಗುತ್ತಿಲ್ಲ ಎಂದರು.

ಎಷ್ಟೇ ಪತ್ರ ವ್ಯವಹಾರ ನಡೆಸಿದರೂ ಭಾಷಾ ಸಮಸ್ಯೆಗಳಿಗೆ ಪರಿಹಾರ ಸಿಗುತ್ತಿಲ್ಲ. ಜನಪ್ರತಿನಿಧಿಗಳು ಈ ಬಗ್ಗೆ ಲೋಕಸಭೆಯಲ್ಲಿ ದೊಡ್ಡಮಟ್ಟದ ಧ್ವನಿ ಎತ್ತಿ, ಕಾನೂನಿನಲ್ಲಿಯೇ ಬದಲಾವಣೆ ತರಬೇಕು. ನಮ್ಮ ಜನರೂ ಹೊರರಾಜ್ಯದಿಂದ ಬಂದವರ ಜೊತೆ ಕನ್ನಡದಲ್ಲೇ ಮಾತನಾಡಬೇಕು. ಬ್ಯಾಂಕ್ ಹಾಗೂ ಅಂಚೆ ಕಚೇರಿ ಸಿಬ್ಬಂದಿ ▶ 6ನೇ ಪುಟಕ್ಕೆ

ನೂರಾರು ಕೋಟಿ ಮೌಲ್ಯದ ಸರ್ಕಾರಿ ಭೂಮಿ ಕಬಳಿಕೆ ಪ್ರಕರಣದಲ್ಲಿ ಇಡಿ ಪ್ರವೇಶ

ಬ್ರಹ್ಮಾಂಡ ಭ್ರಷ್ಟಾಚಾರ ಬಯಲಾಗುವ ನಿರೀಕ್ಷೆ


ನಾಗಮಂಗಲ ತಾಲೂಕು ಕಚೇರಿ.




ನಾಗಮಂಗಲ, ಜ.24– ರಾಜ್ಯಾದ್ಯಂತ ಸದ್ದು ಮಾಡಿರುವ ನಾಗಮಂಗಲ ಸರ್ಕಾರಿ ಭೂಮಿ ಕಬಳಿಕೆ ಪ್ರಕರಣ ದಿನದಿಂದ ದಿನಕ್ಕೆ ತೀವ್ರ ತಿರುವು ಪಡೆದುಕೊಳ್ಳುತ್ತಿದ್ದು, ಲೋಕಾಯುಕ್ತ ಹಾಗೂ ಪೊಲೀಸರ ತನಿಖೆ ನಡೆಯುತ್ತಿರುವಾಗಲೇ ಜಾರಿ ನಿರ್ದೇಶನಾಲಯ (ಇಡಿ) ಪ್ರವೇಶ ಮಾಡಿದೆ.

ಶುಕ್ರವಾರ ಬೆಳ್ಳಂಬೆಳಗ್ಗೆ ನಾಗಮಂಗಲ ಪಟ್ಟಣ ಪೊಲೀಸ್ ಠಾಣೆ ಮತ್ತು ತಾಲೂಕು ಕಚೇರಿಯ ದರಖಾಸ್ತು (ಎಲ್‌ಅಂಡ್‌ಡಿ) ಶಾಖೆ ಮತ್ತು ರೆಕಾರ್ಡ್ ರೂಂ (ಭೂ ದಾಖಲಾತಿ) ಗಳಲ್ಲಿ ಅಗತ್ಯ ದಾಖಲಾತಿಗಳನ್ನು ಸಂಗ್ರಹಿಸುವ ಮೂಲಕ ತನಿಖೆಯನ್ನು ಚುರುಕುಗೊಳಿಸಿದೆ.

ಡಿವೈಎಸ್ಪಿ ನೇತೃತ್ವದಲ್ಲಿ ತನಿಖೆ: ಜ.12 ರಂದು ದಿಢೀರ್ ದಾಳಿ ಮೂಲಕ 320 ಎಕರೆಗೂ ಹೆಚ್ಚು ಭೂಮಿಯನ್ನು ದರಖಾಸ್ತು ಯೋಜನೆಯ ದಾಖಲಾತಿಗಳ ತಿದ್ದುಪಡಿ ಹಾಗೂ ನಕಲು ಮಾಡಿ ಕಬಳಿಸಿರುವುದು ಬಯಲಾದ ನಂತರ ಡಿವೈಎಸ್ಪಿ ಚಲುವರಾಜು ನೇತೃತ್ವದ ತಂಡ ಹಾಗೂ ಲೋಕಾಯುಕ್ತ ಪೊಲೀಸರ ತಂಡ ನಾನಾ ದೃಷ್ಟಿಕೋನದಲ್ಲಿ ತನಿಖೆ ನಡೆಸಿವೆ.

ಮತ್ತೊಬ್ಬನ ಬಂಧನ: ನಕಲಿ ದಾಖಲೆ ಸೃಷ್ಟಿಸಿ ಈ ಸರ್ಕಾರಿ ಜಮೀನು ಕಬಳಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಇದುವರೆಗೆ ಐವರನ್ನು ಬಂಧಿಸಲಾಗಿತ್ತು ಉಳಿದ ಐವರು ತಲೆಮರೆಸಿಕೊಂಡಿದ್ದರು. ಪ್ರಕರಣಕ್ಕೆ ಸಂಬಂಧಿಸಿದಂತೆ ತಲೆಮರೆಸಿಕೊಂಡಿದ್ದ ಪ್ರಕರಣದ ಎ9 ಆರೋಪಿ ವಿಜಯಕುಮಾರ್‌ನನ್ನು ಪಟ್ಟಣ ಠಾಣೆ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದು, ಆತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಅಪರ ಜಿಲ್ಲಾಧಿಕಾರಿ ಶಿವಾನಂದ ಮೂರ್ತಿ ಹಾಗೂ ಮಂಡ್ಯ ಉಪವಿಭಾಗಾಧಿಕಾರಿಗಳ ನೇತೃತ್ವದ ತಂಡ ನಾಗಮಂಗಲ ಕಂದಾಯ ಇಲಾಖೆ ಮೇಲೆ ತೀವ್ರ ನಿಗಾ ವಹಿಸುವ ಮೂಲಕ ▶ 6ನೇ ಪುಟಕ್ಕೆ



ನನ್ನ ಕಿಡ್ನಿ ಫೇಲ್ ಆಗಿದೆ; 3 ದಿನಕ್ಕೊಮ್ಮೆ ಡಯಾಲಿಸಿಸ್ ಮಾಡಿಸ್ತೀನಿ... ಆದರೆ

ಹೋರಾಟದ ಕಿಚ್ಚು ಆರಿಲ್ಲ...!

● ಮಾಜಿ ಪ್ರಧಾನಿ ದೇವೇಗೌಡರ ಗುಡುಗು ● ಹಾಸನದಲ್ಲಿ ಜೆಡಿಎಸ್ ಬೆಳ್ಳಿ ಹಬ್ಬ; ಭಾರೀ ಸಮಾವೇಶ

ಹಾಸನ,ಜ.24–ನನಗೆ ವಾರದಲ್ಲಿ ಮೂರು ದಿನ ಡಯಾಲಿಸಿಸ್ ಆಗುತ್ತಿದೆ, ನನ್ನ ಕಿಡ್ನಿಗಳು ವೈಫಲ್ಯವಾಗಿವೆ. ಆದರೆ, ಈ ಮಣ್ಣಿನ ಮೇಲಿನ ಮಮಕಾರ ಮತ್ತು ನನ್ನ ಕುಟುಂಬವನ್ನು ಮುಗಿಸಲು ಸಂಚು ರೂಪಿಸಿರುವವರ ವಿರುದ್ಧ ಹೋರಾಡುವ ಚೈತನ್ಯ ಇನ್ನೂ ನನ್ನಲ್ಲಿದೆ ಎಂದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಭಾವುಕರಾಗಿ ನುಡಿದರು.

ಹಾಸನದಲ್ಲಿ ಜೆಡಿಎಸ್ ಬೆಳ್ಳಿ ಹಬ್ಬದ ಹಿನ್ನೆಲೆಯಲ್ಲಿ ಬೂವನಹಳ್ಳಿ ಬಳಿ ಏರ್ಪಡಿಸಿದ್ದ ಬೃಹತ್ ಸಮಾವೇಶವನ್ನುದ್ದೇಶಿಸಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಹಾಗೂ ಎದುರಾಳಿಗಳ ವಿರುದ್ಧ ವಾಗ್ದಾಳಿ ನಡೆಸಿದರು. ರೇವಣ್ಣ ಹಾಗೂ ಅವರ ಕುಟುಂಬವನ್ನು ರಾಜಕೀಯವಾಗಿ ನಾಶ ಮಾಡಲು ಹೊರಟಿರುವವರಿಗೆ ಈ ಸಮಾವೇಶ ಒಂದು ಪ್ರಬಲ ಸಂದೇಶ ನೀಡಲಿದೆ ಎಂದ ಗೌಡರು, ರೇವಣ್ಣ ಬಂಧನದ ಕ್ಷಣಗಳನ್ನು ನೆನೆದು ಕಣ್ಣೀರಿಟ್ಟರು. 'ನನ್ನ ಮಗಳು ಶೈಲಜಾ ಮನೆಯಲ್ಲಿ ರೇವಣ್ಣ ಕುಳಿತಿದ್ದಾಗ ಎಸ್‌ಐಟಿ ಅಧಿಕಾರಿಗಳು ಬಂದು ಅರೆಸ್ಟ್ ಮಾಡಿದರು. ಇವತ್ತು ಆ ಎಸ್‌ಐಟಿ ಅಧಿಕಾರಿಗಳಿಗೆ ಸರ್ಕಾರ ಉಡುಗೊರೆ ನೀಡಿದೆ. ರೇವಣ್ಣ ಕುಟುಂಬವನ್ನ ಮುಗಿಸಲೆಂದೇ ಈ ಉಡುಗೊರೆಗಳನ್ನು ನೀಡಲಾಗುತ್ತಿದೆ' ಎಂದು ಆಕ್ರೋಶ ಹೊರಹಾಕಿದರು.

ಬಿ–ಟೀಂ ಟೀಕೆಗೆ ತಿರುಗೇಟು: ಈ ಹಿಂದೆ ರಾಹುಲ್ ಗಾಂಧಿ ಹಾಸನಕ್ಕೆ ಬಂದಾಗ ಜೆಡಿಎಸ್ ಅನ್ನು ಬಿಜೆಪಿಯ 'ಬಿ–ಟೀಂ' ಎಂದು ಕರೆದಿದ್ದರು. ಅದನ್ನೇ ಇಂದು ಪ್ರಸ್ತಾಪಿಸಿದ ದೇವೇಗೌಡರು, 'ಅವತ್ತು ಬಿ ಟೀಂ ಎಂದವರು ಇಂದು ನೋಡಲಿ, ನಾವು ಎನ್‌ಡಿಎ ಮೈತ್ರಿಯ ಪ್ರಬಲ ಪಾಲುದಾರರಾಗಿದ್ದೇವೆ. ಕುಮಾರಸ್ವಾಮಿ ಇಂದು ಕೇಂದ್ರ ಮಂತ್ರಿಯಾಗಿದ್ದಾರೆ. ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ನಾವು ದೇಶದ ಆಡಳಿತದಲ್ಲಿ ಭಾಗಿಯಾಗಿದ್ದೇವೆ' ಎಂದು ಹೆಮ್ಮೆಯಿಂದ ಹೇಳಿದರು.


ಹಾಸನದಲ್ಲಿ ಜೆಡಿಎಸ್ ಬೆಳ್ಳಿ ಹಬ್ಬದ ಹಿನ್ನೆಲೆಯಲ್ಲಿ ಏರ್ಪಡಿಸಿದ್ದ ಬೃಹತ್ ಸಮಾವೇಶವನ್ನುದ್ದೇಶಿಸಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಮಾತನಾಡಿದರು.

ಯಾವ ಕಪ್ಪು ಚುಕ್ಕೆ ಇಲ್ಲ: ಹಾಸನ ಜಿಲ್ಲೆಯನ್ನು 1967ರಿಂದಲೂ ಬೆಳೆಸಿಕೊಂಡು ಬಂದಿದ್ದೇನೆ. ರೈತನ ಮಗನಾಗಿ ದೇಶದ ಪ್ರಧಾನಿಯಾಗಿ ಯಾವುದೇ ಕಪ್ಪು ಚುಕ್ಕೆಯಿಲ್ಲದೆ ಆಡಳಿತ ನಡೆಸಿದ್ದೇನೆ. ಜಿಲ್ಲೆಯಲ್ಲಿ ಡೈರಿ, ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ಪ್ರತಿಯೊಂದು ಸಮುದಾಯಕ್ಕೂ ಶಕ್ತಿ ತುಂಬಿದ್ದೇನೆ. ಆದರೆ, ಕುಮಾರಣ್ಣ 28 ವರ್ಷಗಳ ಹಿಂದೆ ಖರೀದಿಸಿದ ಜಮೀನು ಗೋಮಾಳ ಎಂದು ಸುಳ್ಳು ಆರೋಪ ಮಾಡುತ್ತಿದ್ದಾರೆ. ಐಐಟಿ ಮಂಜೂರಾಗಿದ್ದ ಜಾಗವನ್ನು ಯಾರ್‍ಯಾರು ಹೊಡೆದರು ಎನ್ನುವುದು ನಮಗೆ ಗೊತ್ತಿದೆ ಎಂದು ಪರೋಕ್ಷವಾಗಿ ಎದುರಾಳಿಗಳಿಗೆ ಎಚ್ಚರಿಕೆ ನೀಡಿದರು.

ಜನಸಾಗರಕ್ಕೆ ತಲೆಬಾಗಿದ ದೊಡ್ಡಗೌಡ್ರು: ರಾಜ್ಯದ ಮೂಲೆ ಮೂಲೆಯಿಂದ ನೀವು ಬಂದಿರುವುದನ್ನು ನೋಡಿದರೆ ಕಣ್ಣು ಕುಕ್ಕುವಂತಿದೆ. ಆಡಳಿತ ನಡೆಸುತ್ತಿರುವವರಿಗೆ ಕುಮಾರಣ್ಣ ಹಾಗೂ ರೇವಣ್ಣ ಹಿಂದೆ ನಾವಿದ್ದೇವೆ ಎನ್ನುವ ಸಂದೇಶವನ್ನು ▶ 6ನೇ ಪುಟಕ್ಕೆ


ಹಾಸನದಲ್ಲಿ ನಡೆದ ಜೆಡಿಎಸ್ ಬೆಳ್ಳಿಹಬ್ಬದ ಬೃಹತ್ ಸಮಾವೇಶದಲ್ಲಿ ಪಾಲ್ಗೊಂಡಿದ್ದ ಜನಸ್ತೋಮ.

ರಾಜ್ಯದಲ್ಲಿ ಈಗ ಇರುವುದು ಬ್ರೋಕರ್‌ಗಳು, ಲೂಟಿಕೋರರ ಸರ್ಕಾರ



ಹಾಸನ: ದೇವರಾಜ ಅರಸು ಅವರ ಸಾಧನೆಯನ್ನು ಸರಿಗಟ್ಟುತ್ತೇವೆ ಎನ್ನುತ್ತಲೇ ಭ್ರಷ್ಟಾಚಾರದಲ್ಲಿ ಮುಳುಗಿದ್ದೀರಿ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯನವರ ವಿರುದ್ಧ ವಾಗ್ದಾಳಿ ನಡೆಸಿದರು.

ಹಾಸನದಲ್ಲಿ ನಡೆದ ಜೆಡಿಎಸ್ ಬೆಳ್ಳಿಹಬ್ಬ ಸಮಾರಂಭದಲ್ಲಿ ಮಾತನಾಡಿದ ಅವರು, ರಾಜ್ಯ ಕಾಂಗ್ರೆಸ್ ಸರ್ಕಾರದ ಆಡಳಿತ ವೈಖರಿ, ಪೊಲೀಸ್ ವ್ಯವಸ್ಥೆ ಸಂಪೂರ್ಣವಾಗಿ ಹದಗೆಟ್ಟಿದೆ ಎಂದು ಹರಿಹಾಯ್ದರು.

ರಾಜ್ಯದ ಇತಿಹಾಸದಲ್ಲಿ ವೀರಪ್ಪನ್ ಹಿಡಿಯಲು ಹೋದ ಪೊಲೀಸರನ್ನು ಬಿಟ್ಟರೆ, ಅತೀ ಹೆಚ್ಚು ಉಡುಗೊರೆ ಪಡೆದಿರುವುದು ಎಸ್‌ಐಟಿ ತಂಡವೇ ಇರಬೇಕು. ಮೈಸೂರಿನ ಇಲವಾಲದ ಬಳಿ ಚಿನ್ನದ ವ್ಯಾಪಾರಿಯನ್ನು ದರೋಡೆ ಮಾಡಿದ್ದು ಇದೇ ನಿಮ್ಮ ಅಧಿಕಾರಿಗಳು. ಅಂದೇ ನಾನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಎಚ್ಚರಿಕೆ ನೀಡಿದ್ದೆ. ಇತ್ತೀಚೆಗೆ ಪೊಲೀಸ್ ಅಧಿಕಾರಿಯೊಬ್ಬರ ಪ್ರಕರಣ ರಾಷ್ಟ್ರಮಟ್ಟದಲ್ಲಿ ಚರ್ಚೆಯಾಗುತ್ತಿದೆ. ಇದೇನಾ ನಿಮ್ಮ ಪರಿಶುದ್ಧ ಆಡಳಿತ. ದೇವರಾಜು ಅರಸು ಅವರ ಸಾಧನೆ ಸರಿಗಟ್ಟುತ್ತೇವೆ ಎನ್ನುತ್ತಲೇ ಭ್ರಷ್ಟಾಚಾರದಲ್ಲಿ ಮುಳುಗಿದ್ದೀರಿ ಎಂದು ವ್ಯಂಗ್ಯವಾಡಿದರು.

ಇದು ಬ್ರೋಕರ್ ಸರ್ಕಾರ: ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವುದು ಜನಪರ ಸರ್ಕಾರವಲ್ಲ, ಇದೊಂದು 'ಬ್ರೋಕರ್ ಮತ್ತು ಲೂಟಿಕೋರರ ಸರ್ಕಾರ'. ಆಡಳಿತ ನಡೆಸಲು ಮಧ್ಯವರ್ತಿಗಳನ್ನು ನೇಮಿಸಿಕೊಂಡಿದ್ದಾರೆ. ▶ 6ನೇ ಪುಟಕ್ಕೆ

ಅಧಿಕಾರ ಹಂಚಿಕೆ ಗೊಂದಲದ ನಡುವೆ ಸಚಿವರು, ಶಾಸಕರಿರಲಿ

ಸಿಎಂ ಆದೇಶಕ್ಕೂ ಕ್ಯಾರೆ ಎನ್ನದ ಅಧಿಕಾರಿ ವರ್ಗ!



ಬೆಂಗಳೂರು, ಜ.24(ಕೆಎಂಶಿ)– ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಡುವಿನ ಅಧಿಕಾರ ಹಂಚಿಕೆ ಗೊಂದಲದಿಂದ ಹಲವು ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳೂ ಸೇರಿದಂತೆ ಸಚಿವರು ಹಾಗೂ ಶಾಸಕರ ದೂರವಾಣಿ ಕರೆಗಳನ್ನೇ ಅಧಿಕಾರಿಗಳು ಸ್ವೀಕರಿಸುತ್ತಿಲ್ಲ.

ಇದರ ಅನುಭವ ಸ್ವತಃ ಮುಖ್ಯಮಂತ್ರಿ ಅವರಿಗೂ ಆಗಿದ್ದು, ತಮ್ಮ ಮಾತನ್ನೂ ನಿರ್ಲಕ್ಷಿಸಿದ ಕಾರಣಕ್ಕೆ ಕಾರ್ಯದರ್ಶಿಯೊಬ್ಬರಿಗೆ ವಿವರಣೆ ಕೇಳಿ ನೋಟಿಸ್ ಜಾರಿ ಮಾಡಲಾಗಿದೆ. ಕೆಲವು ಸಚಿವರನ್ನು ಹೊರತುಪಡಿಸಿ ಉಳಿದ ಮಂತ್ರಿಗಳು, ಶಾಸಕರು ಹಾಗೂ ಸಂಸದರ ಮಾತಿಗೆ ಅಧಿಕಾರಿಗಳು ಬೆಲೆಯನ್ನೇ ಕೊಡುತ್ತಿಲ್ಲ. ತೆರವಾಗುವ ಹುದ್ದೆಗಳಿಗೆ ಸರ್ಕಾರ ಸಹ ಭರ್ತಿ ಮಾಡದೆ ಸಾವಿರಾರು ಎ ಮತ್ತು ಬಿ ಸೇರಿದಂತೆ ವಿವಿಧ ಶ್ರೇಣಿಯ ಅನೇಕ ಹುದ್ದೆಗಳು ಖಾಲಿ ಇವೆ. ಈಗಿರುವ

> ಕಳೆದ ಆರು ತಿಂಗಳಿಂದ ಅಧಿಕಾರ ಹಂಚಿಕೆಗೆ ಸಂಬಂಧಿಸಿದಂತೆ ಕಾಂಗ್ರೆಸ್ ಆಡಳಿತದಲ್ಲಿ ಗೊಂದಲ ಉಂಟಾಗುತ್ತಿದ್ದಂತೆ ಕೆಲವು ಅಧಿಕಾರಿಗಳು ಅಸಡ್ಡೆ ತೋರುತ್ತಿರುವುದಲ್ಲದೆ ಅಭಿವೃದ್ಧಿ ಕಡೆ ಗಮನವನ್ನೇ ಹರಿಸುತ್ತಿಲ್ಲ, ಜನಪ್ರತಿನಿಧಿಗಳ ಮಾತಿಗೂ ಬೆಲೆ ನೀಡುತ್ತಿಲ್ಲ. ಅದರಲ್ಲೂ ನವೆಂಬರ್ 20ರ ನಂತರದ ಬೆಳವಣಿಗೆಗಳು ಅಧಿಕಾರಿಗಳನ್ನು ಮತ್ತಷ್ಟು ಸಂಕಷ್ಟಕ್ಕೆ ಸಿಲುಕಿಸಿದ್ದು, ಏನು ಮಾಡಿದರೆ, ಏನಾಗುತ್ತದೋ ಎಂಬ ಗೊಂದಲದಲ್ಲಿದ್ದು, ಅಧಿಕಾರ ಹಂಚಿಕೆ ವಿವಾದ ಬಗೆಹರಿದ ನಂತರ ಪರಿಶೀಲಿಸುವ ಮನೋಭಾವ ಹೊಂದಿದ್ದಾರೆ.

ಕೆಲವು ಅಧಿಕಾರಿಗಳಿಗೆ ಕೆಲಸ ನಿರ್ವಹಣೆಯ ಜಾಗ ತೋರಿಸದೆ, ಆರು ತಿಂಗಳಿಂದ ಹಿಡಿದು ವರ್ಷಾನುಗಟ್ಟಲೇ ಮನೆಯಲ್ಲೇ ಕುಳಿತು ಸಂಬಳ ನೀಡುತ್ತಿದ್ದಾರೆ.

ಕೆಲವು ಸಚಿವರಿಗಂತೂ ಯಾವುದೇ ಅಧಿಕಾರ ಇಲ್ಲದೆ, ಅವರ ಇಲಾಖೆಯ ಎಲ್ಲಾ ಪ್ರಮುಖ ಕೆಲಸ ಕಾರ್ಯಗಳನ್ನು, ಕಾಣದ ಕೈಗಳು ನೋಡಿಕೊಳ್ಳುತ್ತಿದ್ದು, ಇದರ ವಿರುದ್ಧ ಏನೂ ಮಾಡಲಾಗದ ಸ್ಥಿತಿ ನಿರ್ಮಾಣವಾಗಿದೆ. ಶಾಸಕರು ತಮ್ಮ ಕ್ಷೇತ್ರಗಳಿಗೆ ▶ 6ನೇ ಪುಟಕ್ಕೆ

ಅಧಿಕಾರಿಗಳು ಜನಪ್ರತಿನಿಧಿಗಳ ದೂರವಾಣಿ ಕರೆ ಸ್ವೀಕರಿಸಿ...

ಮುಖ್ಯ ಕಾರ್ಯದರ್ಶಿ ಹೊಸ ಸುತ್ತೋಲೆ!


ಶಾಲಿನಿ ರಜನೀಶ್

ಬೆಂಗಳೂರು, ಜ.24– ಸರ್ಕಾರಿ ಅಧಿಕಾರಿಗಳಿಗೆ ರಾಜ್ಯ ಸರ್ಕಾರ ಶಾಕ್ ನೀಡಿದ್ದು, ಅಧಿಕಾರಿಗಳು ಜನಪ್ರತಿನಿಧಿಗಳ ದೂರವಾಣಿ ಕರೆ ಸ್ವೀಕರಿಸಲೇಬೇಕು ಎಂದು ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ತಾಕೀತು ಮಾಡಿದ್ದಾರೆ.

ಸರ್ಕಾರಿ ಅಧಿಕಾರಿಗಳು, ಜನಪ್ರತಿನಿಧಿಗಳ ದೂರವಾಣಿ ಕರೆಗಳನ್ನು ಸ್ವೀಕರಿಸದೆ ಇರುವ ಹಿನ್ನೆಲೆಯಲ್ಲಿ ರಾಜ್ಯ ಮುಖ್ಯ ಕಾರ್ಯದರ್ಶಿಗಳು ಈ ಸಂಬಂಧ ಸುತ್ತೋಲೆಯೊಂದನ್ನು ಹೊರಡಿಸಿದ್ದಾರೆ. ಶಾಸಕರು, ಪರಿಷತ್ ಸದಸ್ಯರು, ಸಂಸದರ ಫೋನ್ ಕರೆ ಸ್ವೀಕರಿಸುವ ಸಂಬಂಧ ಸರ್ಕಾರಿ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ ಎನ್ನಲಾಗಿದೆ.

ಸರ್ಕಾರಿ ಅಧಿಕಾರಿಗಳು, ಶಾಸಕರು ಮತ್ತು ಸಚಿವರ ದೂರವಾಣಿ ಕರೆಗಳನ್ನು ಸ್ವೀಕರಿಸದೆ ಇರುವುದು, ಮರಳಿ ಕರೆ ಮಾಡದೇ ಇರುವುದನ್ನು ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ಗಂಭೀರವಾಗಿ ಪರಿಗಣಿಸಿದ್ದಾರೆ.

ಇನ್ನು ಮುಂದೆ ಎಲ್ಲ ಸರ್ಕಾರಿ ಅಧಿಕಾರಿಗಳು ಎಂಎಲ್‌ಎಗಳು ಮತ್ತು ಎಂಎಲ್‌ಸಿಗಳ ದೂರವಾಣಿ ಕರೆಗಳನ್ನು ಸ್ವೀಕರಿಸಲೇಬೇಕು. ಒಂದು ವೇಳೆ ಕರೆ ಬಂದಾಗ ಇತರ ಕೆಲಸಗಳಲ್ಲಿ ವ್ಯಸ್ತರಾಗಿದ್ದಲ್ಲಿ, ಮರಳಿ ಕರೆ ಮಾಡಿ ಮಾತನಾಡಬೇಕು ಎಂದು ಸೂಚನೆ ನೀಡಿದ್ದಾರೆ. ರಾಜ್ಯದ ವಿವಿಧ ಭಾಗಗಳಿಂದ ಸಾರ್ವಜನಿಕರು ಅವರ ಸಮಸ್ಯೆ ಮತ್ತು ಕುಂದು ಕೊರತೆಗಳನ್ನು ಪರಿಹರಿಸಿಕೊಳ್ಳುವ ಉದ್ದೇಶದಿಂದ ವಿಧಾನಸಭಾ ಹಾಗೂ ಪರಿಷತ್ತಿನ ಸದಸ್ಯರಿಗೆ ವಿನಂತಿಸಿಕೊಂಡಾಗ ಸಂಬಂಧಿಸಿದ ಅಧಿಕಾರಿಗಳಿಗೆ ಕರೆ ಮಾಡಬೇಕಾಗುತ್ತದೆ. ಅಂತಹ ಸಂದರ್ಭಗಳಲ್ಲಿ ಜನಪ್ರತಿನಿಧಿಗಳ ಕರೆಗಳನ್ನು ಕೆಲವು ಅಧಿಕಾರಿಗಳು ಸ್ವೀಕರಿಸದೇ ಇರುವುದು ಹಾಗೂ ಒಂದು ವೇಳೆ ಆ ಸಮಯದಲ್ಲಿ ತುರ್ತು ಕಾರ್ಯದಲ್ಲಿ ನಿರತರಾಗಿದ್ದಲ್ಲಿ ತದನಂತರ ಸೌಜನ್ಯಕ್ಕಾದರೂ ಮರು ಕರೆ ಮಾಡದಿರುವುದು ನನ್ನ ಗಮನಕ್ಕೆ ಬಂದಿದೆ ಎಂದು ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಸಹ ಪತ್ರ ಬರೆದಿದ್ದಾರೆ.

ಮೈಸೂರು ಸ್ಥಳೀಯ ಯೋಜನಾ ಪ್ರದೇಶ ದ್ವಿಗುಣ

● 509 ಚದರ ಕಿಲೋ ಮೀಟರ್‌ನಿಂದ ಈಗ 1200 ಚದರ ಕಿ.ಮೀ.ಗೆ ವಿಸ್ತರಣೆ
● ಎಂಡಿಎ ಸಭೆಯಲ್ಲಿ ಮಹತ್ವದ ನಿರ್ಧಾರ


ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಕಚೇರಿಯಲ್ಲಿ ಪ್ರಾಧಿಕಾರದ ಅಧ್ಯಕ್ಷ ಜಿಲ್ಲಾಧಿಕಾರಿ ಲಕ್ಷ್ಮೀಕಾಂತರೆಡ್ಡಿ ಅಧ್ಯಕ್ಷತೆಯಲ್ಲಿ ಸಾಮಾನ್ಯ ಸಭೆ ನಡೆಯಿತು.

ಮೈಸೂರು, ಜ.24(ಆರ್‌ಕೆ)–ಪ್ರಸ್ತುತ ಚಾಲ್ತಿಯಲ್ಲಿದ್ದ ಮೈಸೂರು ಸ್ಥಳೀಯ ಯೋಜನಾ ಪ್ರದೇಶ (ಲೋಕಲ್ ಪ್ಲಾನಿಂಗ್ ಏರಿಯಾ) ವ್ಯಾಪ್ತಿಯನ್ನು 509 ಚದರ ಕಿ.ಮೀನಿಂದ 1200 ಚದರ ಕಿ.ಮೀ. ವರೆಗೆ ವಿಸ್ತರಿಸಲು ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ) ನಿರ್ಧರಿಸಿದೆ.

ಪ್ರಾಧಿಕಾರದ ಕಚೇರಿ ಸಭಾಂಗಣದಲ್ಲಿ ಅಧ್ಯಕ್ಷರಾದ ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತ ರೆಡ್ಡಿ ಅವರ ಅಧ್ಯಕ್ಷತೆಯಲ್ಲಿ ನಡೆದ ಎಂಡಿಎ ಸಾಮಾನ್ಯ ಸಭೆಯು ಪ್ರಸ್ತುತ ಎಂಡಿಎ ವ್ಯಾಪ್ತಿಗೆ ಒಳಪಟ್ಟಿರುವ 509 ಚದರ ಕಿ.ಮೀ ವಿಸ್ತೀರ್ಣದ ಮೈಸೂರು ಸ್ಥಳೀಯ ಯೋಜನಾ ಪ್ರದೇಶವನ್ನು ಈಗ 1200 ಚದರ ಕಿ.ಮೀವರೆಗೆ ವಿಸ್ತರಿಸುವ ತೀರ್ಮಾನ ಕೈಗೊಳ್ಳಲಾಗಿದೆ.

ಪ್ರಸ್ತುತ ಮೈಸೂರು ತಾಲೂಕಿನ ಹೂಟಗಳ್ಳಿ ನಗರ ಸಭೆ, ಬೋಗಾದಿ, ಶ್ರೀರಾಂಪುರ, ರಮ್ಮನಹಳ್ಳಿ, ಕಡಕೊಳ ಪಟ್ಟಣ ಪಂಚಾಯ್ತಿಗಳು, ನಂಜನಗೂಡು ತಾಲೂಕಿನ ನಗರಸಭೆ, 19 ಗ್ರಾಮಗಳು ಹಾಗೂ ಶ್ರೀರಂಗಪಟ್ಟಣ ತಾಲೂಕಿನ 13 ಗ್ರಾಮಗಳನ್ನು ಯೋಜನಾ ಪ್ರದೇಶದ ವ್ಯಾಪ್ತಿಗೆ ಸೇರಿಸಲಾಗಿತ್ತು. ಇದೀಗ ಗ್ರೇಟರ್ ಮೈಸೂರು ಮಹಾನಗರಪಾಲಿಕೆ ಎಂದು ಸರ್ಕಾರ ಅಧಿಸೂಚನೆ ▶ 6ನೇ ಪುಟಕ್ಕೆ

ಮೈಸೂರು ಮಿತ್ರ ಭಾನುವಾರ 25 ಜನವರಿ 2026

ರಾಜ್ಯ ಮಟ್ಟದ ಕ್ರೀಡಾಕೂಟ: ಮೈಸೂರು ಪೊಲೀಸರ ಉತ್ತಮ ಸಾಧನೆ



ರಾಜ್ಯ ಮಟ್ಟದ ಕ್ರೀಡಾಕೂಟಗಳಲ್ಲಿ ವಿಜೇತರಾದವರನ್ನು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಅಭಿನಂದಿಸಿದರು.

ಮೈಸೂರು, ಜ.24–ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದ ರಾಜ್ಯ ಮಟ್ಟದ ಪೊಲೀಸ್ ವಾರ್ಷಿಕ ಕ್ರೀಡಾಕೂಟದಲ್ಲಿ ಮೈಸೂರು ಪೊಲೀಸರು ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾಗಿದ್ದಾರೆ.

ನಗರ ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿ ತಂಡಗಳು, ಹ್ಯಾಂಡ್‌ಬಾಲ್‌ನಲ್ಲಿ ಪ್ರಥಮ ಹಾಗೂ ಹಗ್ಗ–ಜಗ್ಗಾಟದಲ್ಲಿ ದ್ವಿತೀಯ ಸ್ಥಾನ ಪಡೆದಿವೆ. ವೈಯಕ್ತಿಕ ಸ್ಪರ್ಧೆಗಳಲ್ಲಿ ವಿ.ವಿ.ಪುರಂ ಠಾಣೆಯ ಶಾರೂಖ್ ತರಿಹಾಲ್ ಜಾವಲಿನ್ ಥ್ರೋನಲ್ಲಿ ಪ್ರಥಮ, ಕುವೆಂಪುನಗರ ಠಾಣೆಯ ಶ್ರೀಮತಿ ಕೆ.ಅಶ್ವಿನಿ ಹೈಜಂಪ್‌ನಲ್ಲಿ ಪ್ರಥಮ, ಲಾಂಗ್ ಜಂಪ್‌ನಲ್ಲಿ ದ್ವಿತೀಯ ಹಾಗೂ ತ್ರಿಪ್ಪಲ್ ಜಂಪ್‌ನಲ್ಲಿ ದ್ವಿತೀಯ, ವಿಧ್ವಂಸಕ ಕೃತ್ಯ ತಡೆ ತಪಾಸಣಾ ತಂಡ (ಎಎಸ್‌ಸಿ ಟೀಮ್)ದ ಎಎಸ್‌ಐ ಅಮರ್‌ನಾಥ್ 100 ಮೀ. ಓಟದಲ್ಲಿ ದ್ವಿತೀಯ ಹಾಗೂ 200 ಮೀ. ಓಟದಲ್ಲಿ ತೃತೀಯ ಹಾಗೂ ಸಶಸ್ತ್ರ ಮೀಸಲು ಪಡೆಯ ಆರ್‌ಎಸ್‌ಐ ಪರಶುರಾಮ್ ಕಾಂಬ್ಳೆ ಶಾಟ್‌ಪುಟ್‌ನಲ್ಲಿ ತೃತೀಯ ಸ್ಥಾನ ಪಡೆದಿದ್ದಾರೆ.

ಕ್ರೀಡಾಪಟುಗಳ ಜೊತೆ ಟೀಂ ಮ್ಯಾನೇಜರ್ ಪಿ.ಸುರೇಶ್(ಆರ್‌ಪಿಐ) ಹಾಗೂ ಟೀಂ ಕ್ಯಾಪ್ಟನ್ ಎಸ್.ಜಿ.ತೇಜ್ ಗೋಪಾಲ್ (ಆರ್‌ಎಸ್‌ಐ) ವಾರ್ಷಿಕ ಕ್ರೀಡಾಕೂಟದಲ್ಲಿ ಭಾಗವಹಿಸಿದ್ದರು.

ದಕ್ಷಿಣ ವಲಯ ಅಂತರ್ ವಿವಿ ಪುರುಷರ ಕ್ರಿಕೆಟ್ ಪಂದ್ಯಾವಳಿ



ಮೈಸೂರು, ಜ.24(ಜಿಎ)–ದಕ್ಷಿಣ ವಲಯ ಅಂತರ್ ವಿಶ್ವವಿದ್ಯಾನಿಲಯ ಪುರುಷರ ಕ್ರಿಕೆಟ್ ಪಂದ್ಯಾವಳಿಯನ್ನು ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿವಿ ವತಿಯಿಂದ ಶಿಕ್ಷಣ ಸಂಸ್ಥೆ ಜೆಎಸ್‌ಎಸ್ ಎಸ್‌ಟಿಐ ಆವರಣದ ಕೆಎಸ್‌ಸಿಎ ಮೈದಾನ ದಲ್ಲಿ ಆಯೋಜಿಸಲಾಗಿದೆ ಎಂದು ಪ್ರಾಚಾರ್ಯ ಡಾ.ಸಿ.ನಟರಾಜು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜ.26ರಂದು ಸಂಜೆ 4 ಗಂಟೆಗೆ ಜೆಎಸ್‌ಎಸ್‌ನ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟ್‌ಸೂರ್ ಮಠ್ ಉದ್ಘಾಟನೆ ನೆರವೇರಿಸುವರು. ಮುಖ್ಯ ಅತಿಥಿಗಳಾಗಿ ಮಾಜಿ ಕ್ರಿಕೆಟರ್ ಸುಜಿತ್ ಸೋಮಸುಂದರ್, ಡಾ.ಮಮ್ತಾ ರಾಣಿ ಅಗರ್ವಾಲ್, ಡಾ.ಬಿ.ಸುರೇಶ್ ಆಗಮಿಸಲಿದ್ದಾರೆ. ಡಾ.ಎ.ಎನ್.ಸಂತೋಷ್‌ಕುಮಾರ್ ಅಧ್ಯಕ್ಷತೆ ವಹಿಸುವರು ಎಂದರು.

ಜ.27ರಂದು ವಿವಿಧ ಕ್ರೀಡಾಂಗಣಗಳಲ್ಲಿ ಏಕಕಾಲಕ್ಕೆ ಪಂದ್ಯಗಳು ಆರಂಭವಾಗಲಿದ್ದು, ಕರ್ನಾಟಕ, ತಮಿಳುನಾಡು, ಕೇರಳ, ಆಂಧ್ರಪ್ರದೇಶ, ತೆಲಂಗಾಣ ಹಾಗೂ ಪುದುಚೇರಿಯ 132 ವಿಶ್ವವಿದ್ಯಾನಿಲಯಗಳು ಭಾಗಹಿಸಲಿವೆ. ಏಕಕಾಲದಲ್ಲಿ ಮೈಸೂರಿನ 11 ಮೈದಾನದಲ್ಲಿ ಪಂದ್ಯಾವಳಿಗಳು ನಡೆಯಲಿದ್ದು, ಫೆ.5ರಂದು ಜೆಎಸ್‌ಎಸ್ ಎಸ್‌ಟಿಯು ಮೈದಾನದಲ್ಲಿ ಅಂತಿಮ ಪಂದ್ಯ ನಡೆಯಲಿದೆ. ಸಂಪೂರ್ಣವಾಗಿ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿವಿ ಈ ಪಂದ್ಯಾವಳಿ ಆಯೋಜನೆ ಹೊಣೆ ಹೊತ್ತಿದೆ ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ಸಂಘಟನಾ ಕಾರ್ಯದರ್ಶಿ ಡಾ.ಸಿ.ರೇವಣ್ಣ ಉಪಸ್ಥಿತರಿದ್ದರು.

ಜ.28, ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ

ಮೈಸೂರು,ಜ.24(ಜಿಎ)–ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ರಾಜ್ಯ ವಿಶೇಷ ಶಿಕ್ಷಕರು, ಹಾಗೂ ಶಿಕ್ಷಕೇತರರ ಸಂಘ, ರಾಜ್ಯ ವಿಕಲಚೇತನರ ಸೇವಾ ಸಂಸ್ಥೆಗಳ ಒಕ್ಕೂಟದಿಂದ ಜ.28ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಸಾರ್ವತ್ರಿಕ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಪದಾಧಿಕಾರಿ ಜಿ.ಸಿ. ಚಿರಣ್‌ಕುಮಾರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ವಿವಿಧ ಜಿಲ್ಲೆಗಳಿಂದ ಸುಮಾರು 2,500 ಮಂದಿ ಪ್ರತಿಭಟನೆಯಲ್ಲಿ ಪಾಲ್ಗೊಳ್ಳುತ್ತಿದ್ದು, ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು, ವಿಶೇಷ ಶಾಲೆಗಳ ಅನುದಾನ ಶೇ.40ರಷ್ಟು ಹೆಚ್ಚಿಸಬೇಕು, ಸರ್ವೋಚ್ಚ ನ್ಯಾಯಾಲಯ ನೀಡಿರುವ ಆದೇಶದ ಪ್ರಕಾರ ವಿಶೇಷ ಶಾಲೆಗಳ ವಿಶೇಷ ಶಿಕ್ಷಕರಿಗೆ ಪೂರ್ಣ ಪ್ರಮಾಣದ ಆರ್ಥಿಕ ಸೌಲಭ್ಯ ಒದಗಿಸಬೇಕು. ವಿಶೇಷ ಶಾಲೆಗಳಿಗೆ ನೀಡುವ ಅನುದಾನವನ್ನು ಪ್ರತಿ ವರ್ಷ 2 ಕಂತುಗಳಲ್ಲಿ ನೀಡಬೇಕು ಎಂಬ ಮೊದಲಾದ ಬೇಡಿಕೆ ಈಡೇರಿಸುವಂತೆ ಸರ್ಕಾರವನ್ನು ಆಗ್ರಹಿಸಲಾಗುತ್ತಿದೆ ಎಂದರು. ಗೋಷ್ಠಿಯಲ್ಲಿ ಸುಧಾಕರ್, ಪಾಂಡು, ನವೀನ್ ಇದ್ದರು.

ದಾವೋಸ್‌ನ ವಿಶ್ವ ಆರ್ಥಿಕ ವೇದಿಕೆ ಸಮಾವೇಶ

ವಿವಿಧ ವಲಯಗಳಲ್ಲಿ 13070 ಕೋಟಿ ವಾಗ್ದಾನ

- ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಮಾಹಿತಿ
- ಐದು ದಿನ 45ಕ್ಕೂ ಅಧಿಕ ಸಭೆ–ಸಮಾರಂಭ, ಸಮಾಲೋಚನೆ ಫಲಶ್ರುತಿ



ದಾವೋಸ್‌ನಲ್ಲಿ ನಡೆದ ವಿಶ್ವ ಆರ್ಥಿಕ ವೇದಿಕೆ ಸಮಾವೇಶದಲ್ಲಿ ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಹಾಗೂ ಕೈಗಾರಿಕಾ ಇಲಾಖೆ ಸಿಬ್ಬಂದಿ ಭಾಗವಹಿಸಿದ್ದರು.

ಬೆಂಗಳೂರು, ಜ.24(ಕೆಎಂಶಿ)–ಸ್ವಿಟ್ಜರ್ಲೆಂಡ್‌ನ ದಾವೋಸ್‌ನಲ್ಲಿ ನಡೆದ ವಿಶ್ವ ಆರ್ಥಿಕ ವೇದಿಕೆ ಸಮಾವೇಶದಲ್ಲಿ ವೈಮಾಂತರಿಕ್ಷ, ಆಹಾರ ಸಂಸ್ಕರಣೆ, ಡೇಟಾ ಕೇಂದ್ರ ಡಿಜಿಟಲ್ ಮೂಲ ಸೌಲಭ್ಯ ಶುದ್ಧ ಇಂಧನ ಸೇರಿದಂತೆ ವಿವಿಧ ವಲಯಗಳಲ್ಲಿ 13,070 ಕೋಟಿ ರೂ. ಹೂಡಿಕೆ ವಾಗ್ದಾನಕ್ಕೆ ಅಧಿಕೃತ ಮುದ್ರೆ ದೊರೆತಿದೆ ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ತಿಳಿಸಿದ್ದಾರೆ.

ಕೃತಕ ಬುದ್ಧಿಮತ್ತೆ, ಜಾಗತಿಕ ಸಾಮರ್ಥ್ಯ ಕೇಂದ್ರಗಳ (ಜಿಸಿಸಿ) ಸ್ಥಾಪನೆ, ಸಂಶೋಧನೆ, ಸುಸ್ಥಿರ ನಗರಾಭಿವೃದ್ಧಿ ಕ್ಷೇತ್ರಗಳಲ್ಲಿ ಕರ್ನಾಟಕವನ್ನು ದೇಶದ ಪ್ರಮುಖ ತಾಣವಾಗಿ ವಿಶ್ವದ ಗಮನ ಸೆಳೆಯುವಲ್ಲಿ ಸತತ 5 ದಿನ ನಡೆಸಿದ 45ಕ್ಕೂ ಹೆಚ್ಚು ಸಭೆ ಸಮಾಲೋಚನೆಗಳು ಫಲ ನೀಡಿವೆ ಎಂದಿದ್ದಾರೆ.

ದಾವೋಸ್‌ನಿಂದ ಮರಳಿದ ನಂತರ ನೀಡಿರುವ ಹೇಳಿಕೆಯಲ್ಲಿ ಅವರು, ಉದ್ಯಮ ದಿಗ್ಗಜರ ಜೊತೆಗಿನ ಸಮಾಲೋಚನೆಗಳು ರಾಜ್ಯಕ್ಕೆ ಹೊಸ ಬಂಡವಾಳ ಹೂಡಿಕೆಗಳ ಹರಿವಿಗೆ ಗಟ್ಟಿ ಬುನಾದಿ ಹಾಕಿದ್ದು, ಈಗಾಗಲೇ ಜಾರಿಯಲ್ಲಿರುವ ಯೋಜನೆಗಳಿಗೂ ವೇಗ ನೀಡುವುದಕ್ಕೂ ಉತ್ತೇಜನ ನೀಡಲಾಗಿದೆ ಎಂದಿದ್ದಾರೆ.

ಜಾಗತಿಕ ವಾಣಿಜ್ಯ ಹಾಗೂ ಕೈಗಾರಿಕಾ ಪರಿವರ್ತನೆಯ ಮುಂದಿನ ಹಂತದಲ್ಲಿ ಕರ್ನಾಟಕ ಸ್ಪರ್ಧಾತ್ಮಕವಾಗಿ ಸ್ಥಾನ ಬಲಪಡಿಸಿಕೊಳ್ಳಲು ನೆರವಾಗಿವೆ. ರಾಜ್ಯದಲ್ಲಿರುವ ಉದ್ಯಮ ಸ್ನೇಹಿ ಕೈಗಾರಿಕಾ ವಾತಾವರಣ, ಪರಿಣಿತ ಮಾನವ ಸಂಪನ್ಮೂಲ ಲಭ್ಯತೆಯನ್ನು ಜಾಗತಿಕ ಉದ್ಯಮಿಗಳು ಮುಕ್ತಕಂಠದಿಂದ ಪ್ರಶಂಸಿಸಿರುವುದು ರಾಜ್ಯ ಸರ್ಕಾರದ ದೂರದೃಷ್ಟಿಯ ಕೈಗಾರಿಕಾ ಸ್ನೇಹಿ ಉಪಕ್ರಮಗಳಿಗೆ ನಿದರ್ಶನವಾಗಿದೆ.

ಬಂಡವಾಳ ಹೂಡಿಕೆ, ಕೈಗಾರಿಕೆಗಳ ಸ್ಥಾಪನೆ, ವಿಸ್ತರಣಾ ಚಟುವಟಿಕೆಗಳಿಗೆ ಕರ್ನಾಟಕ ಜಾಗತಿಕವಾಗಿ ಅಚ್ಚುಮೆಚ್ಚಿನ ತಾಣವಾಗಿರುವುದನ್ನು ಮನದಟ್ಟು ಮಾಡಿಕೊಟ್ಟಿದ್ದು, ರಾಜ್ಯ ಸರ್ಕಾರದ ಕೈಗಾರಿಕಾ ಸ್ನೇಹಿ ನೀತಿಗಳನ್ನೂ ವಿವರಿಸಿ, ರಾಜ್ಯದಲ್ಲಿ ಹೂಡಿಕೆಗೆ ಮನವಿ ಮಾಡಿಕೊಂಡಿದ್ದೇವೆ.

ಮರುಬಳಕೆ ಇಂಧನ ವಲಯದ ಆರ್.ಪಿ.ಸಂಜೀವ್ ಗೊಯೆಂಕಾ ಉದ್ಯಮ ಸಮೂಹ ಮುಂದಿನ 3 ವರ್ಷದಲ್ಲಿ ವಿಜಯಪುರ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ 10,500 ಕೋಟಿ ರೂ. ಬಂಡವಾಳ ಹೂಡಿಕೆ ಮಾಡಲಿದ್ದು, ಇದರಿಂದ ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಹಾಗೂ ಉತ್ತರ ಕರ್ನಾಟಕದಲ್ಲಿ ಪ್ರಗತಿ ಸಾಧ್ಯವಾಗಲಿದೆ.

ಸಿಂಗಾಪುರ ಮೂಲದ ಕಂಪನಿಗಳನ್ನು ಆಕರ್ಷಿಸಲು ಸಿಂಗಪುರ ಪಾರ್ಕ್ ಸ್ಥಾಪನೆ ಸಂಬಂಧ ಸಿಂಗಪುರ ಆರ್ಥಿಕ ಅಭಿವೃದ್ಧಿ ಮಂಡಳಿ ಜೊತೆ ಚರ್ಚಿಸಲಾಗಿದೆ. ದೇಶದ ಆಹಾರ ಸಂಸ್ಕರಣಾ ವಲಯದಲ್ಲಿ ಕೋಕಾ ಕೋಲಾ ಹೂಡಿಕೆ ಮಾಡಲಿರುವ 25,760 ಕೋಟಿ ರೂ. ಬಂಡವಾಳದಲ್ಲಿನ ಗಮನಾರ್ಹ ಮೊತ್ತವನ್ನು ರಾಜ್ಯಕ್ಕೆ ಆಕರ್ಷಿಸಲು ಗರಿಷ್ಠ ಪ್ರಯತ್ನ ಮಾಡಲಾಗಿದೆ. ಜಾಗತಿಕ ದೈತ್ಯ ಕಂಪನಿಗಳಾದ ನೋಕಿಯಾ, ಅಮೆರಿಕದ ವಾಸ್ಟ್ ಸ್ಪೇಸ್ ಕಂಪನಿ, ಯುಎಇಯ ಕ್ರೆಸೆಂಟ್ ಎಂಟರ್‌ಪ್ರೈಸಸ್, ವೊಯೆಜರ್ ಟೆಕ್ನಾಲಜೀಸ್ ರಾಜ್ಯದಲ್ಲಿ ಬಂಡವಾಳ ಹೂಡಿಕೆಗೆ ಒಲವು ತೋರಿವೆ.

ಡೇಟಾ ಸೆಂಟರ್ ಸ್ಥಾಪನೆ: ಇದುವರೆಗೆ ರಾಜ್ಯದಲ್ಲಿ ಸುಮಾರು 13,000 ಕೋಟಿ ರೂ. ಮೊತ್ತ ಹೂಡಿಕೆ ಮಾಡಿರುವ ಭಾರ್ತಿ ಎಂಟರ್‌ಪ್ರೈಸಸ್, ಹೊಸ ಡೇಟಾ ಸೆಂಟರ್ ಸ್ಥಾಪನೆಗೆ ಆಸಕ್ತಿ ತೋರಿದ್ದು, ಡಿಜಿಟಲ್ ಮೂಲ ಸೌಕರ್ಯಕ್ಕೆ ಇನ್ನಷ್ಟು ಬಲ ಬರಲಿದೆ.

ರಾಜ್ಯದಲ್ಲಿ ಹೂಡಿಕೆ ಅವಕಾಶಗಳ ಬಗ್ಗೆ ಫೋರ್ಜಿಂಗ್ ಮತ್ತು ಪ್ರಿಸಿಷನ್ ಎಂಜಿನಿಯರಿಂಗ್ ಕಂಪನಿ ಭಾರತ್ ಫೋರ್ಜ್ ಲಿಮಿಟೆಡ್, ಮಾಹಿತಿ ಪಡೆದುಕೊಂಡಿದೆ. ಫ್ರಾನ್ಸ್ ಮೂಲದ ಮಿಸ್ಟ್ರಾಲ್ ಎಐ, ಬೆಂಗಳೂರಿನಲ್ಲಿ ಹಂತ ಹಂತವಾಗಿ ಸಂಶೋಧನೆ ಹಾಗೂ ಅಭಿವೃದ್ಧಿ ಕೇಂದ್ರ ಸ್ಥಾಪಿಸಲು ಉತ್ಸುಕತೆ ತೋರಿದೆ.

ತಂಬಾಕು ಮತ್ತು ನಿಕೋಟಿಕ್ ಉತ್ಪನ್ನಗಳಿಗೆ ಖ್ಯಾತವಾಗಿರುವ ಅಮೆರಿಕ ಮೂಲದ ಫಿಲಿಪ್ ಮಾರಿಸ್ ಕಂಪನಿ ರಾಜ್ಯದಲ್ಲಿ ಧೂಮರಹಿತ ಉತ್ಪನ್ನ ತಯಾರಿಸುವ ಇಂಗಿತ ವ್ಯಕ್ತಪಡಿಸಿದೆ.

ದೂರಸಂಪರ್ಕ ತಂತ್ರಜ್ಞಾನ ಕ್ಷೇತ್ರದ ಜಾಗತಿಕ ದೈತ್ಯ ಸಂಸ್ಥೆಗಳಲ್ಲಿ ಒಂದಾದ ನೋಕಿಯಾ ಕಾರ್ಪೋರೇಷನ್, ರಾಜ್ಯದಲ್ಲಿ ಜಾಗತಿಕ ಸಾಮರ್ಥ್ಯ ಕೇಂದ್ರ (ಜಿಸಿಸಿ) ಮತ್ತು ಸಂಶೋಧನಾ ಕೇಂದ್ರಗಳನ್ನು ಸ್ಥಾಪಿಸಲು ಒಲವು ವ್ಯಕ್ತಪಡಿಸಿದೆ.

ಬೆಂಗಳೂರು ಆಚೆಗಿನ ನಗರಗಳು ಸ್ವಯಂ ಸುಸ್ಥಿರ ನಗರಗಳಾಗಿ ಬೆಳೆಯುವುದಕ್ಕೆ ರಾಜ್ಯ ಸರ್ಕಾರದ ಆದ್ಯತೆಗೆ ಪೂರಕವಾಗಿ, 2ನೇ ಸ್ತರದ ನಗರಗಳಲ್ಲಿ ಕೈಗಾರಿಕಾ ವಿಸ್ತರಣೆಗೆ ಟೆಕ್ ಮಹೀಂದ್ರಾ, ಡೇಟಾ ಕೇಂದ್ರಗಳ ಸ್ಥಾಪನೆಗೆ ಭಾರ್ತಿ ಎಂಟರ್‌ಪ್ರೈಸಸ್ ಮತ್ತು ಸಿಫಿ ಟೆಕ್ನಾಲಜೀಸ್ ಆಸಕ್ತಿ ತೋರಿವೆ.

ಲಂಡನ್‌ನ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲಿ ಒಂದಾದ ಇಂಪಿರಿಯಲ್ ಕಾಲೇಜ್, ದಾಬಸ್‌ಪೇಟೆ–ದೊಡ್ಡಬಳ್ಳಾಪುರ ಮಧ್ಯೆ ತಲೆ ಎತ್ತಲಿರುವ ಕ್ವಿನ್ ಸಿಟಿಯಲ್ಲಿ ಸಂಶೋಧನಾ ಹಾಗೂ ಅಭಿವೃದ್ಧಿ ಕೇಂದ್ರ ಆರಂಭಿಸುವ ಕುರಿತು ಮಾಹಿತಿ ಹಂಚಿಕೊಂಡಿದೆ. ಕ್ವಿನ್ ಸಿಟಿ ಯೋಜನೆ ಭಾಗವಾಗುವ ಕುರಿತು ಸೈಬರ್ ಸುರಕ್ಷತೆಯ ಜಾಗತಿಕ ಕಂಪನಿ ಕ್ಲೌಡ್‌ಫ್ಲೇರ್ ಆಲೋಚನೆ ಹೊಂದಿದೆ.

ರಾಜ್ಯ ಸರ್ಕಾರದ ಜೊತೆ ಪಾಲುದಾರಿಕೆ ಒಪ್ಪಂದಕ್ಕೆ ಅಮೆರಿಕದ ವೈಮಾಂತರಿಕ್ಷ ಕಂಪನಿ ವೊಯೆಜರ್ ಟೆಕ್ನಾಲಜೀಸ್, ಬಾಹ್ಯಾಕಾಶ ತಂತ್ರಜ್ಞಾನ ಕಂಪನಿ ವಾಸ್ಟ್ ಸ್ಪೇಸ್ ಕಂಪನಿ ಆಸಕ್ತಿ ವ್ಯಕ್ತಪಡಿಸಿವೆ.

ಯುಎಇ ಮೂಲದ ಬಹುರಾಷ್ಟ್ರೀಯ ಉದ್ಯಮ ಸಮೂಹ ಕ್ರೆಸೆಂಟ್ ಎಂಟರ್‌ಪ್ರೈಸಸ್, ರಾಜ್ಯದ ಉದ್ದಿಮೆ ಹಾಗೂ ಕಂಪನಿಗಳಲ್ಲಿ ಹೂಡಿಕೆ ಮಾಡಲು ಮುಂದೆ ಬಂದಿದೆ. ರಾಜ್ಯದಲ್ಲಿನ ಉದ್ಯಮ ಸ್ನೇಹಿ ಹಾಗೂ ನಾವೀನ್ಯತಾ ವ್ಯವಸ್ಥೆಯ ಸದ್ಬಳಕೆಗೆ ಸ್ವಿಸ್ ಕಂಪನಿಗಳಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ತಿಳಿವಳಿಕೆಯ ಒಪ್ಪಂದ ಪತ್ರಕ್ಕೆ ಅಂಕಿತ ಹಾಕಲಾಗಿದೆ.

ವಹಿವಾಟು ವಿಸ್ತರಣೆ ಕುರಿತು ರಾಜ್ಯ ಸರ್ಕಾರದ ಜೊತೆ ವಿಸ್ತೃತ ಯೋಜನಾ ಪ್ರಸ್ತಾವ ಹಂಚಿಕೊಳ್ಳುವುದಾಗಿ ನ್ಯಾಚುರಲ್ ಫೈಬರ್ ವೆಲ್ಡಿಂಗ್ ತಿಳಿಸಿದೆ ಎಂದು ಸಚಿವರು ತಿಳಿಸಿದ್ದಾರೆ.

ಕಾರ್ಲ್ಸ್‌ಬರ್ಗ್ ಗ್ರೂಪ್‌ನಿಂದ ನಂಜನಗೂಡಲ್ಲಿ 350 ಕೋಟಿ ಘಟಕ

ಜಾಗತಿಕ ಮದ್ಯ ತಯಾರಿಕಾ ಕಂಪನಿ ಕಾರ್ಲ್ಸ್‌ಬರ್ಗ್ ಗ್ರೂಪ್ ನಂಜನಗೂಡಿನಲ್ಲಿನ 350 ಕೋಟಿ ರೂ. ವೆಚ್ಚದಲ್ಲಿ ಬಾಟ್ಲಿಂಗ್ ಘಟಕ ಸ್ಥಾಪಿಸುವ ಬದ್ಧತೆ ಪುನರುಚ್ಚರಿಸಿದೆ. ಸ್ನೈಡರ್ ಎಲೆಕ್ಟ್ರಿಕ್, ಐಟಿ ವಹಿವಾಟು ಸೇರಿದಂತೆ 1,520 ಕೋಟಿ ರೂ. ಹೂಡಿಕೆಗೆ ಮುಂದೆ ಬಂದಿದೆ. ಪವನ ವಿದ್ಯುತ್ ಕ್ಷೇತ್ರದಲ್ಲಿ ಬಳಕೆಯಾಗುವ ಟರ್ಬೈನ್ ಬ್ಲೇಡ್ ತಯಾರಿಕೆಯನ್ನು ಈಗಾಗಲೇ ಕುಷ್ಟಗಿಯಲ್ಲಿ ಆರಂಭಿಸಿರುವ ಐನಾಕ್ಸ್ ಜಿಎಫ್‌ಎಲ್ ಕಂಪನಿ, ಪವನ ವಿದ್ಯುತ್‌ಗೆ ಬೇಕಾದ ದೈತ್ಯ ಗೋಪುರಗಳು ಮತ್ತು ಸೌರಫಲಕ ತಯಾರಿಕೆಗೆ 400 ಕೋಟಿ ರೂ. ವೆಚ್ಚ ಮಾಡುತ್ತಿದೆ. ಕಂಪನಿ ಈಗಾಗಲೇ ರಾಜ್ಯದಲ್ಲಿ 10 ಸಾವಿರ ಕೋಟಿ ರೂ. ಹೂಡಿಕೆ ಮಾಡಿದೆ. ಟಿವಿಎಸ್ ಕಂಪನಿಗೆ ಬಿಡಿಭಾಗ ಪೂರೈಸುವ ಮೈಸೂರು ಘಟಕದ ವಿಸ್ತರಣೆಗೆ ಬೆಲ್‌ರೈಸ್ ಇಂಡಸ್ಟ್ರೀಸ್ 300 ಕೋಟಿ ರೂ. ಹೂಡಿಕೆ ಮಾಡುತ್ತಿದೆ. –ಎಂ.ಬಿ.ಪಾಟೀಲ್

ಫೆ.6, ಮೈಸೂರಿಂದ ಧರ್ಮಸ್ಥಳಕ್ಕೆ ಪಾದಯಾತ್ರೆ

ಯಾತ್ರಾರ್ಥಿಗಳಿಗೆ ಮಾಲಾಧಾರಣೆ, ಪ್ರಸಾದ ವಿನಿಯೋಗ

ಮೈಸೂರು,ಜ.24(ಜಿಎ)–ಮೈಸೂರಿನ ಕುಡುಮ ಶ್ರೀಕ್ಷೇತ್ರ ಧರ್ಮಸ್ಥಳ ಪಾದಯಾತ್ರೆ ಸೇವಾ ಟ್ರಸ್ಟ್‌ನಿಂದ ಧರ್ಮಸ್ಥಳಕ್ಕೆ 6ನೇ ವರ್ಷದ ಪಾದಯಾತ್ರೆ ಹಮ್ಮಿಕೊಂಡಿದ್ದು ಫೆ.6ರಂದು ಸಂಜೆ 7ಕ್ಕೆ ಇಲ್ಲಿನ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಿಂದ ಚಾಲನೆ ನೀಡಲಾಗುವುದು ಎಂದು ಟ್ರಸ್ಟ್ ಅಧ್ಯಕ್ಷ ಎಂ.ಕೆ.ಮಹದೇವ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚಾಲನೆ ಕಾರ್ಯಕ್ರಮದಲ್ಲಿ ಯಾತ್ರಾರ್ಥಿಗಳಿಗೆ ಮಾಲಾಧಾರಣೆ, ಪ್ರಸಾದ ವಿನಿಯೋಗ ನಡೆಯಲಿದೆ. ಮುಖ್ಯ ಅತಿಥಿಗಳಾಗಿ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ತನ್ವೀರ್ ಸೇಠ್, ಟ್ರಸ್ಟ್ ಕಾನೂನು ಸಲಹೆಗಾರ ಓ ಶಾಮ್ ಭಟ್, ಶಿಲ್ಪಿ ಅರುಣ್ ಯೋಗಿರಾಜ್ ಪಾಲ್ಗೊಳ್ಳುವರು ಎಂದರು.

ಹತ್ತು ದಿನಗಳು ಪಾದಯಾತ್ರೆ ನಡೆಯಲಿದ್ದು, ಫೆ.15ರಂದು ಮಹಾಶಿವರಾತ್ರಿ ವೇಳೆಗೆ ಧರ್ಮಸ್ಥಳ ತಲುಪಲಿದ್ದೇವೆ. ಪಾದಯಾತ್ರೆಗೆ ಆಗಮಿಸುವವರಿಗೆ ಅಥವಾ ಯಾತ್ರಾರ್ಥಿಗಳಿಗೆ ಧನ, ಧಾನ್ಯ ಸಹಕಾರ ಮಾಡಲು ಇಚ್ಛಿಸುವವರು 99022 39766, 99865 81021 ಸಂಪರ್ಕಿಸಬಹುದು. ಸುದ್ದಿಗೋಷ್ಠಿಯಲ್ಲಿ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಎಂ.ಅಶೋಕ್ ಕುಮಾರ್, ಉಪಾಧ್ಯಕ್ಷ ಚಿನ್ನಸ್ವಾಮಿ, ಉಪ ಖಜಾಂಚಿ ಮುರುಗೇಶ್, ಸಹಕಾರ್ಯದರ್ಶಿ ಸೂರ್ಯಕುಮಾರ್, ಸದಸ್ಯ ಸಿ.ಸುರೇಶ್, ಮಹಿಳಾ ಸದಸ್ಯರಾದ ರಾಜೇಶ್ವರಿ, ಪಲ್ಲವಿ, ಲತಾ ಇನ್ನಿತರರು ಉಪಸ್ಥಿತರಿದ್ದರು.

ಮಂಗಳೂರಲ್ಲಿ ಸಹಕಾರ ಮಂಡಳದ ವಿಚಾರ ಸಂಕಿರಣ



ಮಂಗಳೂರಿನಲ್ಲಿ ರಾಜ್ಯ ಮಟ್ಟದ ಸಹಕಾರ ಮಹಾಮಂಡಳದ ವತಿಯಿಂದ ಆಯೋಜಿಸಿದ್ದ ವಿಚಾರ ಸಂಕಿರಣದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಸಹಕಾರ ಬ್ಯಾಂಕ್ ಅಧ್ಯಕ್ಷ ಡಾ.ಎಂ.ಎನ್. ರಾಜೇಂದ್ರಕುಮಾರ್, ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್‌ನ ಅಧ್ಯಕ್ಷ ಜೆ.ಯೋಗೇಶ್, ಉಪಾಧ್ಯಕ್ಷ ಟಿ.ರವಿ, ನಿರ್ದೇಶಕರಾದ ರಾಜಕೀಯ ರವಿಕುಮಾರ್, ಪಡುವಾರಹಳ್ಳಿ ಎಂ.ರಾಮಕೃಷ್ಣ, ಹರೀಶ್‌ಕುಮಾರ್, ಆರ್.ಸೋಮಣ್ಣ, ಕಾರ್ಯದರ್ಶಿ ಕೆ.ಹರ್ಷಿತ್‌ಗೌಡ ಇನ್ನಿತರರು ಭಾಗವಹಿಸಿದ್ದರು.

ನಿಧನ




ಸೈಯದ್ ದಸ್ತಗಿರ್

ಮೈಸೂರು, ಜ. 24– ಮೈಸೂರಿನ ಕರಕುಶಲ ವಸ್ತುಗಳ ವ್ಯಾಪಾರಿ ಹಾಗೂ ಮಂಡಿ ಮೊಹಲ್ಲಾ ಆನೆಗುಂಡಿ ನಿವಾಸಿ ಸೈಯದ್ ದಸ್ತಗಿರ್ (64) ಶುಕ್ರವಾರ ನಿಧನರಾದರು.

ಮೃತರು ಪತ್ನಿ, ಮೂವರು ಪುತ್ರಿಯರು, ಓರ್ವ ಪುತ್ರ ಸೈಯದ್ ಸೈಫುಲ್ಲಾ, ಮೊಮ್ಮಕ್ಕಳು ಮತ್ತು ಅಪಾರ ಬಂಧುಗಳು, ಸ್ನೇಹಿತರು ಹಾಗೂ ಹಿತೈಷಿಗಳನ್ನು ಅಗಲಿದ್ದಾರೆ.

ಈ ಸಂಬಂಧ ಜ. 24 ಮಧ್ಯಾಹ್ನ 1.30 ಗಂಟೆಗೆ ಝೊಹರ್ ಸಲಾತ್ ನಂತರ ಈದಿಗಾ ಮಸೀದಿ, ಮಿಷನ್ ಆಸ್ಪತ್ರೆ ರಸ್ತೆ, ಮೈಸೂರು ಇಲ್ಲಿ ನಮಾಜ್–ಎ–ಜನಾಜಾ (ಅಂತ್ಯಕ್ರಿಯೆಯ ಪ್ರಾರ್ಥನೆ) ನೆರವೇರಿತು. ಬಳಿಕ ಮೈಸೂರಿನ ಟಿಪ್ಪು ಸರ್ಕಲ್ ಬಳಿ ಇರುವ ಮುಸ್ಲಿಮರ ರುದ್ರಭೂಮಿ ಗೇಟ್ ನಂ.5ರಲ್ಲಿ ಅಂತ್ಯ ಸಂಸ್ಕಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಹದೇವ ನಾಯಕ



ಮೈಸೂರಿನ ಲಷ್ಕರ್ ಮೊಹಲ್ಲಾದ ಕುಂಬಾರಗೇರಿ ನಿವಾಸಿ ಮಹದೇವನಾಯಕ (ದೇವರ ಗುಡ್ಡಪ್ಪ) ಶುಕ್ರವಾರ ರಾತ್ರಿ ನಿಧನರಾದರು. ಅವರಿಗೆ 95 ವರ್ಷ ವಯಸ್ಸಾಗಿತ್ತು ಶ್ರೀಯುತರು ಪತ್ನಿ ಗೌರಮ್ಮ, ಐವರು ಪುತ್ರರು, ಮೂವರು ಪುತ್ರಿಯರು ಮತ್ತು 18 ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಶನಿವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಂ.ಎಸ್.ಭಾರತಿ ನಿಧನ



ಮೈಸೂರು,ಜ.24– ಮೈಸೂರಿನ ಜೆಪಿ ನಗರದ ಕೈಗಾರಿಕೆ ಬಡಾವಣೆ 3ನೇ ಹಂತದ ನಿವಾಸ ಎಂ.ಎಸ್.ಭಾರತಿ (55) ಅನಾರೋಗ್ಯದಿಂದ ಗುರುವಾರ ನಿಧನರಾದರು. ಮೃತರು ಪತಿ ಶ್ರೀನಿವಾಸ, ಪುತ್ರ ವಿಷ್ಣು, ಸಹೋದರ ಎಂ.ಎಸ್.ಕಿರಣ್ ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ. ಚಾಮುಂಡಿಬೆಟ್ಟದ ತಪ್ಪಲಿನ ಸ್ಮಶಾನದಲ್ಲಿ ಶುಕ್ರವಾರ ಮೃತರ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

25.1.2026 ಭಾನುವಾರ, ಮಳೆ ನಕ್ಷತ್ರ: ಶ್ರವಣ 24.01.2026 ರಿಂದ 05.02.2026
ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಶುಕ್ಲ ಪಕ್ಷ,
ತಿಥಿ: ಸಪ್ತಮಿ, ನಕ್ಷತ್ರ: ರೇವತಿ, ರಾಹುಕಾಲ: ಸಂಜೆ 4.30 ರಿಂದ 6 ರವರೆಗೆ

- **ಕಾವೇರಿ ಆಯುರ್ವೇದಿಕ್ ಆಸ್ಪತ್ರೆ:** ರಕ್ತ ಪ್ರದರ, ದೃಷ್ಟಿ ಮತ್ತು ನೇತ್ರ ಪರೀಕ್ಷಾ ಶಿಬಿರ, ಮೋತಿಯಾ ಬಿಂದು (Cataract) ತಪಾಸಣೆ ಹಾಗೂ ಆರಂಭಿಕ ಹಂತದ ನಿರ್ವಹಣೆ, ದೃಷ್ಟಿದೋಷಗಳ (Retrative errors) ತಿದ್ದುಪಡಿ, ಅಂಬ್ಲಿಯೋಪಿಯಾ ನಿರ್ವಹಣೆ, ಮಧುಮೇಹ ರೆಟಿನೋಪತಿ ಬಗ್ಗೆ ಜಾಗೃತಿ ಹಾಗೂ ತಪಾಸಣೆ, ರೆಟಿನೈಟಿಸ್ ಪಿಗ್ಮೆಂಟೋಸಾ ನಿರ್ವಹಣೆ, ಕಂಪ್ಯೂಟರ್ ವಿಷನ್ ಸಿಂಡ್ರೋಮ್ ನಿರ್ವಹಣೆ, ಸ್ಥಳ: ಕಾವೇರಿ ಆಯುರ್ವೇದಿಕ್ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10ರಿಂದ.
- **ರೋಟರಿ ಜಯಪ್ರಕಾಶನಗರ ಚಾರಿಟಬಲ್ ಟ್ರಸ್ಟ್, ಜೆ.ಪಿ.ನಗರ ಸ್ಪೋರ್ಟ್ಸ್ ಕ್ಲಬ್, ಲಯನ್ಸ್ ಕ್ಲಬ್ ಜೆ.ಪಿ. ನಗರ, ಸ್ನೇಹನಿಧಿ ಪತ್ತಿನ ಸಹಕಾರ ಸಂಘ, ಜೆ.ಪಿ.ನಗರ, ಕೊಯಮತ್ತೂರು ಅರವಿಂದ ಕಣ್ಣಿನ ಆಸ್ಪತ್ರೆ :** ಕಣ್ಣಿನ ಉಚಿತ ತಪಾಸಣಾ ಹಾಗೂ ಶಸ್ತ್ರ ಚಿಕಿತ್ಸೆ ಶಿಬಿರ, ಸ್ಥಳ: ಜೆ.ಪಿ.ನಗರ ಸ್ಪೋರ್ಟ್ಸ್ ಕ್ಲಬ್ ಆವರಣ, ಬೆಳಗ್ಗೆ 8 ರಿಂದ.
- **ಗಾನಭಾರತೀ :** ಬೆಳಗ್ಗೆ 10 ರಿಂದ ತ್ಯಾಗರಾಜ ಆರಾಧನೆ, ಮೈಸೂರಿನ ಸುರಭಿ ಗಾನಕಲಾ ಮಂದಿರದ ವಿದ್ಯಾರ್ಥಿನಿಯರು ಮತ್ತು ವೃಂದದವರಿಂದ ತ್ಯಾಗರಾಜರ ಉತ್ಸವ ಸಂಪ್ರದಾಯ ಮತ್ತು ದಿವ್ಯನಾಮ ಕೃತಿಗಳ ಗಾಯನ, ಬೆಳಗ್ಗೆ 11.30 ರಿಂದ ವಿದುಷಿಯರಿಂದ ಪಂಚರತ್ನ ಕೃತಿಗಳ ಗಾಯನ, ಸ್ಥಳ: ಗಾನಭಾರತೀ ಸಭಾಂಗಣ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ.
- **ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್ :** ಉತ್ತರಾಯಣ, ಸ್ಥಳ: ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್, ವಿಜಯನಗರ 1ನೇ ಹಂತ, ಸಂಜೆ 4ಕ್ಕೆ.
- **ಪ್ರಿಯದರ್ಶನ ಸಾಂಸ್ಕೃತಿಕ ವೇದಿಕೆ, ಶ್ರೀರಂಗಪಟ್ಟಣ :** ಪ್ರಿಯದರ್ಶನ ಸಾಂಸ್ಕೃತಿಕ ವೇದಿಕೆ ಅಧ್ಯಕ್ಷ ವಿದ್ವಾನ್ ಗ.ನಾ. ಭಟ್ಟ, ಅವರಿಂದ ಕಿಷ್ಕಿಂದಕಾಂಡ ಪ್ರವಚನ ಎಂಟನೇ ಸರಣಿ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ ಕೆ. ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ, ಸಂಜೆ 6 ರಿಂದ.
- **ಮೈಸೂರು ನಗರ ಗೋಪಾಲಕರ ಸಂಘ :** ಕರ್ನಾಟಕ ರಾಜ್ಯ ಮಟ್ಟದ ಅಧಿಕ ಹಾಲು ಕರೆಯುವ ಸ್ಪರ್ಧೆ ಬಹುಮಾನ ವಿತರಣಾ ಕಾರ್ಯಕ್ರಮ, ಉಪಸ್ಥಿತರು : ಎಪಿಎಂಸಿ ಮಾಜಿ ಅಧ್ಯಕ್ಷ ಬಸವರಾಜು, ಎಸ್.ಕೆ. ದಿನೇಶ್, ಚೇತನರಾಜ್, ರಾಕೇಶ್ ಪಾಪಣ್ಣ, ಡಾ. ಶ್ರೀಮತಿ ಜ್ಯೋತಿ ಉಮೇಶ್, ಸ್ಥಳ: ಜೆ.ಕೆ. ಮೈದಾನ, ಸಂಜೆ 6.30ಕ್ಕೆ.
- **ಸಾಧನಾ ಮಂದಿರ :** ಅರ್ಥ, ಸಂಕೇತ, ಮಹತ್ವ, ಪ್ರಾಮುಖ್ಯತೆ, ಪ್ರಯೋಜನ ಹಾಗೂ ವಿಧಾನಗಳ ಸಹಿತ ಸರಸ್ವತಿ ಪೂಜೆ ಮಾಡಲು ವಿಶೇಷ ತರಬೇತಿ ಪೂಜ್ಯ ಸ್ವಾಮಿ ಹಂಸಾನಂದರಿಂದ, ಸ್ಥಳ: ಶ್ರೀ ಪ್ರಸನ್ನ ಮಹಾಗಣಪತಿ ದೇವಸ್ಥಾನ, ಗಣಪತಿ ಟೆಂಪಲ್ ರಸ್ತೆ, ಎನ್.ಆರ್. ಮೊಹಲ್ಲಾ, ಸಂಜೆ 6.30 ರಿಂದ.
- **ಅಂತರರಾಷ್ಟ್ರೀಯ ಲಯನ್ಸ್ ಸಂಸ್ಥೆ :** ಪ್ರಾಂತೀಯ ಸಮ್ಮೇಳನ, ಉದ್ಘಾಟನೆ : ಶಾಸಕ ಜಿ.ಟಿ. ದೇವೇಗೌಡ, ಮುಖ್ಯ ಅತಿಥಿಗಳು : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಹಿರಿಯ ಪತ್ರಕರ್ತ ರವಿ ಹೆಗ್ಡೆ, ಪ್ರಾಂತೀಯ ಅಧ್ಯಕ್ಷ ಲಯನ್ ಬಿ.ಜೆ. ಮನು, ಸ್ಥಳ: ಬಿಎಐ ಆಡಿಟೋರಿಯಂ, ವಿಶ್ವೇಶ್ವರನಗರ, ಬೆಳಗ್ಗೆ 8 ರಿಂದ.
- **ನೆರಳು ಚಾರಿಟಬಲ್ ಟ್ರಸ್ಟ್ :** ನೆರಳು ಇ –ನಿಯತಕಾಲಿಕೆ ಬಿಡುಗಡೆ ಮತ್ತು ಡಾ. ಅಮ್ಮಸಂದ್ರ ಸುರೇಶ್ ಅವರ ಮನೆ ಮನಗಳ ಹಣತೆ ಭಾರತರತ್ನ ಡಾ. ಬಿ.ಆರ್. ಅಂಬೇಡ್ಕರ್ ಮತ್ತು ಮಾನವತೆಯ ಮಂತ್ರ ಕೃತಿಗಳ ಲೋಕಾರ್ಪಣೆ, ಅಧ್ಯಕ್ಷತೆ : ಟ್ರಸ್ಟ್ ಗೌರವ ಅಧ್ಯಕ್ಷ ಡಾ. ಎನ್. ಗಂಗಾಧರಪ್ಪ, ಇ–ನಿಯತಕಾಲಿಕೆ ಬಿಡುಗಡೆ : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಕುವೆಂಪು ಅವರ ಕುರಿತ ಲೋಕಾರ್ಪಣೆಗೊಂಡ ಕೃತಿಗಳ ಕುರಿತು : ಹಂಪಿ ಕನ್ನಡ ವಿವಿ ಹಿರಿಯ ಪ್ರಾಧ್ಯಾಪಕ ಪ್ರೊ. ಎನ್. ಚಿನ್ನಸ್ವಾಮಿ ಸೋಸಲೆ, ಮುಖ್ಯ ಅತಿಥಿಗಳು : ಕನ್ನಡ ರಾಜ್ಯೋತ್ಸವ ಪುರಸ್ಕೃತರಾದ ಡಾ.ಎ.ಎಸ್. ಚಂದ್ರಶೇಖರ್, ಉಪಸ್ಥಿತರು : ನೆರಳು ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಡಾ.ಅಮ್ಮಸಂದ್ರ ಸುರೇಶ್, ಸ್ಥಳ: ಹೋಟೆಲ್ ಮಾಲೀಕರ ಸಂಘದ ಸಭಾಭವನ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10.30ಕ್ಕೆ.
- **ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನಲ್ ಥಿಯೇಟರ್ :** ಸೃಜನಾತ್ಮಕ ಬೆಸುಗೆ ಸಂಗೀತ–ನಾಟಕ–ವಿಜ್ಞಾನ, ಡಾ. ಶೇಖರ್ ಶೇಷಾದ್ರಿ ಅವರಿಂದ ರೂಪಕ ಮತ್ತು ತಂತ್ರವಾಗಿ ಪ್ರದರ್ಶನ ಕಲೆ, ಸ್ಥಳ: ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ, ಹಾರ್ಡ್ವಿಕ್ ಶಾಲೆ ಆವರಣ, ಸಂಜೆ 4ಕ್ಕೆ.
- **ತ್ರಯಿನ್ಯಾಸ್ ಶ್ರೀವಿದ್ಯಾ ಫೌಂಡೇಷನ್ :** ಶ್ರೀ ಶ್ಯಾಮಲಾ ನವರಾತ್ರಿ ಮಹೋತ್ಸವ, ಬೆಳಗ್ಗೆ 8.30 ರಿಂದ ಪುಣ್ಯಾಹ, ನಾಂದಿ, ಗಣಪತಿ ಪೂಜಾ, ಮಹಾಸಂಕಲ್ಪ, ಕಲಶ ಸ್ಥಾಪನಾ, ಸಪ್ತಶತಿ ಪಾರಾಯಣ, ಶ್ರೀಚಕ್ರಾರ್ಚನೆ, ನವಾವರಣ ಪೂಜಾ, ಸಂಜೆ 5.30ಕ್ಕೆ ಶ್ರೀ ದ್ವಾದಶ ಸರಸ್ವತಿ ಹೋಮ, ಸ್ಥಳ: ತ್ರಯಿನ್ಯಾಸ್ ಶ್ರೀವಿದ್ಯಾ ಫೌಂಡೇಷನ್, ಜಯಲಕ್ಷ್ಮಿಪುರಂ.
- **ಮೈಸೂರು ಯೋಗ ಒಕ್ಕೂಟ :** 25ನೇ ವಾರ್ಷಿಕೋತ್ಸವ, ರಥಸಪ್ತಮಿ ಅಂಗವಾಗಿ ಸಾಮೂಹಿಕ 108 ಸೂರ್ಯ ನಮಸ್ಕಾರಗಳು, ಸೂರ್ಯಯಜ್ಞ ಸಮಾರಂಭ, ಉದ್ಘಾಟನೆ : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಅಧ್ಯಕ್ಷತೆ : ಒಕ್ಕೂಟದ ಗೌರವ ಅಧ್ಯಕ್ಷ ಡಾ. ಎ.ಎಸ್. ಚಂದ್ರಶೇಖರ್, ಮುಖ್ಯ ಅತಿಥಿಗಳು : ಜಿಎಸ್‌ಎಸ್ ಯೋಗ ಫೌಂಡೇಷನ್ ಅಧ್ಯಕ್ಷ ಶ್ರೀಹರಿ ದ್ವಾರಕನಾಥ್, ಎ.ಪಿ. ನಾಗೇಶ್, ಡಾ. ಕೆ. ರಘುರಾಮ್ ವಾಜಪೇಯಿ, ಒಕ್ಕೂಟದ ಅಧ್ಯಕ್ಷ ಕೆ.ಜಿ. ದೇವರಾಜು, ಸ್ಥಳ: ಕೋಟೆ ಆಂಜನೇಯಸ್ವಾಮಿ ದೇವಸ್ಥಾನ, ಮೈಸೂರು ಅರಮನೆ ಉತ್ತರ ದ್ವಾರ, ಬೆಳಗ್ಗೆ 6ಕ್ಕೆ.
- **ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಶನ್ :** ರಾಜ್ಯ ಮಟ್ಟದ ಸಂಘಟನಾ ಕಾರ್ಯಾಗಾರ, ಉದ್ಘಾಟನೆ : ಕಾರ್ಮಿಕ ಇಲಾಖೆ ನಿವೃತ್ತ ಕಾರ್ಯದರ್ಶಿ ವಸಂತಕುಮಾರ ಹಿಟ್ಟಣಗಿ, ಮುಖ್ಯ ಅತಿಥಿಗಳು : ಕಾಂ. ಅರ್ಕರಾಜ್ ಪಂಡಿತ್, ಕಾಂ. ಬಾಲಕೃಷ್ಣ ಶೆಟ್ಟಿ, ಕಾಂ. ಕೆ. ಮಹಾಂತೇಶ್, ಕಾಂ. ಬಾಲಾಜಿ ರಾವ್, ಕಾಂ. ಜಯರಾಮ್, ಹೆಚ್.ಎಂ. ಬಸವಯ್ಯ, ಬಿ.ಬಿ. ನವೀನ್ ಕುಮಾರ್, ವಿ. ಸೋಮಶೇಖರ್, ಸ್ಥಳ: ನಂಜರಾಜ ಬಹದ್ದೂರ್ ಛತ್ರ, ಬೆಳಗ್ಗೆ 10ಕ್ಕೆ.
- **ದಿ ಅನಾಥಾಲಯ :** ತಾತಯ್ಯ ಸ್ಮಾರಕ ಉಪನ್ಯಾಸ ಮಾಲೆ, ಕರ್ನಾಟಕ ಲೋಕಸೇವಾ ಆಯೋಗದ ನಿವೃತ್ತ ಪ್ರಭಾರಿ ಅಧ್ಯಕ್ಷ ಡಾ. ಬಿ.ಎಸ್. ಕೃಷ್ಣಪ್ರಸಾದ್ ಅವರಿಂದ ಸೃಜನಶೀಲ ಆಡಳಿತ ಕುರಿತು ಉಪನ್ಯಾಸ, ಅಧ್ಯಕ್ಷತೆ : ಅನಾಥಾಲಯ ಅಧ್ಯಕ್ಷ ಸಿ.ವಿ. ಗೋಪಿನಾಥ್, ಸ್ಥಳ: ಅನ್ನಪೂರ್ಣ ನಿಲಯ, ಅನಾಥಾಲಯ, ಬೆಳಗ್ಗೆ 11ಕ್ಕೆ.
- **ಮಹಾಜನ ವಿದ್ಯಾಸಂಸ್ಥೆ:** ಮಹಾ ಅನುಬಂಧ, ಉದ್ಘಾಟನೆ: ಹಿರಿಯ ವಿದ್ಯಾರ್ಥಿ ಪ್ರೊ.ಕೆ.ಎಸ್.ಗಣೇಶ್, ಅಧ್ಯಕ್ಷತೆ: ಮಹಾಜನ ವಿದ್ಯಾಸಂಸ್ಥೆ ಅಧ್ಯಕ್ಷ ಟಿ.ಮುರಳೀಧರ್ ಭಾಗವತ್, ಮುಖ್ಯ ಅತಿಥಿಗಳು: ಶಾಸಕರಾದ ಕೆ.ಹರೀಶ್‌ಗೌಡ, ಜಿ.ಡಿ.ಹರೀಶ್‌ಗೌಡ, ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್, ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಹಿರಿಯ ವಿದ್ಯಾರ್ಥಿ ಎನ್.ರಾಮಾನುಜ, ಪತ್ರಕರ್ತ ರವಿ ಕೋಟಿ, ಶ್ರೀಮತಿ ಅನನ್ಯ ಭಟ್, ಕಾರ್ತಿಕ್ ಮಹೇಶ್, ಶ್ರೀಮತಿ ಶ್ರೇಯಾ ಬಾಬು, ಮನೋಹರ್‌ಗೌಡ, ಡಾ.ಅಮ್ಮ ರಾಮಚಂದ್ರ, ಬಿ.ಎಸ್. ರವಿಕುಮಾರ್, ಡಾ. ಟಿ. ವಿಜಯಲಕ್ಷ್ಮಿ ಮುರಳೀಧರ್, ಎಸ್.ಕೆ.ಸಂಜಯ್, ಸ್ಥಳ: ಶ್ರೀ ಜಗದೀಶ್ ಪ್ರಸಾದ್ ಕ್ರೀಡಾಂಗಣ, ಜಯಲಕ್ಷ್ಮಿಪುರಂ, ಸಂಜೆ 5ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಮಾರುತಿ.ಪಿ.ದಾಸಣ್ಣವರ್, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನಿಮಾ ಯಾನ–ಜನ ಮೆಚ್ಚಿದ ಕನ್ನಡ ಚಿತ್ರಗಳ ನೆನಪಿನ ಮಾಲೆ, ಪ್ರಸ್ತುತಿ : ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ : ಹಂಸಿನಿ.ಎಸ್.ಕುಮಾರ್, ವ್ಯಾಖ್ಯಾನ–ಡಾ.ಹೆಚ್.ಎನ್.ಮಂಜುರಾಜ್, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ–ಡಾ.ಎಸ್.ಎಲ್.ಭೈರಪ್ಪ ಅವರ ದೂರ ಸರಿದರು ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್ ಎಸ್.ಎಸ್., 8.30 ಚಿತ್ರಗೀತೆಗಳು, 9.05 ಗರ್ಭಕಂಠದ ಕ್ಯಾನ್ಸರ್ ಕುರಿತ ಜಾಗೃತಿ ಕಾರ್ಯಕ್ರಮ, ಪ್ರಾಯೋಜಕರು : ಇಂಡಿಯನ್ ಕ್ಯಾನ್ಸರ್ ಸೊಸೈಟಿ, ಕರ್ನಾಟಕ ಛಾಪ್ಟರ್, 9.40 ನಮ್ಮ ಆರೋಗ್ಯ–ವಿಶೇಷ ಮಕ್ಕಳ ಬೆಳವಣಿಗೆಯಲ್ಲಿ ಪೋಷಕರ ಹಾಗೂ ಸಮಾಜದ ಪಾತ್ರ ಈ ಕುರಿತು ಡಾ.ಸೀಮಂತಿನಿ ಶರ್ಮ ಅವರೊಂದಿಗೆ ಸಂವಾದ. ಇವರೊಂದಿಗೆ ಭಾಗವಹಿಸುತ್ತಾರೆ–ಡಾ.ಕುಲದೀಪ್.ಎನ್, 10.00 ಕೇಳಿಗಿಳಿಗಳೇ–ಶ್ರೀ ಪರಮಹಂಸ ವಿದ್ಯಾನಿಕೇತನ ಶಾಲೆಯ ಪುಟ್ಟ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 10.30 ಮಕ್ಕಳ ಮಂಟಪ–ಗಣರಾಜ್ಯೋತ್ಸವ ದಿನಾಚರಣೆಯ ಸಂದರ್ಭದಲ್ಲಿ ಟಿ.ನರಸೀಪುರದ ವಿದ್ಯೋದಯ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 10.55 ಭಾರತದ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ರಾಷ್ಟ್ರದ ಜನತೆಯೊಡನೆ ಹಂಚಿಕೊಳ್ಳುವ ಮನದ ಮಾತು. ನಂತರ ಮನದ ಮಾತಿನ ಕನ್ನಡ ಅನುವಾದ

ಮಧ್ಯಾಹ್ನ: 12.10 ಭಾರತದ ಘನತೆವೆತ್ತ ರಾಷ್ಟ್ರಪತಿಗಳಾದ ಶ್ರೀಮತಿ ದ್ರೌಪದಿ ಮುರ್ಮು ಅವರು ಭಾಗವಹಿಸಲಿರುವ ಭಾರತದ ಚುನಾವಣಾ ಆಯೋಗವು ನವದೆಹಲಿಯ ಮಾಣಿಕ್ ಷಾ ಕೇಂದ್ರದಲ್ಲಿ ಆಯೋಜಿಸಿರುವ 16ನೇ ರಾಷ್ಟ್ರೀಯ ಮತದಾರರ ದಿನದ ಪ್ರಯುಕ್ತ ಏರ್ಪಡಾಗಿರುವ ಕಾರ್ಯಕ್ರಮದ ನೇರಪ್ರಸಾರ, 12.35 ಭಕ್ತಿಗೀತೆಗಳು, 12.45 ಜನಪದ ಸಂಗೀತ : ಚಾಮರಾಜನಗರ ಜಾಲಹಳ್ಳಿ ಹುಂಡಿಯ ಗೌರಮ್ಮ ಮತ್ತು ಸಂಗಡಿಗರಿಂದ ತಾಯವ್ವನ ಹಾಡು, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಲನಚಿತ್ರ ಧ್ವನಿವಾಹಿನಿ–ಜಗಜ್ಯೋತಿ ಬಸವೇಶ್ವರ, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಕರ್ನಾಟಕ ಶಾಸ್ತ್ರೀಯ ಸಂಗೀತ – ಮೈಸೂರು.ಎ.ಚಂದನ್ ಕುಮಾರ್–ವೇಣುವಾದನ, 6.51 ದೇಶಭಕ್ತಿಗೀತೆಗಳು, 7.00 ಗಣರಾಜ್ಯೋತ್ಸವದ ಮುನ್ನ ದಿನದಂದು ಭಾರತದ ಜನತೆಯನ್ನು ಉದ್ದೇಶಿಸಿ ಘನತೆವೆತ್ತ ರಾಷ್ಟ್ರಪತಿಗಳಾದ ಶ್ರೀಮತಿ ದ್ರೌಪದಿ ಮುರ್ಮು ಅವರು ಮಾಡುವ ಪ್ರಸಾರ ಭಾಷಣದ ನೇರ ಪ್ರಸಾರ, 8.00 ಭಾರತದ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ರಾಷ್ಟ್ರದ ಜನತೆಯೊಡನೆ ಹಂಚಿಕೊಳ್ಳುವ ಮನದ ಮಾತಿನ ಕನ್ನಡ ಅನುವಾದದ ಮರುಪ್ರಸಾರ, 8.30 ಹಿಂದಿ ಚಿತ್ರಗೀತೆಗಳು, 9.30 ಗಣರಾಜ್ಯೋತ್ಸವದ ಮುನ್ನ ದಿನದಂದು ಭಾರತದ ಜನತೆಯನ್ನು ಉದ್ದೇಶಿಸಿ ಘನತೆವೆತ್ತ ರಾಷ್ಟ್ರಪತಿಗಳಾದ ಶ್ರೀಮತಿ ದ್ರೌಪದಿ ಮುರ್ಮು ಅವರು ಮಾಡುವ ಪ್ರಸಾರ ಭಾಷಣದ ಕನ್ನಡ ಅನುವಾದ, 10.00 ಸರ್ವಭಾಷಾ ಕವಿ ಸಮ್ಮೇಳನ 2026 ನಂತರ ರಾಷ್ಟ್ರೀಯ ಕವಿ ಸಮ್ಮೇಳನ–2026, ನಿರ್ಮಾಣ – ನಂದನ್ ಕುಮಾರ್, ಪ್ರಸ್ತುತಿ ಮತ್ತು ಸಮಗ್ರ ನಿರ್ವಹಣೆ – ನೂತನ ಎಸ್. ಕದಂ

ಮೈಸೂರು ಮಿತ್ರ ಭಾನುವಾರ 25 ಜನವರಿ 2026

ಹೆಚ್ಚುವರಿ ಪೊಲೀಸ್ ಠಾಣೆ, ಸ್ಯಾಟಲೈಟ್ ಬಸ್ ಟರ್ಮಿನಲ್ ನಿರ್ಮಾಣಕ್ಕೆ 500 ಕೋಟಿ ಅವಶ್ಯ

ಪೊಲೀಸ್ ಆಯುಕ್ತರ ಮೂಲಕ ಸಿಎಂ ಸಿದ್ದರಾಮಯ್ಯರಿಗೆ ಮನವಿ ಸಲ್ಲಿಸಿದ ಕಾಂಗ್ರೆಸ್ ರಾಜ್ಯ ವಕ್ತಾರ ಲಕ್ಷ್ಮಣ್ ನೇತೃತ್ವದ ಕಾಂಗ್ರೆಸ್ ನಿಯೋಗ

- ಹೆಚ್ಚುವರಿ 16 ಪೊಲೀಸ್ ಠಾಣೆ ಅವಶ್ಯವಿದೆ
- ಬಾಂಬ್ ನಿಷ್ಕ್ರೀಯ ದಳಕ್ಕೆ ಹೆಚ್ಚಿನ ಸೌಲಭ್ಯ ಕಲ್ಪಿಸಿ
- ರಿಂಗ್ ರಸ್ತೆಯಲ್ಲಿ ಅಂಡರ್ ಪಾಸ್, ಸ್ಕೈ ವಾಕ್ ನಿರ್ಮಿಸಿ
- ರಿಂಗ್ ರೋಡ್ 6 ಪಥ ಹೆಚ್ಚುವರಿಯಾಗಿ ನಿರ್ಮಾಣ ಮಾಡಿ



ಮೈಸೂರಿನ ನಜರ್‌ಬಾದ್‌ನ ನಗರ ಪೊಲೀಸ್ ಆಯುಕ್ತರ ಕಚೇರಿಯ ಸಭಾಂಗಣದಲ್ಲಿ ಶನಿವಾರ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ನೇತೃತ್ವದ ಕಾಂಗ್ರೆಸ್ ನಿಯೋಗ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಅವರನ್ನು ಭೇಟಿ ಮಾಡಿ, ಪೊಲೀಸ್ ಇಲಾಖೆಗೆ ಅವಶ್ಯವಿರುವ ಯೋಜನೆಯನ್ನು ಬಜೆಟ್‌ನಲ್ಲಿ ಘೋಷಿಸುವಂತೆ ಆಯುಕ್ತರ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದರು.

ಮೈಸೂರು, ಜ.24(ಬಿಎಲ್‌ಯು)– ಗ್ರೇಟರ್ ಮೈಸೂರು ರಚನೆ ಹಿನ್ನೆಲೆಯಲ್ಲಿ ಹೆಚ್ಚುವರಿ ಆರು ಪೊಲೀಸ್ ಸ್ಟೇಷನ್ ಸ್ಥಾಪನೆ, ನಾಲ್ಕು ಸ್ಯಾಟಲೈಟ್ ಬಸ್ ಟರ್ಮಿನಲ್ ಸೇರಿದಂತೆ ಇತರೆ ಮೂಲಭೂತ ಸೌಕರ್ಯ ಕಲ್ಪಿಸಲು ಪೊಲೀಸ್ ಇಲಾಖೆಗೆ 500 ಕೋಟಿ ರೂಪಾಯಿ ನೀಡುವಂತೆ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ನೇತೃತ್ವದಲ್ಲಿ ಕಾಂಗ್ರೆಸ್ ನಿಯೋಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದ್ದಾರೆ.

ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಅವರ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿ ಹಲವು ಬೇಡಿಕೆ ಮಂಡಿಸಿದ್ದಾರೆ.

ಮೈಸೂರು ನಗರ ಪೊಲೀಸ್ ಆಯುಕ್ತರ ಸಭಾಂಗಣದಲ್ಲಿ ಇಂದು ನಗರ ಪೊಲೀಸ್ ಆಯುಕ್ತ ಸೀಮಾ ಲಾಟ್ಕರ್ ಅವರನ್ನು ಭೇಟಿ ಮಾಡಿದ ಲಕ್ಷ್ಮಣ್ ನೇತೃತ್ವದ ಕಾಂಗ್ರೆಸ್ ನಿಯೋಗ, ಪೊಲೀಸ್ ಇಲಾಖೆಯ ಸುಧಾರಣೆಗಾಗಿ ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ 500 ಕೋಟಿ ರೂಪಾಯಿ ನೀಡುವಂತೆ ಆಗ್ರಹಿಸಿದರು.

ಹಾಲಿ 86 ಚದರ ಕಿಲೋ ಮೀಟರ್ ವ್ಯಾಪ್ತಿಯ ಮೈಸೂರು ನಗರದಲ್ಲಿ 16 ಪೊಲೀಸ್ ಠಾಣೆಗಳಿವೆ. ಈಗ ಗ್ರೇಟರ್ ಮೈಸೂರು ರಚನೆಯಾಗಿದ್ದು, ಸುತ್ತ ಮುತ್ತಲಿನ ನೂರಾರು ಗ್ರಾಮಗಳು ನಗರ ವ್ಯಾಪ್ತಿಯೊಳಗೆ ಸೇರ್ಪಡೆಗೊಳ್ಳುತ್ತವೆ. ಇದರಿಂದ ನಗರದ ವ್ಯಾಪ್ತಿ 341 ಚದರ ಕಿಲೋಮೀಟರ್ ಆಗಲಿದ್ದು, ನಗರದ ವ್ಯಾಪ್ತಿ ಹಾಗೂ ಜನಸಂಖ್ಯೆಗೆ ಅನುಗುಣವಾಗಿ ಮೊದಲ ಹಂತದಲ್ಲಿ 16 ಪೊಲೀಸ್ ಠಾಣೆ ಸ್ಥಾಪಿಸುವಂತೆ ಲಕ್ಷ್ಮಣ್ ಒತ್ತಾಯಿಸಿದರು.

ಪ್ರವಾಸಿಗರ ರಕ್ಷಣೆಗೆ ಕ್ರಮ: ಮೈಸೂರು ನಗರ ವಿಶ್ವ ವಿಖ್ಯಾತ ಪ್ರವಾಸಿ ತಾಣವಾಗಿದ್ದು, ದೇಶ–ವಿದೇಶದಿಂದ ಲಕ್ಷಾಂತರ ಜನರು ಆಗಮಿಸುತ್ತಾರೆ. ಈ ಹಿನ್ನೆಲೆಯಲ್ಲಿ ಬಾಂಬ್ ನಿಷ್ಕ್ರಿಯ ದಳಕ್ಕೆ ಹಲವು ಆಧುನಿಕ ಉಪಕರಣ ಸೇರಿದಂತೆ ಮೂಲಭೂತ ಸೌಕರ್ಯ ಕಲ್ಪಿಸಬೇಕೆಂದು ಆಗ್ರಹಿಸಿದರು.

ನಗರದಲ್ಲಿ 8 ಲಕ್ಷ ವಾಹನಗಳಿದ್ದು, ಪ್ರವಾಸಿ ತಾಣಗಳ ವೀಕ್ಷಣೆಗಾಗಿ ದಿನ ನಿತ್ಯ ಸಾವಿರಾರು ಪ್ರವಾಸಿ ವಾಹನಗಳು ಮೈಸೂರಿಗೆ ಬರುತ್ತವೆ. ಟ್ರಾಫಿಕ್ ಜಾಮ್ ಸಮಸ್ಯೆ ನಿಯಂತ್ರಣಕ್ಕೆ ರಿಂಗ್ ರಸ್ತೆ ಹೊರಗೆ 4 ಸ್ಯಾಟಲೈಟ್ ಬಸ್ ಟರ್ಮಿನಲ್ ನಿರ್ಮಿಸಬೇಕು, 6 ಕಡೆ ಮಲ್ಟಿ ಲೆವೆಲ್ ಪಾರ್ಕಿಂಗ್ ನಿರ್ಮಿಸಬೇಕು, ಇನ್ನೂ ಹಲವು ವೃತ್ತಗಳಲ್ಲಿ ಟ್ರಾಫಿಕ್ ಸಿಗ್ನಲ್ ಲೈಟ್ ಅಳವಡಿಸಬೇಕು ಎಂದು ಕೋರಿದರು.

ಖಾಸಗಿ ಬಸ್‌ಗಳು ಹೆಚ್ಚಾಗಿ ತಿ.ನರಸೀಪುರ, ಕೊಳ್ಳೆಗಾಲ, ಮಹದೇಶ್ವರ ಬೆಟ್ಟಕ್ಕೆ ಸಂಚರಿಸುವ ಹಿನ್ನೆಲೆಯಲ್ಲಿ ಖಾಸಗಿ ಬಸ್ ನಿಲ್ದಾಣವನ್ನು ರಿಂಗ್ ರೋಡ್ ಹೊರಗಿನ ತಿ.ನರಸೀಪುರ ಮಾರ್ಗದಲ್ಲಿ ಸ್ಥಳಾಂತರಿಸಬೇಕು. ಗ್ರೇಟರ್ ಮೈಸೂರು ವ್ಯಾಪ್ತಿ ವಿಶಾಲವಾಗುವ ಕಾರಣ ನಾಲ್ವರು ಡಿಸಿಪಿಗಳ ಹುದ್ದೆಗಳನ್ನು ಸೃಷ್ಟಿಸಿ, ನಾಲ್ಕು ದಿಕ್ಕುಗಳಿಗೂ ನಿಯೋಜಿಸಬೇಕು ಎಂದು ಲಕ್ಷ್ಮಣ್ ಆಗ್ರಹ ಮಾಡಿದರು.

ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದಿಂದ ಫ್ಲೈ ಓವರ್ ಹಾಗೂ ಅಂಡರ್ ಪಾಸ್ ನಿರ್ಮಿಸುವ ಯೋಜನೆ ಕಾಮಗಾರಿ ಶೀಘ್ರ ಆರಂಭಿಸಬೇಕು, ಆಟೋಗಳಿಗೆ ಪ್ರತ್ಯೇಕ ಪಾರ್ಕಿಂಗ್ ವ್ಯವಸ್ಥೆ ಮಾಡಲು ಹಣ ಮೀಸಲಿಡಬೇಕು, ನಗರದ ಹೊರ ಭಾಗದಲ್ಲಿ ಎಕ್ಸಿಬಿಷನ್ ಗ್ರೌಂಡ್ ನಿರ್ಮಾಣ ಮಾಡಬೇಕು, ಪೊಲೀಸರಿಗೆ ಸುಸಜ್ಜಿತವಾದ ಎರಡು ಹಾಗೂ ನಾಲ್ಕು ಚಕ್ರಗಳ ವಾಹನ ನೀಡಬೇಕು ಎಂದು ಕೇಳಿದರು.

ನಗರದ ರಿಂಗ್ ರಸ್ತೆಯಲ್ಲಿ ಪಾದಚಾರಿಗಳು ಸಾಗಲು ಅಂಡರ್ ಪಾಸ್ ಹಾಗೂ ಸ್ಕೈ ವಾಕ್ ನಿರ್ಮಾಣ ಮಾಡಬೇಕು, ಹಾಲಿ ಇರುವ ರಿಂಗ್ ರಸ್ತೆಯನ್ನು ಹೆಚ್ಚುವರಿ 6 ಪಥಕ್ಕೆ ವಿಸ್ತರಣೆ ಮಾಡಬೇಕು. ಇದಕ್ಕೆಲ್ಲಾ ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ 500 ಕೋಟಿ ನೀಡಬೇಕೆಂದು ಲಕ್ಷ್ಮಣ್ ಅವರು ಪೊಲೀಸ್ ಆಯುಕ್ತರ ಮೂಲಕ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದರು.

> **ಬಿಜೆಪಿಯ ಕೆಲವು ಕಾರ್ಯಕರ್ತರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬಗ್ಗೆ ಏಕವಚನದಲ್ಲಿ ಹಗುರವಾಗಿ ಮಾತನಾಡುತ್ತಿದ್ದು, ಅವರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಈ ಬಗ್ಗೆ ಹಲವು ಬಾರಿ ದೂರು ನೀಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ರಾಜ್ಯವನ್ನಾಳುವ ಮುಖ್ಯಮಂತ್ರಿ ಬಗ್ಗೆಯೇ ಹಗುರವಾಗಿ ಮಾತನಾಡಿದರೆ, ಇನ್ನು ಜನ ಸಾಮಾನ್ಯರ ಸ್ಥಿತಿ ಏನು!**

ಹಳೆ ರೌಡಿಗಳಿಗಿಂತ ಹೊಸ ರೌಡಿಗಳ ಹಾವಳಿ ಹೆಚ್ಚಾಗಿದೆ

ಮೈಸೂರು ನಗರದಲ್ಲಿ ಹಳೆ ರೌಡಿಗಳಿಗಿಂತ ಹೊಸ ರೌಡಿಗಳ ಹಾವಳಿ ಹೆಚ್ಚಾಗಿದ್ದು, ಇದಕ್ಕೆ ಕಡಿವಾಣ ಹಾಕಬೇಕೆಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ಆಗ್ರಹಿಸಿದರು. ಹಳೆ ರೌಡಿಗಳಿಗೆ ವಯಸ್ಸಾಗಿದ್ದು, ಅನಾರೋಗ್ಯದ ಕಾರಣ ಅವರು ಯಾವುದೇ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗದೆ ಅವರ ಪಾಡಿಗೆ ಅವರಿದ್ದಾರೆ. ಆದರೆ ಹೊಸದಾಗಿ ತಲೆ ಎತ್ತಿರುವ ಪುಡಿ ರೌಡಿಗಳ ಹಾವಳಿ ಹೆಚ್ಚಾಗಿದೆ.

ಕಾರ್ತಿಕ್ ಎಂಬ ರೌಡಿ ಸಾವನ್ನಪ್ಪಿದ ಸಂದರ್ಭದಲ್ಲಿ ಅಂತ್ಯಕ್ರಿಯೆ ವೇಳೆ ಭಾರೀ ಸಂಖ್ಯೆಯಲ್ಲಿ ಪುಡಿ ರೌಡಿಗಳು ಸೇರಿದ್ದರು. ಇದು ನಗರದಲ್ಲಿನ ರೌಡಿಗಳ ಹಾವಳಿಯನ್ನು ಬಿಂಬಿಸುತ್ತದೆ ಎಂದು ತಿಳಿಸಿದರು.

ಕೆಲವು ರೌಡಿಗಳು ಪೊಲೀಸ್ ಇಲಾಖೆಯ ಕೆಲವು ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ಬೆಂಬಲದೊಂದಿಗೆ ರಿಯಲ್ ಎಸ್ಟೇಟ್ ವ್ಯವಹಾರ ನಡೆಸುತ್ತಿದ್ದಾರೆ. ಇದಕ್ಕೆ ಕಡಿವಾಣ ಹಾಕಬೇಕೆಂದು ಡಾ.ವಿಜಯಕುಮಾರ್ ಆಗ್ರಹಿಸಿದರು.

ಇದೇ ವೇಳೆ ಮಾತನಾಡಿದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ನಗರದ ಕನಕಗಿರಿ, ರಾಮಾನುಜ ರಸ್ತೆಯ ಎಲೆ ತೋಟ, ತೆಂಗಿನ ತೋಟ ಹಾಗೂ ದೊಡ್ಡ ಮೈದಾನಗಳಿವೆ. ಇಲ್ಲಿ ಯುವಕರು ಡ್ರಗ್ಸ್ ಹಾಗೂ ಗಾಂಜಾ ಸೇವಿಸುತ್ತಾರೆ, ಸಲ್ಯೂಷನ್ ಮತ್ತೇರಿಸಿಕೊಳ್ಳುತ್ತಾರೆ. ಅದರ ನಶೆಯಲ್ಲಿ ಜನ ಸಾಮಾನ್ಯರ ಮೇಲೆ ದಾಳಿ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಈ ಸಂಬಂಧ ವಿದ್ಯಾರಣ್ಯಪುರಂ ಹಾಗೂ ಕೆ.ಆರ್.ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್‌ಗಳಿಗೆ ದೂರು ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಇನ್ಸ್‌ಪೆಕ್ಟರ್‌ಗಳು ಗಂಭೀರವಾಗಿ ಪರಿಗಣಿಸಿಲ್ಲ. ಇದರಿಂದ ಮಾದಕ ವಸ್ತು ಸೇವಿಸುವವರ ಹಾವಳಿ ಹೆಚ್ಚಾಗಿದ್ದು, ಜನರು ನಿರ್ಭೀತಿಯಿಂದ ಬದುಕಲು ಸಾಧ್ಯವಾಗುತ್ತಿಲ್ಲ ಎಂದು ಸೋಮಶೇಖರ್ ಆತಂಕ ವ್ಯಕ್ತಪಡಿಸಿದರು.

ಪ್ರತಿ ದಿನ ರೌಡಿಗಳನ್ನು ಕರೆಸಿ ಎಚ್ಚರಿಕೆ ನೀಡುತ್ತಿದ್ದೇವೆ...!

ಮೈಸೂರು ನಗರದಲ್ಲಿ ಶಾಂತಿಯುತ ವಾತಾವರಣ ನಿರ್ಮಾಣ ಮಾಡುವ ನಿಟ್ಟಿನಲ್ಲಿ ಅಪರಾಧ ಚಟುವಟಿಕೆಗಳಿಗೆ ಕಡಿವಾಣ ಹಾಕಲು ಪ್ರತಿ ದಿನ ರೌಡಿಗಳನ್ನು ಕರೆಸಿ ಎಚ್ಚರಿಕೆ ನೀಡುತ್ತಿದ್ದೇವೆ ಎಂದು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ತಿಳಿಸಿದರು. ತಮ್ಮನ್ನು ಭೇಟಿ ಮಾಡಿದ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ನೇತೃತ್ವದ ಕಾಂಗ್ರೆಸ್ ನಿಯೋಗಕ್ಕೆ ಸೀಮಾ ಲಾಟ್ಕರ್ ಮಾಹಿತಿ ನೀಡಿದರು. ಯಾವ ರೌಡಿಗಳನ್ನು ಕರೆಸಿದ್ದೇವೆ, ಅವರಿಗೆ ಏನು ಎಚ್ಚರಿಕೆ ನೀಡಿದ್ದೇವೆ ಎಂಬ ಮಾಹಿತಿಯನ್ನು ಪ್ರತಿದಿನ ಮಾಧ್ಯಮಗಳ ಮೂಲಕ ಜನರಿಗೆ ತಿಳಿಸಲು ಸಾಧ್ಯವಿಲ್ಲ. ಆದರೆ ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ನಮ್ಮ ಕೆಲಸವನ್ನು ನಾವು ಸಮರ್ಥವಾಗಿ ನಿಭಾಯಿಸುತ್ತಿದ್ದೇವೆ ಎಂದರು.

ಈ ವೇಳೆ ಮಾತನಾಡಿದ ಡಿಸಿಪಿ ಸುಂದರ್ ರಾಜ್, ಈಗಾಗಲೇ 650 ರೌಡಿಗಳ ಹೆಸರನ್ನು ಪಟ್ಟಿ ಮಾಡಿದ್ದೇವೆ ಎಂದು ತಿಳಿಸಿದರು.

ಹುಬ್ಬಳ್ಳಿ–ಧಾರವಾಡದಂತೆ ಮೈಸೂರನ್ನು ಸ್ಮಾರ್ಟ್ ಸಿಟಿಯಾಗಿ ಮಾಡಬೇಕಾದ ಅಗತ್ಯವಿದೆ. ನಗರದ ಚಲನವಲನಗಳ ಬಗ್ಗೆ ಹದ್ದಿನ ಕಣ್ಣಿಡಲು ಕಮಾಂಡ್ ಸೆಂಟರ್ ಸ್ಥಾಪಿಸಬೇಕಿದೆ, ದಸರಾ ಸೇರಿದಂತೆ ದೊಡ್ಡ ಕಾರ್ಯಕ್ರಮ ನಡೆದ ಸಂದರ್ಭದಲ್ಲಿ ಮಹಿಳಾ ಪೊಲೀಸರಿಗೆ ಶೌಚಾಲಯ ವ್ಯವಸ್ಥೆ ಕಲ್ಪಿಸಲು ತಮಿಳುನಾಡಿನ ಕ್ಯಾರಾವ್ಯಾನ್ ಮಾದರಿಯಲ್ಲಿ ವಾಹನ ಖರೀದಿಸುವ ಅವಶ್ಯವಿದೆ ಎಂದು ಸೀಮಾ ಲಾಟ್ಕರ್ ಹೇಳಿದರು.

ಗ್ರೇಟರ್ ಮೈಸೂರು ರಚನೆ ಹಿನ್ನೆಲೆಯಲ್ಲಿ ಈ ತನಕ ಗ್ರಾಮಾಂತರ ಭಾಗದಲ್ಲಿದ್ದ ಪೊಲೀಸ್ ಠಾಣೆಗಳು ನಗರ ವ್ಯಾಪ್ತಿಗೆ ಬರುತ್ತವೆ. ಇದರ ಜೊತೆಗೆ ಕಾನೂನು ಸುವ್ಯವಸ್ಥೆ ಪೊಲೀಸ್ ಠಾಣೆ ಹಾಗೂ ಸಂಚಾರಿ ಪೊಲೀಸ್ ಠಾಣೆಗಳ ಹೆಚ್ಚಾಗಿ ಸ್ಥಾಪಿಸಬೇಕಿದೆ. ಹೆಚ್ಚುವರಿ ಡಿಸಿಪಿಗಳು ನಿಯೋಜನೆಗೊಂಡರೆ ಅವರಿಗೆ ವಸತಿ ಗೃಹ ನಿರ್ಮಾಣ ಮಾಡಬೇಕಿದೆ. ಪೊಲೀಸ್ ಇಲಾಖೆಯ ಈ ಬೇಡಿಕೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ ಎಂದು ತಿಳಿಸಿದರು.

ಮೈಸೂರು ನಗರದಲ್ಲಿ ಡಿಜಿಟಲ್ ಅರೆಸ್ಟ್ ಪ್ರಕರಣಗಳ ಸಂಖ್ಯೆ ಬಹುತೇಕ ಕಡಿಮೆಯಾಗಿದೆ. ಕಳೆದ ವರ್ಷ 74 ಇದ್ದ ಪ್ರಕರಣ ಈ ಬಾರಿ 25ಕ್ಕೆ ಇಳಿಕೆಯಾಗಿದೆ ಎಂದು ಮಾಹಿತಿ ನೀಡಿದರು. ನಗರದ ಹಾರ್ಡಿಂಗ್ ವೃತ್ತ, ದೇವರಾಜ ಅರಸ್ ರಸ್ತೆ ಜಂಕ್ಷನ್ ಸೇರಿದಂತೆ ಇತರೆಡೆ ಪಾದಚಾರಿಗಳು ಸಾಗಲು ಹರಸಾಹಸ ಪಡಬೇಕಿದೆ. ಇದಕ್ಕೆ ಒಂದು ಪರಿಹಾರ ಕಲ್ಪಿಸಲಾಗುವುದು ಎಂದು ಸೀಮಾ ಲಾಟ್ಕರ್ ಭರವಸೆ ನೀಡಿದರು.

ಪತ್ರಿಕಾ ಪ್ರಕಟಣೆ

ಬೆಂಗಳೂರು – 560057, ಟಿ ದಾಸರಹಳ್ಳಿ, ಮುತ್ತುರಾಯ ದೇವಸ್ಥಾನದ ಹತ್ತಿರ ಪ್ರಶಾಂತ ನಗರ, 2ನೇ ಕ್ರಾಸ್, # 27 ರಲ್ಲಿ ವಾಸವಾಗಿರುವ ಗುರುಸ್ವಾಮಪ್ಪ ರವರ ಮಗನಾದ ಮಲ್ಲೇಶ ಜಿ ರವರು ಮೈಸೂರು ಜಿಲ್ಲೆ, ನಂಜನಗೂಡು ಟೌನ್, ಶ್ರೀಕಂಠಪುರಿ ಬಡಾವಣೆ, 14ನೇ ಕ್ರಾಸ್, # 3315 ರಲ್ಲಿ ವಾಸವಾಗಿರುವ ಎ. ಆರ್. ಶ್ರೀಕಂಠಶರ್ಮ ರವರ ಮಗನಾದ ಎಸ್ ಉಮೇಶ್ ರವರಿಗೆ ಸೇರಿದ ಈ ಕೆಳಗೆ ನಮೂದಿಸಿರುವ ಷೆಡ್ಯೂಲ್‌ನಲ್ಲಿ ವಿವರಿಸಿದ ವಾಸದ ಉದ್ದೇಶಕ್ಕಾಗಿ ವಿಂಗಡಿಸಿರುವ ನಿವೇಶನವನ್ನು ಕ್ರಯದ ಕರಾರು ಮಾಡಿಕೊಂಡಿರುತ್ತಾರೆ. ಈ ಸ್ವತ್ತಿನಲ್ಲಿ ನಿವೇಶನದ ಮಾಲೀಕರಾದ ಇವರಲ್ಲದೆ ಮತ್ಯಾರಿಗಾದರೂ ಯಾವುದೇ ರೀತಿಯ ಹಿತಾಸಕ್ತಿಗಳು, ವಿವಾದಗಳು, ತಂಟೆ ತಕರಾರುಗಳು ಇದ್ದಲ್ಲಿ ಸಂಬಂಧಪಟ್ಟ ದಾಖಲೆಗಳು ಮತ್ತು ಸಂಪೂರ್ಣ ವಿವರದೊಡನೆ ಈ ಕೆಳಗೆ ಸಹಿ ಮಾಡಿರುವ ವಕೀಲರನ್ನು ಈ ಪ್ರಕಟಣೆಯ 15 ದಿನದ ಒಳಗಾಗಿ, ಖುದ್ದಾಗಿ ಅವರ ಕಛೇರಿ ವಿಳಾಸಕ್ಕೆ ಭೇಟಿ ನೀಡಿ ತಿಳಿಸಬೇಕೆಂದು ಕೋರಲಾಗಿದೆ. ತಪ್ಪಿದಲ್ಲಿ ಯಾವುದೇ ಆಕ್ಷೇಪಣೆ ಇರುವುದಿಲ್ಲವೆಂದು ಪರಿಗಣಿಸಲಾಗುವುದು. ಕ್ರಯದ ಕರಾರಿಗೆ ಸಂಬಂಧಿಸಿದ ಸ್ವತ್ತಿನ ನಿವೇಶನ ವಿವರ ಈ ಕೆಳಕಂಡಂತಿದೆ **ಷೆಡ್ಯೂಲ್** ಮೈಸೂರು ಜಿಲ್ಲೆ, ನಂಜನಗೂಡು ಟೌನ್, ದೇವೀರಮ್ಮನಹಳ್ಳಿ, ರಾಮಸ್ವಾಮಿ ಲೇಔಟ್, 1ನೇ ಬ್ಲಾಕ್ ನಲ್ಲಿರುವುದು. ಸೈಟ್ ನಂ.44, ಸದರಿ ಸ್ವತ್ತಿನ ನಂಜನಗೂಡು ನಗರಸಭಾ ನಮೂನೆ–3 ಸ್ವತ್ತಿನ ಸಂಖ್ಯೆ: 2022026724 ಸದರಿ ಸ್ವತ್ತಿನ ಹಳೆ ಸಂಖ್ಯೆ: 1977/2847/44. ನಿರ್ಧಾರಣಾ ಸಂಖ್ಯೆ: 14474/2847/44, ದಾಖಲೆ ಸಂಖ್ಯೆ: 26386535 ಆಗಿದ್ದು, ಸದರಿ ಸ್ವತ್ತಿನ ವಿಸ್ತೀರ್ಣ ಪೂರ್ವ–ಪಶ್ಚಿಮ 40 ಅಡಿ, ಉತ್ತರ–ದಕ್ಷಿಣ ಪೂರ್ವದ ಕಡೆ 67 ಅಡಿ, ಪಶ್ಚಿಮದ ಕಡೆ 66.06 ಅಡಿ (40*67+66.06/2=2670 ಚದರ ಅಡಿ) ಖಾಲಿ ನಿವೇಶನ. ಸದರಿ ಸ್ವತ್ತಿನ ಚೆಕ್ಕುಬಂಧಿ : ಪೂರ್ವಕ್ಕೆ – ಸೈಟ್ ನಂ.45, ಪಶ್ಚಿಮಕ್ಕೆ – ಸೈಟ್ ನಂ.43, ಉತ್ತರಕ್ಕೆ–30 ಅಡಿ ರಸ್ತೆ, ದಕ್ಷಿಣಕ್ಕೆ – ಸ.ನಂ.18/2 ರಲ್ಲಿರುವ 1ನೇ ಬ್ಲಾಕ್ ಸೈಟ್‌ಗಳು.

ಸಹಿ/– ಕೆ ಎಸ್ ನಾಗರಾಜ ರಾವ್,
ವಕೀಲರು # 16ನೇ ಕ್ರಾಸ್, ಆರ್ ಪಿ ರಸ್ತೆ
ನಂಜನಗೂಡು ಟೌನ್

ದಿನಾಂಕ: 24.1.2026

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ ನಂ. 1
ಹೇಮಾವತಿ ಬಲಮೇಲ್ದಂಡೆ ನಾಲಾ ವಿಭಾಗ, ಗೊರೂರು
ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ 07/2025–26 ದಿನಾಂಕ 21.01.2026

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ನಂ.1 ಹೇಮಾವತಿ ಬಲಮೇಲ್ದಂಡೆ ನಾಲಾ ವಿಭಾಗ, ಗೊರೂರು ಹಾಸನ ಜಿಲ್ಲೆ, ಇವರಿಂದ ಕಾವೇರಿ ನೀರಾವರಿ ನಿಗಮದಲ್ಲಿ ನೊಂದಾಯಿತವಾಗಿರುವ ನಿಗಧಿತ ದರ್ಜೆಯ ಗುತ್ತಿಗೆದಾರರಿಂದ ಈ ಅಧಿಸೂಚನೆಯಲ್ಲಿ ತಿಳಿಸಿರುವಂತೆ ಒಟ್ಟು 08 ಕಾಮಗಾರಿಗಳಿಗೆ ಟೆಂಡರ್‌ಅನ್ನು ಕೆ ಪಿ ಪಿ ಪೋರ್ಟಲ್‌ನಲ್ಲಿ ಆಹ್ವಾನಿಸಲಾಗಿದೆ. ಈ ಕಾಮಗಾರಿಗೆ ಟೆಂಡರ್ ಸಲ್ಲಿಸುವ ಗುತ್ತಿಗೆದಾರರು ಟೆಂಡರ್‌ಗಿಟ್ಟ ಕನಿಷ್ಠ ಮೊತ್ತ ರೂ. 0.84 ಲಕ್ಷ ಮತ್ತು ಗರಿಷ್ಠ ಮೊತ್ತ ರೂ.42.17 ಲಕ್ಷಗಳಾಗಿರುತ್ತದೆ. ಅರ್ಜಿ ಬೆಲೆ ಕೆ ಪಿ ಪಿ–portal ನಂತೆ ಇರುತ್ತದೆ. ಕೆ ಪಿ ಪಿ ಪೋರ್ಟಲ್‌ನಲ್ಲಿ ಅರ್ಹ ಗುತ್ತಿಗೆದಾರರು ಅಂತರ್ಜಾಲದಲ್ಲಿ ದಿನಾಂಕ 21.01.2026 ರಂದು ಬೆಳಿಗ್ಗೆ 11.00 ಗಂಟೆಯಿಂದ ದಿನಾಂಕ: 28.01.2026 ರ ಮಧ್ಯಾಹ್ನ 4.00 ಗಂಟೆಯವರೆಗೆ ಟೆಂಡರ್‌ನ ನಿಗಧಿತ ನಮೂನೆಗಳನ್ನು https://kppp.karnataka.gov.in ನಲ್ಲಿ ಡೌನ್ ಲೋಡ್ ಮಾಡಿ ಅವಶ್ಯ ಮಾಹಿತಿಗಳೊಂದಿಗೆ ಹಾಗೂ ನಿಗದಿತ ಇ.ಎಂ.ಡಿ. ಯೊಂದಿಗೆ ಅಪ್‌ಲೋಡ್ ಮಾಡಬಹುದಾಗಿದೆ. ಟೆಂಡರ್‌ಅನ್ನು ದಿನಾಂಕ 29.01.2026 ರಂದು ನಂ.1 ಹೇಮಾವತಿ ಬಲಮೇಲ್ದಂಡೆ ನಾಲಾ ವಿಭಾಗ,ಗೊರೂರು ಕಚೇರಿಯಲ್ಲಿ ತೆರೆಯಲಾಗುವುದು. ಹೆಚ್ಚಿನ ಮಾಹಿತಿ ಹಾಗೂ ಇತರೆ ನಿಬಂದನೆಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ನಂ.1
ಹೇಮಾವತಿ ಬಲಮೇಲ್ದಂಡೆ ನಾಲಾವಿಭಾಗ, ಗೊರೂರು

ವಾಸಾಸಂಇ/ಹಿಸನಿ/ಹಾಸನ/981/ಶಿಎಸ್‌ಎಂಸಿಎ/2025–26

ನಕ್ಕರೆ ಅದೇ ಸ್ವರ್ಗ

ಟೀಚರ್ : ಈ ಕ್ಲಾಸಿನಲ್ಲಿ ಗಲಾಟೆ, ತಲೆಹರಟೆ ಮಾಡೋರು ಎದ್ದು ನಿಲ್ಲಿ?
ಗುಂಡ : ಮುಗ್ಧನಂತೆ ಎದ್ದು ನಿಂತ.
ಟೀಚರ್ : ನೀನಾ ಗುಂಡ.
ಗುಂಡ : ಇಲ್ಲ ಮೇಡಂ ನೀವು ಒಬ್ಬರೆ ನಿಂತಿದ್ದು ನನಗೆ ಸರಿ ಕಾಣಲಿಲ್ಲ. ಅದಕ್ಕೆ ನಾನು ನಿಂತೆ!

ಮೈಸೂರು ಮಿತ್ರ

ಭಾನುವಾರ, ಜನವರಿ 25, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ಕೆಲವರಿಗೆ ನಮ್ಮವರೆಂದು ಅವರಿಗೆ ಹೃದಯದಲ್ಲಿ ಒಂದು ಒಳ್ಳೆ ಸ್ಥಾನ ಕೊಟ್ಟರೆ... ಸಾಕು ಈ ಪೆನ್ನಿನಂತೆ ರಾಡಿ ಎಬ್ಬಿಸಿ ಹೋಗಿ ಬಿಡುತ್ತಾರೆ.

ವೇದ ಸುಳ್ಳಾದರೂ { ಸಜ್ಜನರ ಮಾತು ಸಿಹಿ,
ಗಾದೆ ಸುಳ್ಳಾಗದು { ದುರ್ಜನರ ತುತ್ತು ಕಹಿ.

ನಿಮ್ಮ ಪತ್ರಗಳು

ಉದ್ಯೋಗ ನೇಮಕಾತಿ ಯಾವಾಗ?

ಮಾನ್ಯರೆ,

ಸಾವಿರಾರು ಉದ್ಯೋಗ ಆಕಾಂಕ್ಷಿಗಳ ಕೂಗು ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳ ಓದುಗರ ಕೂಗು... ಒಂದೇ, ಅದು! ಸರ್ಕಾರಿ ಹುದ್ದೆಗಳ ನೇಮಕಾತಿ ಯಾವಾಗ? ಅಧಿಸೂಚನೆ ಯಾವಾಗ? ಎಂಬುದು. ಈ ಪ್ರಶ್ನೆಯು ಸುಮಾರು ಎರಡು ಮೂರು ವರ್ಷಗಳಿಂದಲೂ ಪ್ರತಿಯೊಬ್ಬ ಸ್ಪರ್ಧಾರ್ಥಿಯನ್ನು ಕಾಡುತ್ತಿರುವುದು. ಈ ವ್ಯವಸ್ಥೆಗೆ ಕಾಣುತ್ತಿಲ್ಲ. ದಿನಗಳು ಉರುಳಿದಂತೆ ಜವಾಬ್ದಾರಿಗಳು ಸ್ಪರ್ಧಾರ್ಥಿಯನ್ನು ಬೆನ್ನತ್ತಿದ್ದರು ಪರಿಸ್ಥಿತಿಗೆ ಮನಸ್ಥಿತಿಯನ್ನು ಸರಿದೂಗಿಸಿಕೊಂಡು ಉತ್ತಮ ಬದುಕನ್ನು ಕಟ್ಟಿಕೊಳ್ಳಲು ಪ್ರಾಮಾಣಿಕ ಪ್ರಯತ್ನದ ಹಾದಿಯಲ್ಲಿ ತಾಳ್ಮೆಯಿಂದ ನಿಂತಿದ್ದರೂ ಸರ್ಕಾರದ ಕೆಲವು ನಿರ್ಧಾರಗಳಿಂದ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವುದರಲ್ಲಿ ನಿಧಾನಗತಿಯಲ್ಲಿರುವುದು ಉದ್ಯೋಗ ಆಕಾಂಕ್ಷಿಗಳ ಬದುಕಲ್ಲಿ ಆತಂಕಕ್ಕೆ ಪ್ರಮುಖ ಕಾರಣವಾಗಿದೆ. ಎಷ್ಟು ವರ್ಷಗಳೂ ನೀನು ಓದಿದೆ ಮತ್ತು ಎಷ್ಟು ಗಂಟೆಗಳು ನೀನು ಗ್ರಂಥಾಲಯದಲ್ಲಿ ಕೂತು ಓದಿದೆ ಎಂಬುದನ್ನು ಕೇಳದ ಈ ವ್ಯವಸ್ಥೆಯು ಕೇವಲ ಸಾಧಿಸಿದವರನ್ನಷ್ಟೇ ಹಾಗೂ ಬದುಕಲ್ಲಿ ಗೆದ್ದವರನ್ನಷ್ಟೇ ಗೌರವಿಸುವ ಪರಂಪರೆಯು ನಮ್ಮದಾಗಿರುವಾಗ ಊಟ ನಿದ್ರೆ ಮತ್ತು ಕುಟುಂಬವನ್ನು ಬಿಟ್ಟು ಸರ್ಕಾರಿ ಉದ್ಯೋಗಕ್ಕಾಗಿ ಹಂಬಲಿಸುತ್ತಿರುವ ಮನಸ್ಸುಗಳಿಗೆ ಸರ್ಕಾರವು ಇನ್ನೆಷ್ಟು ಕಾಲ ಮೌನ ವಹಿಸುವುದು? ಎಷ್ಟು ಓದಿದರೂ ಸರ್ಕಾರಿ ಕೆಲಸ ಸಿಗುವುದಿಲ್ಲ ಎಂಬುದು ನಿಜವಾಗುವುದಕ್ಕೆ ಸರ್ಕಾರ ಅವಕಾಶ ನೀಡದೆ ಉದ್ಯೋಗಗಳನ್ನು ಭರ್ತಿ ಮಾಡಿಕೊಳ್ಳುವುದರಲ್ಲಿ ಬದ್ಧತೆಯನ್ನು ತೋರಿಸಬೇಕಾಗಿದೆ.

–ಪವನ್ ಜಂಯರಾಂ, ಸಿದ್ದಂಯ್ಯನಪುರ, ಚಾಮರಾಜನಗರ

ಕಟ್ಟಡ ಕಾರ್ಮಿಕರು, ಪೈಂಟರ್‌ಗಳಿಗೆ ಸುರಕ್ಷತೆ ಅಗತ್ಯ

ಮಾನ್ಯರೇ

ಮೈಸೂರು ಅಪಾರ್ಟ್‌ಮೆಂಟ್‌ವೊಂದರ ಗೋಡೆಯ ಬಿರುಕನ್ನು ಚೆಕ್ ಮಾಡುತ್ತಿದ್ದ ವೇಳೆಯಲ್ಲಿ ಪೈಂಟಿಂಗ್ ಕೆಲಸ ಮಾಡುತ್ತಿದ್ದ ವ್ಯಕ್ತಿ ಬಿದ್ದು ಸತ್ತಿರುವ ದುರ್ಘಟನೆ ನಡೆದಿದೆ. ಈ ಘಟನೆಯಿಂದ ಕಟ್ಟಡ ಕಾರ್ಮಿಕರ ಮತ್ತು ಪೇಂಟರ್ ಕುಟುಂಬಗಳನ್ನು ಅಘಾತಗೊಳಿಸಿದೆ. ಕಾರ್ಮಿಕರಿಗೆ ಕೆಲಸ ಕೊಡುವ ಮೊದಲು ಅವರ ಸುರಕ್ಷಿತ ಕ್ರಮವನ್ನು ಮಾಲೀಕರು ಹಾಗೂ ಕಂಟ್ರಾಕ್ಟರ್‌ಗಳು ಪರಿಶೀಲಿಸಿ, ಜವಾಬ್ಧಾರಿ ವಹಿಸಬೇಕು ಎಂದು ಈ ಮೂಲಕ ಮನವಿ. **–ಪಿ.ಸಿ.ಕಂಗಾಣಿಸೋಮು, ಕ್ಯಾತಮಾರನಹಳ್ಳಿ, ಮೈಸೂರು**

ಕುವೆಂಪುನಗರ ಮಾರ್ಗಕ್ಕೆ ಬರುವ ಕೆಲವು ಬಸ್ಸುಗಳಿಂದ ಹೊಗೆ

ಮಾನ್ಯರೆ,

ದಿನನಿತ್ಯ ಮೈಸೂರಿನ ಕುವೆಂಪುನಗರ ಮಾರ್ಗಕ್ಕೆ ನಗರ ಸಾರಿಗೆ ಬಸ್ಸುಗಳು ಸಂಚರಿಸುತ್ತವೆ ಆದರೆ, ಕೆಲವು ಬಸ್ಸುಗಳಿಂದ ವಿಪರೀತವಾದ ಹೊಗೆ ಬರುತ್ತಿದೆ. ಈ ಬಸ್ಸುಗಳು ಭಾರಿ ಪ್ರಮಾಣದಲ್ಲಿ ಹಳೆಯ ಬಸ್ಸುಗಳು ಆದ ಕಾರಣ ಈ ರೀತಿಯ ಹೊಗೆ ಬರತೊಡಗಿದೆ. ಇಂತಹ ಬಸ್ಸುಗಳು ರಸ್ತೆಯಲ್ಲಿ ಓಡಾಡುತ್ತಿರುವುದರಿಂದ ವಿವಿಧ ರೀತಿಯ ವಾಹನಗಳಿಂದ ಸಂಚರಿಸುವ ಸವಾರರಿಗೂ ಹೊಗೆ ಬಿಸಿ ತಟ್ಟಿದೆ. ಅಲ್ಲದೆ ರಸ್ತೆಯಲ್ಲಿ ಓಡಾಡುವ ಪಾದಚಾರಿಗಳು ಮೂಗನ್ನು ಮುಚ್ಚಿಕೊಂಡು ಓಡಾಡುವ ಪ್ರಸಂಗ ಎದುರಾಗಿದೆ. ಕೆಲವು ಸಂದರ್ಭಗಳಲ್ಲಿ ದ್ವಿಚಕ್ರ ವಾಹನ ಸವಾರರು ಇಂತಹ ಬಸ್ಸುಗಳು ಕಂಡರೆ ತಮ್ಮ ವಾಹನವನ್ನು ಅಲ್ಲೇ ನಿಲ್ಲಿಸಿ ಬಸ್ಸು ಹೋದ ನಂತರ ಹೋಗುವ ಸನ್ನಿವೇಶಗಳು ಎದುರಾಗಿದೆ. ಅದು ಎಷ್ಟರಮಟ್ಟಿಗೆ ಹೊಗೆ ಎಂದರೆ ಅಕ್ಕ ಪಕ್ಕ ಹೋಗುವುದಕ್ಕೂ ಆಗುವುದಿಲ್ಲ. ಆ ರೀತಿಯಲ್ಲಿ ಹೊಗೆ ದಟ್ಟವಾಗಿ ಸಂಪೂರ್ಣ ಆವರಿಸುತ್ತದೆ. ಇಂತಹ ವಾಯುಮಾಲಿನ್ಯದಿಂದ ನಮ್ಮ ಸುತ್ತಮುತ್ತಲಿನ ಪರಿಸರ ಕಲುಷಿತವಾಗುವುದಲ್ಲದೆ, ಪ್ರತಿಯೊಬ್ಬ ಮನುಷ್ಯನಿಗೂ ಹತ್ತು ಹಲವು ರೀತಿಯಲ್ಲಿ ಆರೋಗ್ಯ ಸಮಸ್ಯೆ ಎದುರಾಗುವಂತೆ ಮಾಡುತ್ತದೆ ಆದ್ದರಿಂದ ಇಂತಹ ಹಳೆ ಬಸ್ಸುಗಳನ್ನು ನಿಯಂತ್ರಿಸಿ ನೂತನ ಬಸ್ಸುಗಳನ್ನು ಕುವೆಂಪುನಗರ ಮಾರ್ಗಕ್ಕೆ ತರಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ. **–ಸಾಯಿ ಸಂದೇಶ್ ಬಿ.ಎಸ್, ಮೈಸೂರು**

ಶ್ರೀನಗರ ಬಡಾವಣೆಗೆ ಬೀದಿ ದೀಪ ಕಲ್ಪಿಸಿ

ಮಾನ್ಯರೆ,

ಮೈಸೂರು ತಾಲೂಕು ಕಡಕೊಳ ಪಟ್ಟಣ ಪಂಚಾಯ್ತಿ ವ್ಯಾಪ್ತಿಯ ಶ್ರೀನಗರ ಬಡಾವಣೆ ರೂಪುಗೊಂಡು ಇಪ್ಪತ್ತೈದು ವರ್ಷಗಳಾದರೂ ಯಾವುದೇ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಲ್ಲ. ಈ ಬಡಾವಣೆಯ ನಿವಾಸಿಗಳು ಕಾಲ ಕಾಲಕ್ಕೆ ಕಂದಾಯ ವಗೈರೆ ಪಾವತಿ ಮಾಡುತ್ತಿದ್ದರೂ ಕುಡಿಯುವ ನೀರು ಮತ್ತು ಬೀದಿ ದೀಪಗಳ ಸೌಲಭ್ಯವಿರುವುದಿಲ್ಲ. ಈ ಬಡಾವಣೆಯ ಖಾಲಿ ನಿವೇಶನಗಳಲ್ಲಿ ಗಿಡ ಗಂಟಿಗಳು ಬೆಳೆದು ಕಾಡು ಪ್ರಾಣಿಗಳ ವಾಸ ಸ್ಥಳವಾಗಿದೆ. ನಿವಾಸಿಗಳು ತಿರುಗಾಡಲು ಭಯದ ವಾತಾವರಣ ಉಂಟಾಗಿದೆ. ಈ ಸಮಸ್ಯೆಗಳನ್ನು ಸ್ಥಳೀಯ ಚುನಾಯಿತ ಜನಪ್ರತಿನಿಧಿಗಳಿಗೆ ತಂದರೂ ಯಾವುದೇ ಪ್ರಯೋಜನವಾಗಿಲ್ಲ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ತುರ್ತು ಕ್ರಮ ಕೈಗೊಂಡು ಸೂಕ್ತ ಮೂಲ ಸೌಕರ್ಯಗಳನ್ನು ಕಲ್ಪಿಸುವಂತೆ ಈ ಮೂಲಕ ಮನವಿ.

–ಕೆ.ಸಿ. ಬಸವರಾಜಸ್ವಾಮಿ, ಸಂಸ್ಥಾಪಕ ಅಧ್ಯಕ್ಷರು, ವೀರಶೈವ ಲಿಂಗಾಯಿತ ವಿವಿಧ ಬಡಾವಣೆಗಳ ಒಕ್ಕೂಟ, ಜೆ.ಪಿ.ನಗರ, ಮೈಸೂರು.

ವಿಧಾನಸಭೆ ಜಂಟಿ ಅಧಿವೇಶನದಲ್ಲಿ ನಡೆದ ಗಲಭೆ ತಲೆತಗ್ಗಿಸುವಂತಹದ್ದು

ಮಾನ್ಯರೇ

ವಿಧಾನ ಸಭೆಯಲ್ಲಿ ನಡೆದ ಜಂಟಿ ಅಧಿವೇಶನದಲ್ಲಿ ನಡೆದ ಗಲಭೆ ನಮ್ಮ ಕರ್ನಾಟಕ ಜನತೆ ತಲೆತಗ್ಗಿಸುವಂತಹ ಸನ್ನಿವೇಶ. ನಾವು ಚುನಾಯಿಸಿ ಕಳುಹಿಸಿಕೊಟ್ಟಿರುವ ಪ್ರತಿನಿಧಿಗಳು ನಮ್ಮ ದೇಶದ ಸಂವಿಧಾನವನ್ನು ಎತ್ತಿ ಹಿಡಿಯಬೇಕೇ ಹೊರತು ರಾಜಕೀಯ ಮಾಡಲು ಅಲ್ಲ. ರಾಜ್ಯಪಾಲರು ಯಾವುದೇ ಸರ್ಕಾರ ಮಾಡಿದ ಅಭಿವೃದ್ಧಿಯ ಬಗ್ಗೆ, ಜನಹಿತ ಕಾರ್ಯಕ್ರಮಗಳ ಬಗ್ಗೆ, ಸದನಕ್ಕೆ ತಿಳಿಸುವ ವಿವೇಚನೆ ಅವರಿಗೆ ಬಿಟ್ಟಿದ್ದು, ಅಲ್ಲದೆ ಸರಕಾರ ತಪ್ಪು ದಾರಿಯಲ್ಲಿ ನಡೆದರೆ ಅದನ್ನು ತಿಳಿಸುವ ಅಧಿಕಾರವು ಇವರಿಗೆ ಇದೆ. ಮುಂದೆ ನಡೆಯಬೇಕಾದ ರೂಪು–ರೇಷೆಗಳ ಬಗ್ಗೆ ತಿಳಿಸುವ ಜವಾಬ್ದಾರಿಯನ್ನೂ ಹೊಂದಿದ್ದಾರೆ.

ಸರಕಾರ ಬರೆದುಕೊಟ್ಟ ಭಾಷಣವನ್ನು ಓದುವುದರಿಂದ ಏನು ಪ್ರಯೋಜನ. ಇವರು ಸರಕಾರದ ಕೈಗೊಂಬೆ ಆಗಬಾರದು. ರಾಜ್ಯಪಾಲರು ಸರಕಾರ ನಡೆಸುತ್ತಿರುವ ಬಗ್ಗೆ ವಿಮರ್ಶೆಮಾಡಿ, ಕೂಲಂಕುಷವಾದ ವರದಿಯನ್ನು ಸಲ್ಲಿಸುವುದು ಅವರ ವಿವೇಚನೆಗೆ ಬಿಟ್ಟಿದ್ದು ಮತ್ತು ಅವರ ಜವಾಬ್ದಾರಿ ಕೂಡ.

–ಎ. ವಿ. ರಾಜಶೇಖರ, ಹೆಬ್ಬಾಳು 2ನೇ ಹಂತ, ಮೈಸೂರು



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ನಾದಲಹರಿ

ಮೇರಾ ಭಾರತ್ ಮಹಾನ್...

ಜಗತ್ತಿನ ಅನೇಕ ನಾಗರೀಕತೆಗಳು ಇನ್ನೂ ಕಣ್ಣನ್ನೇ ಬಿಡದಿದ್ದಾಗ, ಅದಾಗಲೇ ಭಾರತೀಯರು ಬದುಕಿನ ಹಲವಾರು ವಿಷಯಗಳ ಬಗ್ಗೆ ಆಳವಾಗಿ ಚಿಂತಿಸಿ, ಪ್ರಯೋಗಗಳನ್ನು ಮಾಡಿ, ಸಂಶೋಧನೆ ಮಾಡಿ, ಜಗತ್ತಿಗೆ ಒಳಿತಾಗುವ ಹತ್ತು ಹಲವು ಸಿದ್ಧಾಂತಗಳನ್ನು ರೂಪಿಸಿದ್ದರು ಎಂಬ ವಿಷಯವನ್ನು ಕುರಿತು ಆಲೋಚಿಸಿದಾಗಲೆಲ್ಲಾ ನನಗೆ ನಮ್ಮ ಪೂರ್ವಿಕರ ಬಗ್ಗೆ ತುಂಬುಹೃದಯದ ಗೌರವ ಮತ್ತು ಹೆಮ್ಮೆ ಉಂಟಾಗುತ್ತದೆ. ಇದು ಒಂದು ರೀತಿಯ ಜ್ಞಾನ ಸ್ಫೋಟ ಎಂದೂ ನನಗೆ ಅನಿಸಿದ್ದಿದೆ. ಏಕೆಂದರೆ, ನಮ್ಮ ಪರಿಸರ, ವಿಜ್ಞಾನ, ಖಗೋಳ, ಆಧ್ಯಾತ್ಮ ಯಾವುದೇ ವಿಷಯಗಳಿರಲಿ, ಅದರ ಬಗ್ಗೆ ಅದೆಷ್ಟು ಆಳವಾದ, ತಲಸ್ಪರ್ಶಿಯಾದ ಅಧ್ಯಯನ ನಮ್ಮಲ್ಲಿ ಅದಾಗಲೇ ಆಗಿಹೋಗಿತ್ತು ಎಂಬುದು ವಿಸ್ಮಯಕಾರೀ ಅಂಶವೇ ಅಲ್ಲವೇ?

ಪಂಚಭೂತಗಳ ಕಲ್ಪನೆ ನಮ್ಮದೇ ಅಲ್ಲವೇ? ಇವು ಇಲ್ಲದ ವಸ್ತುವೇ ಇಲ್ಲ. ಸಾವಿರಾರು ವರುಷಗಳ ಮೊದಲೇ ಇದನ್ನು ಭಾರತೀಯರು ಅರಿತಿದ್ದರು. ನಮ್ಮ ದೇಹದಲ್ಲಿಯೂ ಈ ಪಂಚಭೂತಗಳು ಸರಿಯಾಗಿ ಕಾರ್ಯ ನಿರ್ವಹಿಸುತ್ತಿರಬೇಕು.


ಉದಾಹರಣೆಗೆ ಜಠರಾಗ್ನಿಯು ಸರಿಯಾಗಿಲ್ಲದೆ, ಅಗ್ನಿ ಮಾಂದ್ಯತೆ ಉಂಟಾದಲ್ಲಿ, ಜೀರ್ಣಾಂಗಗಳು ಸರಿಯಾಗಿ ಕೆಲಸ ಮಾಡಲು ಆಗುವುದಿಲ್ಲ. ನಮ್ಮ ದೇಹದಲ್ಲಿ ಪ್ರಾಣ, ಆಪಾನ, ವ್ಯಾನ, ಉದಾನ ಮತ್ತು ಸಮಾನಗಳೆಂಬ ಪಂಚ ವಾಯುಗಳು ಇವೆ ಎಂಬುದನ್ನು ನಮ್ಮ ಹಿರಿಯರು ಎಂದೋ ಕಂಡುಹಿಡಿದಿದ್ದರು.

ನಮ್ಮ ಕಂಠ ಮತ್ತು ಸರ್ವ ಶರೀರದಲ್ಲಿ ಇರುವುದು ಪ್ರಾಣ ವಾಯು, ದೇಹದಿಂದ ಹೊರಹಾಕುವ ವಾಯುವೇ ಆಪಾನ, ಹೊಕ್ಕಳುವಿನಲ್ಲಿ ಇರುವುದು ವ್ಯಾನ, ಹೃದಯದಲ್ಲಿ ಇರುವುದು ಉದಾನ ಮತ್ತು ಇಡೀ ದೇಹದಲ್ಲಿ ರಕ್ತ ಚಲನೆಗೆ ಬೇಕಾದ ಶಕ್ತಿಯನ್ನು ಈವುದೇ ಸಮಾನ. ಜೊತೆಗೆ ಒಂದು ದಿನದಲ್ಲಿ ನಾವು ಎಷ್ಟು ಬಾರಿ ಉಸಿರಾಡುತ್ತೇವೆ ಎಂಬುದನ್ನೂ ಸಹ ಅವರು ಕರಾರುವಾಕ್ಕಾಗಿ ಲೆಕ್ಕ ಹಾಕಿದ್ದರು. ಇದಕ್ಕೆ ಸಂಬಂಧಿಸಿದ ಅನೇಕ ವಿಷಯಗಳನ್ನು ಶ್ರೀ ಜಗನ್ನಾಥದಾಸರು ತಮ್ಮ ಕೃತಿಯಾದ ಹರಿಕಥಾಮೃತ ಸಾರದಲ್ಲಿ ನೀಡಿದ್ದಾರೆ.

ಅಷ್ಟೇ ಏಕೆ ಮುದ್ರಾ ಚಿಕಿತ್ಸೆಯ ಬಗ್ಗೆ ನೀವು ಕೇಳಿಯೇ ಇರುತ್ತೀರಿ, ಒಂದೊಂದು ರೋಗಕ್ಕೆ ಒಂದೊಂದು ಮುದ್ರೆಯಲ್ಲಿ ಬೆರಳುಗಳನ್ನು ಹಿಡಿದು ಹತ್ತಿಪ್ಪತ್ತು ನಿಮಿಷಗಳ ಕಾಲ ಕುಳಿತಲ್ಲಿ, ಆಯಾ ರೋಗವು ಗುಣ ಹೊಂದುತ್ತದೆ ಎಂದು ಹೇಳುತ್ತದೆ ಆ ತತ್ವ. ಅದಕ್ಕೂ ಮೊದಲು ನಮ್ಮ ಕೈಯ ಬೆರಳುಗಳಿಗೂ ಒಂದೊಂದು ತತ್ವ ಇದೆ ಎಂಬುದನ್ನು ಬಹು ಹಿಂದೆಯೇ ಹೇಳಿತ್ತು ನಮ್ಮ ಭಾರತೀಯ ಋಷಿವಾಕ್ಯ.

ನಮ್ಮ ಹಸ್ತದ ಕಿರು ಬೆರಳು ಜಲತತ್ವವನ್ನು, ಉಂಗುರದ ಬೆರಳು ಪೃಥ್ವೀ ತತ್ವವನ್ನು, ಮಧ್ಯ ಬೆರಳು ಆಕಾಶ ತತ್ವವನ್ನು, ತೋರು ಬೆರಳು ವಾಯು ತತ್ವವನ್ನು ಮತ್ತು ಹೆಬ್ಬೆರಳು ಅಗ್ನಿ ತತ್ವವನ್ನು ಹೇಳುತ್ತದೆ ಅಷ್ಟೇ ಅಲ್ಲ, ಯಾವುದೇ ದೋಷ ಪರಿಹಾರಕ್ಕೆ, ನೆನಪು, ನಿದ್ರೆಯ ವೃದ್ಧಿಗೆ ಮುದ್ರೆಗಳನ್ನು ಕುರಿತು ಹೇಳಿದ್ದಾರೆ.

> ನಮ್ಮ ವೇದ, ಉಪನಿಷತ್ತುಗಳು, ಆಚಾರ್ಯತ್ರಯರ ಉದ್ಗ್ರಂಥಗಳಾಗಲೀ ಅವು ಎಲ್ಲವೂ ಭಗವಂತನ ಇರುವಿಕೆಯನ್ನು, ಈ ಲೋಕವನ್ನು ನಡೆಸುತ್ತಿರುವ ಆ ಸರ್ವಶಕ್ತನನ್ನು ಕುರಿತ ಚಿಂತನೆಗಳೇ ಆಗಿವೆ. ಭಾರತೀಯರ ಉದಾರತೆಗೆ ಹೋಲಿಕೆಯೇ ಇಲ್ಲ ಎಂದು ಹೇಳಬಹುದು. ಏಕೆ ಎನ್ನುತ್ತೀರೋ? ಅವರು ಎಂದೂ ನನ್ನ ಧರ್ಮವೇ ಶ್ರೇಷ್ಠ, ನನ್ನ ದೇವರೇ ಶ್ರೇಷ್ಠ ಎಂದು ಹೇಳಲಿಲ್ಲ. ಬಂಗಾರ ಒಂದೇ. ಅದರಿಂದ ಓಲೆ, ಸರ, ಬಳೆ ಯಾವ ಒಡವೆಗಳನ್ನಾದರೂ ಮಾಡಿಸಬಹುದು. ಒಡವೆಗಳ ಹೆಸರು ಬೇರೆ ಬೇರೆ ಆದರೂ ಮೂಲ ದ್ರವ್ಯ ಒಂದೇ ಅಲ್ಲವೇ?



ವಿಮಾನಗಳ ಬಗ್ಗೆ ಸಾವಿರಾರು ವರುಷಗಳ ಹಿಂದೆಯೇ ಭಾರದ್ವಾಜರು ಅಮೂಲ್ಯವಾದ ವೈಮಾನಿಕ ಶಾಸ್ತ್ರ ಎಂಬ ಕೃತಿಯನ್ನೇ ರಚಿಸಿದ್ದರು ಎಂಬುದು ಹೆಚ್ಚು ರೋಚಕವೋ ರೈಟ್ ಸಹೋದರರು ಎರಡು ನೂರು ವರ್ಷಗಳ ಹಿಂದೆ ವಿಮಾನವನ್ನು ಕಂಡು ಹಿಡಿದರು ಎಂಬ ಸಂಗತಿ ಹೆಚ್ಚು ರೋಚಕವೋ ನೀವೇ ನಿರ್ಧರಿಸಿ.

ಭಾರತದಲ್ಲಿ ಯಾವುದೇ ವಿಷಯವಿರಲಿ, ಅಧ್ಯಯನ, ಸಂಶೋಧನೆ ನಡೆದಿತ್ತು ಎನ್ನಲು ಅವರುಗಳು ರಚಿಸಿರುವ ಗ್ರಂಥಗಳೇ ಪುಷ್ಟಿಯನ್ನು ನೀಡುತ್ತವೆ. ಭಾರತೀಯ ವೈದ್ಯಕೀಯ ಶಾಸ್ತ್ರದ ಪಿತಾಮಹ ಎಂದು ಗೌರವಿಸಲ್ಪಡುವ ಚರಕ ಮಹರ್ಷಿಯ ಚರಕ ಸಂಹಿತಾ, ಪ್ಲಾಸ್ಟಿಕ್ ಸರ್ಜರಿಯ ಪಿತಾಮಹ ಎಂದು ಕರೆಸಿಕೊಳ್ಳುವ ಸುಶ್ರುತನ ಸುಶ್ರುತ ಸಂಹಿತಾ, ಗಣಿತಶಾಸ್ತ್ರ, ಲೋಹಶಾಸ್ತ್ರ, ಸಸ್ಯಶಾಸ್ತ್ರ, ಅಶ್ವಶಾಸ್ತ್ರ, ಗಜಶಾಸ್ತ್ರ, ಪಾಕಶಾಸ್ತ್ರ, ವಾಸ್ತುಶಾಸ್ತ್ರ, ಕಾಮಶಾಸ್ತ್ರ ಹೀಗೆ ಹೇಳುತ್ತಾ ಹೋದರೆ, ಕೊನೆ ಎಲ್ಲಿ? ಸಮಯವನ್ನು ಗಂಟೆ, ವಾರ, ಪಕ್ಷ, ಮಾಸ ಇತ್ಯಾದಿಯಾಗಿ ವಿಂಗಡಿಸಿದುದೇನು ಸಾಮಾನ್ಯವೇ? ಸಂಖ್ಯೆಯನ್ನು ಎಣಿಸುವ ವಿಧಾನವೂ ಭಾರತೀಯರು ಅರಿತಿದ್ದರು. ಸೊನ್ನೆಯ ಪರಿಕಲ್ಪನೆಯೂ ಭಾರತೀಯರದೇ ಎಂಬುದು ಈಗ ಎಲ್ಲರಿಗೂ ತಿಳಿದ ವಿಚಾರವೇ ಆಗಿದೆ.

ಬಹು ಹಿಂದೆಯೇ ತರ್ಕಶಾಸ್ತ್ರದಲ್ಲಿ ಅಣುವಿನ ಬಗ್ಗೆ ಹೇಳಲಾಗಿದೆ. ನಾವು ಇಂದು ಆಟಮ್‌ಗಳ ಬಗ್ಗೆ ತಿಳಿದುಕೊಳ್ಳುತ್ತಿದ್ದೇವೆ. ಖಗೋಳ ಶಾಸ್ತ್ರದಲ್ಲಿ ನಕ್ಷತ್ರಗಳನ್ನು ಕುರಿತಂತೆ ಅನೇಕ ಮಾಹಿತಿಗಳು ಲಭ್ಯ. ನಕ್ಷತ್ರಗಳ ಹೆಸರು, ಅವುಗಳ ಸ್ಥಾನ ಈ ಎಲ್ಲದರ ಬಗ್ಗೆ ಇಂದು ನಾವು ಬಳಸುವ ಟೆಲಿಸ್ಕೋಪ್ ಇಲ್ಲದೆಯೋ ಅಥವಾ ನಮ್ಮ ಅರಿವಿಗೆ ಬಾರದ ಮತ್ಯಾವುದಾದರೂ ಸಾಧನದ ಮೂಲಕವೋ ಅಥವಾ ಮತ್ತಿನ್ನು ಹೇಗೋ ಅಂತೂ ಅವರು ಸಹಸ್ರಾರು ವರ್ಷಗಳ ಹಿಂದೆಯೇ ಕುತೂಹಲಿಗಳಾಗಿದ್ದಷ್ಟೇ ಅಲ್ಲ, ಅದರ ಬಗ್ಗೆ ಆಳವಾದ ಅಧ್ಯಯನವನ್ನು ಮಾಡಿದ್ದರೂ ಎಂಬುದಂತೂ ಸತ್ಯ.

ಮಹಾಭಾರತದಲ್ಲಿ ಇಲ್ಲದುದು ಜಗತ್ತಿನಲ್ಲಿ ಏನೂ ಇಲ್ಲ ಎಂಬ ಹೇಳಿಕೆ ಒಂದು ಇದೆ. ಅಂದರೆ, ಜಗತ್ತಿನಲ್ಲಿ ಇರುವುದೆಲ್ಲವೂ ಅದರೊಳಗೆ ಇದೆ ಎಂದು ಅರ್ಥ. ವ್ಯಾಸರು ಗಾಂಧಾರಿಯ ಭ್ರೂಣಗಳನ್ನು ಔಷಧಿಯುಕ್ತವಾದ ತುಪ್ಪದ ಗಡಿಗೆಗಳಲ್ಲಿ ಇಟ್ಟು, ಅವುಗಳನ್ನು ಕಾಪಾಡಿದರು ಅಂದರೆ, ಅದು ಒಂದು ರೀತಿಯ ಇನ್ಕ್ಯುಬೇಟರ್‌ಗಳು ತಾನೇ? ಇಂದು ನಾವು ಪ್ರಾಣಿಗಳ ಕ್ಲೋನಿಂಗ್ ಬಗ್ಗೆ ಅರಿತಿದ್ದೇವೆ. ವ್ಯಾಸರು ಅಂದೇ ಅದನ್ನು ಮಾಡಿದ್ದಿರಬಹುದೇ? ಶುಕ ಮುನಿಗಳು ಅದರ ಫಲವೇ ಇರಬೇಕು ಎನ್ನುವುದರಲ್ಲಿ ಸಂಶಯ ಏಕೆ?


ಇನ್ನು ಆಧ್ಯಾತ್ಮದ ವಿಷಯಕ್ಕೆ ಬಂದರಂತೂ ನಮ್ಮ ವೇದ, ಉಪನಿಷತ್ತುಗಳು, ಆಚಾರ್ಯತ್ರಯರ ಉದ್ಗ್ರಂಥಗಳಾಗಲೀ ಅವು ಎಲ್ಲವೂ ಭಗವಂತನ ಇರುವಿಕೆಯನ್ನು, ಈ ಲೋಕವನ್ನು ನಡೆಸುತ್ತಿರುವ ಆ ಸರ್ವಶಕ್ತನನ್ನು ಕುರಿತ ಚಿಂತನೆಗಳೇ ಆಗಿವೆ. ಭಾರತೀಯರ ಉದಾರತೆಗೆ ಹೋಲಿಕೆಯೇ ಇಲ್ಲ ಎಂದು ಹೇಳಬಹುದು. ಏಕೆ ಎನ್ನುತ್ತೀರೋ? ಅವರು ಎಂದೂ ನನ್ನ ಧರ್ಮವೇ ಶ್ರೇಷ್ಠ, ನನ್ನ ದೇವರೇ ಶ್ರೇಷ್ಠ ಎಂದು ಹೇಳಲಿಲ್ಲ. ಬಂಗಾರ ಒಂದೇ. ಅದರಿಂದ ಓಲೆ, ಸರ, ಬಳೆ ಯಾವ ಒಡವೆಗಳನ್ನಾದರೂ ಮಾಡಿಸಬಹುದು. ಒಡವೆಗಳ ಹೆಸರು ಬೇರೆ ಬೇರೆ ಆದರೂ ಮೂಲ ದ್ರವ್ಯ ಒಂದೇ ಅಲ್ಲವೇ?

ಮಣ್ಣಿನಿಂದ ಮಡಕೆ, ತಟ್ಟೆ, ಕುಂಡ ಯಾವುದನ್ನಾದರೂ ಮಾಡಿ. ಮೂಲ ಮಣ್ಣು ಎನ್ನುವುದನ್ನು ಅರಿತರೆ ಸಾಕಲ್ಲವೇ? ಹಾಗೆಯೇ ಭಗವಂತನನ್ನು ಯಾವ ಹೆಸರಿನಿಂದ ಕರೆದರೂ ಆ ಭಗವಂತ ಒಬ್ಬನೇ. ಎಲ್ಲ ಪ್ರಾಣಿಗಳಲ್ಲಿ ಇರುವ ಜೀವಾತ್ಮ ಒಂದೇ. ಇದನ್ನು ಅರ್ಥ ಮಾಡಿಕೊಂಡರೆ ದ್ವೇಷ ಎಲ್ಲಿಯದು? ಚಾಮುಂಡಿಬೆಟ್ಟಕ್ಕೆ ಹೋಗುವ ಮಾರ್ಗ, ರೀತಿ ಬೇರೆ ಬೇರೆಯದಿರಬಹುದು. ಕೆಲವರು ಮೆಟ್ಟಿಲುಗಳನ್ನು ಹತ್ತಿದರೆ, ಕೆಲವರು ಬಸ್ಸು, ಕಾರಿನಲ್ಲಿ ಹೋಗಬಹುದು. ಹಿಂದೆ ಕುದುರೆ ಮೇಲೆ ಹೋಗುತ್ತಿದ್ದರು. ಎಲ್ಲರೂ ಹೋಗುವುದು ಆ ದೇವಿಯ ದರ್ಶನಕ್ಕೇ ಅಲ್ಲವೇ? ಮಾರ್ಗಗಳು ಭಿನ್ನವಾದರೇನು, ಗುರಿ ಒಂದೇ ಅಲ್ಲವೇ? ಇಷ್ಟು ಸರಳವಾದ, ಪ್ರೇಮ, ಶಾಂತಿ, ಹೊಂದಾಣಿಕೆ, ಸಹಿಷ್ಣುತೆ, ತಾಳ್ಮೆಯ ವಿಚಾರಗಳೇಕೆ ಮನುಷ್ಯರಿಗೆ ಬೇಡವಾಗುತ್ತದೆ? ಹಿಂಸೆ, ಕ್ರೌರ್ಯ, ದಬ್ಬಾಳಿಕೆಗಳಿಗೇ ಮನಸ್ಸು ಏಕೆ ಸಮೀಪವಾಗುತ್ತದೆ? ಇದಕ್ಕೆ ಉತ್ತರಿಸುವವರು ಯಾರು?

ಮಾನ್ಯತೆ, ನೋಂದಣಿ ರದ್ದಾದ ಶಾಲೆಗೆ ಮಕ್ಕಳ ದಾಖಲಿಸಬೇಡಿ

ಮೈಸೂರು, ಜ.24–ಉದಯಗಿರಿಯಲ್ಲಿರುವ ಹೋಲಿ ಪೈತ್ ಇಂಟರ್ ನ್ಯಾಷನಲ್ ಶಾಲೆಯ ಮಾನ್ಯತೆ ಮತ್ತು ನೋಂದಣಿಯನ್ನು ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರು (ಆಡಳಿತ) ಹಿಂಪಡೆಯುವುದರಿಂದ 2026–27ನೇ ಶೈಕ್ಷಣಿಕ ಸಾಲಿಗೆ ಮಕ್ಕಳನ್ನು ದಾಖಲು ಮಾಡಬಾರದು. ಸದರಿ ಶಾಲೆಯಲ್ಲಿ ಪ್ರಸ್ತುತ ವ್ಯಾಸಂಗ ಮಾಡುತ್ತಿರುವ ಮಕ್ಕಳನ್ನು ಹತ್ತಿರದ ಶಾಲೆಗೆ ದಾಖಲಿಸಲು ಇಲಾಖೆಯು ಬದ್ಧವಾಗಿರುತ್ತದೆ. ಪೋಷಕರು ಸದರಿ ಶಾಲೆಗೆ ಮಕ್ಕಳನ್ನು ದಾಖಲು ಮಾಡಿದ್ದಲ್ಲಿ ಪೋಷಕರೇ ಜವಾಬ್ದಾರರೆಂದು ಉತ್ತರ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಭಿನಂದನೆ



ಜೆಡಿಎಸ್ ಮುಖಂಡ ರಮೇಶ್ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅವರನ್ನು ಮಾಜಿ ಶಾಸಕ ಎಲ್.ನಾಗೇಂದ್ರ ಆತ್ಮೀಯವಾಗಿ ಅಭಿನಂದಿಸಿ, ಶುಭಾಶಯ ಕೋರಿದರು. ಈ ವೇಳೆ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಕೆ.ಗಿರೀಶ್, ಅರವಿಂದ್, ಸಂತೋಷ್, ಕಾರ್ತಿಕ್, ಲಕ್ಷ್ಮಿಕಾಂತ್, ರಾಮು ಇದ್ದರು.

ಬ್ಯೂಟಿ ಪಾರ್ಲರ್‌ನಲ್ಲಿ ಮಹಿಳೆಯ 3 ಲಕ್ಷ ಮೌಲ್ಯದ ಆಭರಣ ನಾಪತ್ತೆ

ಮೈಸೂರು,ಜ.24(ಪಿಎಂ)– ಮಹಿಳೆಯೊಬ್ಬರು ಫೇಶಿಯಲ್ ಮಾಡಿಸಿಕೊಳ್ಳಲು ಬ್ಯೂಟಿ ಪಾರ್ಲರ್‌ನಲ್ಲಿ ತೆಗೆದಿಟ್ಟಿದ್ದ 3 ಲಕ್ಷ ರೂ. ಮೌಲ್ಯದ ಚಿನ್ನಾಭರಣ ನಾಪತ್ತೆಯಾಗಿರುವ ಸಂಬಂಧ ಲಕ್ಷ್ಮೀಪುರಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

2025ರ ಜು.29ರಂದು ಫೇಶಿಯಲ್ ಮಾಡಿಸಿಕೊಳ್ಳಲು ಹೋಗಿದ್ದಾಗ, ಬ್ಯೂಟಿ ಪಾರ್ಲರ್‌ನಲ್ಲಿ ಮಾಲೀಕರು, ಅಲ್ಲಿನ ಕೆಲಸದಾಕೆ ಇದ್ದರು. ಫೇಶಿಯಲ್ ಮಾಡಿ ಸಲು ರೂಮಿನೊಳಗೆ ಕರೆದುಕೊಂಡು ಹೋಗುವಾಗ, ನಾನು ಹಾಕಿಕೊಂಡಿದ್ದ ಒಡವೆಗಳನ್ನು ಈ ಇಬ್ಬರು ತೆಗೆದಿಡಿಸಿದರು. ಫೇಶಿಯಲ್ ನಂತರ ಹೊರ ಬಂದು ನೋಡಿದಾಗ ಆಭರಣಗಳು ನಾಪತ್ತೆಯಾಗಿದ್ದವು ಎಂದು ಮಹಿಳೆಯು ದೂರಿನಲ್ಲಿ ಆರೋಪಿಸಿದ್ದಾರೆ.

ನನ್ನ 37 ಗ್ರಾಂನ ಮಾಂಗಲ್ಯ ಸರ, 18 ಗ್ರಾಂನ ಸರ, ಅದಕ್ಕೆ ಅಳವಡಿಸಿದ್ದ ಡಾಲರ್ ಸೇರಿದಂತೆ ಒಟ್ಟು 55 ಗ್ರಾಂನ ಆಭರಣಗಳನ್ನು ಅವರು ತಿಳಿಸಿದ ಜಾಗದಲ್ಲೇ ಇಟ್ಟು ರೂಂನೊಳಗೆ ಹೋಗಿದ್ದೆ. ಆಭರಣಗಳು ನಾಪತ್ತೆಯಾದ ಬಗ್ಗೆ ಬ್ಯೂಟಿ ಪಾರ್ಲರ್ ಮಾಲೀಕರನ್ನು ಕೇಳಿದಾಗ, ಅವರು ನಮ್ಮ ಕೆಸಲದಾಕೆ ತೆಗೆದಿಟ್ಟಿದ್ದಾರೆ. ಅವರು ಹೊರಗಡೆ ಹೋಗಿದ್ದು, ಬಂದ ಕೂಡಲೇ ಕೊಡಿಸುವುದಾಗಿ ಹೇಳಿದರು. ಹಾಗಾಗಿ ಎರಡು ತಾಸು ಬಿಟ್ಟು ಮರಳಿ ಹೋಗಿ ಕೇಳಿದರೆ ಕೆಲಸದಾಕೆ ಇನ್ನು ಬಂದಿಲ್ಲವೆಂದು ಸಬೂಬು ಹೇಳಿದರು. ನಂತರದಲ್ಲಿ ನನ್ನ ಫೋನ್ ಕರೆ ಸ್ವೀಕರಿಸದೇ ವಂಚಿಸಿದ್ದಾರೆ ಎಂದು ಎಫ್‌ಐಆರ್‌ನಲ್ಲಿ ಮಹಿಳೆಯು ದೂರಿದ್ದಾರೆ.

ಜ.28, ಚಿಂತಕರ ಚಿಂತನಾ ಸಭೆ

ಮೈಸೂರು, ಜ.24– ಮೈಸೂರಿನ ರಾಷ್ಟ್ರಕವಿ ಕುವೆಂಪು ಅವರ ಉದಯರವಿ ನಿವಾಸವನ್ನು ಸ್ಮಾರಕವನ್ನಾಗಿ ಅಭಿವೃದ್ಧಿಪಡಿಸುವಂತೆ ಆಗ್ರಹಿಸಿ, ಮೈಸೂರಿನ ವಿಜಯನಗರದ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣದಲ್ಲಿ ಜ.28 ರಂದು ಚಿಂತಕರ ಚಿಂತನಾ ಸಭೆ ಆಯೋಜಿಸಲಾಗಿದೆ. ಸಭೆಯಲ್ಲಿ ಹೋರಾಟಗಾರರು, ಸಾಹಿತಿಗಳು, ರೈತಸಂಘ ಸೇರಿದಂತೆ ಕುವೆಂಪು ಅಭಿಮಾನಿಗಳು ಭಾಗಿಯಾಗಲಿದ್ದಾರೆ ಎಂದು ಉದಯರವಿ ಕುವೆಂಪು ಸ್ಮಾರಕ ಹೋರಾಟ ಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ.

ಮೈಸೂರು ನಗರದ ಅಂದಗೆಡಿಸುತ್ತಿರುವ ಫ್ಲೆಕ್ಸ್, ಬ್ಯಾನರ್ ತೆರವಿಗೆ ನಿವೃತ್ತ ಪೊಲೀಸ್ ಅಧಿಕಾರಿ ಶಂಕರೇಗೌಡ ಆಗ್ರಹ

ಮಹದುದ್ದೇಶಿತ ಯಜ್ಡಿ ಟ್ರಾಫಿಕ್ ಪಾರ್ಕ್ ಪುನರುಜ್ಜೀವನಕ್ಕೂ ಒತ್ತಾಯ







ಮೈಸೂರು,ಜ.24– ಮೈಸೂರು ನಗರದ ಅಂದ ಹಾಳು ಮಾಡುತ್ತಿರುವ ಅನಧಿಕೃತ ಫ್ಲೆಕ್ಸ್, ಬ್ಯಾನರ್‌ಗಳನ್ನು ಅಳವಡಿಸುವವರ ಪ್ರಕರಣ ದಾಖಲಿಸುವಂತೆ ಹಾಗೂ ಯಜ್ಡಿ ಟ್ರಾಫಿಕ್ ಪಾರ್ಕ್ ಪುನರುಜ್ಜೀವನಗೊಳಿಸುವಂತೆ ನಿವೃತ್ತ ಪೊಲೀಸ್ ವರಿಷ್ಠಾಧಿಕಾರಿ ಶಂಕರೇಗೌಡ ಆಗ್ರಹಿಸಿದ್ದಾರೆ.

ಮೈಸೂರು ಮಹಾನಗರ ಪಾಲಿಕೆ ಆಯುಕ್ತರಿಗೆ ಪತ್ರ ಬರೆದಿರುವ ಅವರು, ಮಹಾರಾಜರ ದೂರದೃಷ್ಟಿಯಿಂದ ನಿರ್ಮಿತ ಅಂದ–ಚಂದದ ಮೈಸೂರು ನಗರಕ್ಕೆ ಮನಸೋತು ದೇಶ–ವಿದೇಶಗಳಿಂದ ಪ್ರತಿ ವರ್ಷ ಲಕ್ಷಾಂತರ ಪ್ರವಾಸಿಗರು ಭೇಟಿ ನೀಡುತ್ತಿದ್ದಾರೆ. ಅವರು ವಾಪಸ್ಸು ಹೋಗುವಾಗ ಈ ನಗರದ ಬಗ್ಗೆ ಒಳ್ಳೆಯ ಅಭಿಪ್ರಾಯ ತೆಗೆದುಕೊಂಡು ಹೋಗುವಂತಹ ವಾತಾವರಣ ಕಲ್ಪಿಸಬೇಕಾಗಿದೆ.

ಇಡೀ ನಗರದಲ್ಲಿ ಇದಕ್ಕೆ ಅಪಚಾರವೆಂಬಂತೆ ವಿಶೇಷವಾಗಿ ನಗರದ ಹೃದಯ ಭಾಗದ ವೃತ್ತಗಳು, ರಸ್ತೆಗಳಲ್ಲಿ ಹುಟ್ಟುಹಬ್ಬದ, ಭಾವಪೂರ್ಣ ಶ್ರದ್ಧಾಂಜಲಿಯ ಮತ್ತು ಶುಭಾಶಯ ಕೋರುವ ಅನಧಿಕೃತ ಫ್ಲೆಕ್ಸ್ ಬೋರ್ಡ್‌ಗಳು ರಾರಾಜಿಸುತ್ತಿವೆ. ಅವುಗಳಿಗೆ ಯಾವುದೇ ಸ್ಥಳೀಯ ಆಡಳಿತದ ಅನುಮತಿ ಇಲ್ಲ. ಇದು THE KARNATAKA OPEN PLACES (PREVENTION OF DISFIGUREMENT) ಆಕ್ಟ್ 1981 ಕಲಂ 3, 8 ಕಾಗ್ನಿಜೆಲ್ ಅಪರಾಧ.



ಶಂಕರೇಗೌಡ

ಇಂತಹ ಅನಧಿಕೃತ ಫ್ಲೆಕ್ಸ್, ಬ್ಯಾನರ್‌ಗಳಿಂದ ಮಹಾನಗರ ಪಾಲಿಕೆ ಆದಾಯಕ್ಕೂ ಕಲ್ಲು ಬೀಳುತ್ತಿದೆ. ಎಲ್ಲಕ್ಕಿಂತ ಮುಖ್ಯವಾಗಿ ಕಾನೂನು ಸುವ್ಯವಸ್ಥೆ ಮತ್ತು ಸಮಾಜದ ಸಾಮರಸ್ಯಕ್ಕೆ ಧಕ್ಕೆಯಾಗುತ್ತಿದೆ. ಇದಕ್ಕೆ ತಾಜಾ ನಿದರ್ಶನ ಬಳ್ಳಾರಿ ಮತ್ತು ಶಿಡ್ಲಘಟ್ಟದ ಘಟನೆಗಳು. ಈ ಹಿನ್ನಲೆಯಲ್ಲಿ ಮೈಸೂರು ನಗರದ ಅಂದಗೆಡಿಸುತ್ತಿರುವ ಫ್ಲೆಕ್ಸ್, ಬ್ಯಾನರ್ ಹಾಕುವುದನ್ನು ತಡೆಯುವಂತೆಯೂ ಹಾಗೂ ಹಾಕುವವರ ವಿರುದ್ಧ ಮೇಲ್ಕಂಡ ಕಾಯಿದೆ ರೀತ್ಯಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು ಮಾಡುವಂತೆ ಪತ್ರದ ಮೂಲಕ ಒತ್ತಾಯಿಸಿದ್ದಾರೆ.

ಯಜ್ಡಿ ಟ್ರಾಫಿಕ್ ಪಾರ್ಕ್: ಮೈಸೂರು ನಗರದಲ್ಲಿ ಸಂಚಾರ ದಟ್ಟಣೆ ಜಾಸ್ತಿಯಾಗುತ್ತಿದ್ದು ರಸ್ತೆ ಅಪಘಾತಗಳೂ ಏರುಗತಿಯಲ್ಲಿವೆ. ಪರಿಹಾರಕ್ಕಾಗಿ ಶಾಲಾ–ಕಾಲೇಜು ಮಕ್ಕಳಲ್ಲಿ ಸಂಚಾರ ನಿಯಮ ಪಾಲನೆ ಬಗ್ಗೆ ಜಾಗೃತಿ ಮೂಡಿಸಬೇಕಾದುದು ಅಗತ್ಯವಾಗಿ ಕಂಡು ಬಂದಿದೆ. ಎಫ್.ಕೆ.ಇರಾನಿ ಅವರ ಮಾಲೀಕತ್ವದ ಯಜ್ಡಿ ಮೋಟಾರ್ ಸೈಕಲ್ ಉತ್ಪಾದನಾ ಘಟಕದ ವತಿಯಿಂದ 1981ರಲ್ಲಿ ನಜರ್‌ಬಾದ್‌ನಲ್ಲಿರುವ ಪೊಲೀಸ್ ಆಯುಕ್ತರ ಕಚೇರಿ ಮುಂಭಾಗ ಟ್ರಾಫಿಕ್ ಪಾರ್ಕ್ ನಿರ್ಮಿಸಿ, ಅಲ್ಲಿ ಶಾಲಾ ಮಕ್ಕಳಿಗೆ ಸಂಚಾರ ನಿಯಮ ಮತ್ತು ಪಾಲನೆ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿತ್ತು. ಅಂದಿನ ಮುಖ್ಯಮಂತ್ರಿಗಳಾಗಿದ್ದ ಗುಂಡೂರಾಯರು ಅದನ್ನು ಉದ್ಘಾಟಿಸಿದ್ದರು.

ಇತ್ತೀಚಿಗೆ ಟ್ರಾಫಿಕ್ ಪಾರ್ಕ್ ನಿರ್ವಹಣೆ ಇಲ್ಲದೇ ಪಾಳು ಬಿದ್ದು ಪುಂಡ–ಪೋಕರಿಗಳ ಆವಾಸಸ್ಥಾನ ಆಗಿರುವುದು ಬೇಸರದ ಸಂಗತಿ. ಮೈಸೂರು ಪಾಲಿಕೆ ರಸ್ತೆ ಸುರಕ್ಷತೆಗೆಂದು ಸೆಸ್ ಸಂಗ್ರಹ ಮಾಡಲಾಗುತ್ತಿದೆ. ಆ ಹಣದ ಸ್ವಲ್ಪ ಭಾಗವನ್ನು ಯಜ್ಡಿ ಪಾರ್ಕ್ ನಿರ್ವಹಣೆ ಮಾಡಲು ಮುಂದಾಗಬೇಕು. ಜೊತೆಗೆ ಪ್ರಸ್ತುತ ಪಾಲಿಕೆ ಬಜೆಟ್‌ನಲ್ಲಿ ಹಣ ಮೀಸಲಿಡಬೇಕು. ಅದರ ಉಪಯೋಗದ ಬಗ್ಗೆ ಮೇಲ್ವಿಚಾರಣೆಗೆ ಪೊಲೀಸ್, ಮಹಾನಗರಪಾಲಿಕೆ, ಶಿಕ್ಷಣ ಇಲಾಖೆ ಮತ್ತು ಸಾರ್ವಜನಿಕರ ಸಮಿತಿ ರಚಿಸಬೇಕು ಎಂದು ಶಂಕರೇಗೌಡರು ಸಲಹೆ ನೀಡಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ ಭಾನುವಾರ 25 ಜನವರಿ 2026

ಮೈಸೂರು–ಕುಶಾಲನಗರ ರೈಲ್ವೆ ಯೋಜನೆ ಬಗ್ಗೆ ಪುನರ್ ಪರಿಶೀಲನೆ ನಡೆಸಲಿ



ಮೈಸೂರು: ಮೈಸೂರು–ಕುಶಾಲನಗರ ರೈಲ್ವೆ ಮಾರ್ಗ ಯೋಜನೆ ಬಗ್ಗೆ ಪುನರ್ ಪರಿಶೀಲನೆ ಮಾಡುವಂತೆ ರೈಲ್ವೆ ಸಚಿವಾಲಯಕ್ಕೆ ಮನವಿ ಮಾಡಿದ್ದೇನೆ ಎಂದು ಯದುವೀರ್ ತಿಳಿಸಿದರು.

ಕುಶಾಲನಗರ ಭಾಗಕ್ಕೆ ರೈಲ್ವೆ ಯೋಜನೆ ಅತ್ಯಗತ್ಯವಾಗಿದೆ. ಮೈಸೂರು ಹಾಗೂ ಕೊಡಗು ಜಿಲ್ಲೆಯ ಜನರ ಹಿತದೃಷ್ಟಿಯಿಂದ ಈ ಯೋಜನೆ ಅನುಷ್ಠಾನಗೊಳ್ಳಬೇಕು. ಈ ಹಿನ್ನೆಲೆಯಲ್ಲಿ ಮತ್ತೊಮ್ಮೆ ಕೇಂದ್ರ ಸರ್ಕಾರದ ಗಮನ ಸೆಳೆದು ವಸ್ತುಸ್ಥಿತಿ ಮನವರಿಕೆ ಮಾಡುತ್ತೇನೆ. ಇದಕ್ಕೆ ರಾಜ್ಯ ಸರ್ಕಾರ ಕೂಡ ಸಹಕಾರ ನೀಡಬೇಕು ಎಂದು ಹೇಳಿದರು.

ಈ ಯೋಜನೆಗೆ ಅಗತ್ಯವಿರುವ ಭೂಮಿಯನ್ನು ರಾಜ್ಯ ಸರ್ಕಾರ ರೈಲ್ವೆ ಇಲಾಖೆಗೆ ಹಸ್ತಾಂತರ ಮಾಡಿಲ್ಲ ಎಂದು ಇದೇ ವೇಳೆ ಯದುವೀರ್ ಆರೋಪಿಸಿದರು. ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ನಡೆಯುತ್ತಿರುವ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಕರ್ನಾಟಕದ ಸ್ತಬ್ಧಚಿತ್ರ ಭಾಗಿಯಾಗದಿರುವುದಕ್ಕೆ ರಾಜ್ಯ ಸರ್ಕಾರ ನೇರ ಕಾರಣ ಎಂದು ಈ ವೇಳೆ ಯದುವೀರ್ ಆರೋಪಿಸಿದರು.

ಸ್ತಬ್ಧಚಿತ್ರ ಭಾಗವಹಿಸುವ ಕುರಿತಂತೆ ರಾಜ್ಯ ಸರ್ಕಾರ ಕೇಂದ್ರದೊಂದಿಗೆ ಸರಿಯಾಗಿ ಪತ್ರ ವ್ಯವಹಾರ ನಡೆಸಿಲ್ಲ. ಇದರಿಂದ ರಾಜ್ಯದ ಸ್ತಬ್ಧಚಿತ್ರ ಈ ಬಾರಿಯ ಪರೇಡ್‌ನಲ್ಲಿ ಇರುವುದಿಲ್ಲ ಎಂದು ತಿಳಿಸಿದರು.

ವಿಧಾನಸಭೆಯ ಜಂಟಿ ಅಧಿವೇಶನದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಭಾಗವಹಿಸಿದ್ದ ಸಂದರ್ಭದಲ್ಲಿ ಕಾಂಗ್ರೆಸ್ ಶಾಸಕರು ಗೂಂಡಾ ವರ್ತನೆ ತೋರಿರುವುದು ಖಂಡನೀಯ ಎಂದು ಯದುವೀರ್ ಹೇಳಿದರು.

ರಾಜ್ಯಪಾಲರು ಸಂವಿಧಾನಬದ್ಧವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿರುವುದು ಪ್ರಜಾಪ್ರಭುತ್ವದ ಕಗ್ಗೊಲೆ. ರಾಜ್ಯ ಸರ್ಕಾರದ ನಡೆಯನ್ನು ರಾಜ್ಯದ ಜನರು ಸೂಕ್ಷ್ಮವಾಗಿ ಗಮನಿಸುತ್ತಿದ್ದಾರೆ ಎಂದರು.

ಬಳ್ಳಾರಿಯಲ್ಲಿ ಜನಾರ್ಧನ ರೆಡ್ಡಿ ಅವರ ಮಾಡೆಲ್ ಹೌಸ್‌ಗೆ ಬೆಂಕಿ ಹಚ್ಚಲಾಗಿದೆ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿರುವ ಬಗ್ಗೆ ಇಂತಹ ಹಲವು ನಿದರ್ಶನಗಳಿವೆ ಎಂದು ಯದುವೀರ್ ಆಪಾದಿಸಿದರು.

ದೆಹಲಿಯ ಬುದ್ಧಗಯಾ ವಿಮೋಚನಾ ಚಳವಳಿಯಲ್ಲಿ ಮೈಸೂರು ಭಾಗದಿಂದ ಬೌದ್ಧ ಅನುಯಾಯಿಗಳು ಅಧಿಕ ಸಂಖ್ಯೆಯಲ್ಲಿ ಪಾಲ್ಗೊಳ್ಳಿ

ಬೌದ್ಧ ಚಿಂತಕ ಬಿ.ಗೋಪಾಲ್ ಮನವಿ

ಮೈಸೂರು,ಜ.24(ಎಂಟಿವೈ)– ನವದೆಹಲಿಯಲ್ಲಿ ಜ.25ರಂದು ನಡೆಯುವ ಬುದ್ಧಗಯಾ ವಿಮೋಚನೆ ಐತಿಹಾಸಿಕ ಚಳವಳಿಯಲ್ಲಿ ಮೈಸೂರು ಭಾಗದಿಂದ ಬೌದ್ಧ ಅನುಯಾಯಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಬೌದ್ಧ ಚಿಂತಕ, ಹಿರಿಯ ಹೋರಾಟಗಾರ ಬಿ.ಗೋಪಾಲ್ ಮನವಿ ಮಾಡಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಇಎಂಆರ್‌ಸಿ ಸಭಾಂಗಣದಲ್ಲಿ ಮೈಸೂರು ವಿವಿ ಬುದ್ಧ ಬಳಗ ಆಯೋಜಿಸಿದ್ದ ಬೋದ್ ಗಯಾ ಬುದ್ಧವಿಹಾರ: ಬಿಕ್ಕಟ್ಟು ಮತ್ತು ಪರಿಹಾರ' ಕುರಿತ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದ ಅವರು, ಬುದ್ಧಗಯಾ ವಿಮೋಚನಾ ಚಳವಳಿಗೂ ಅಂತ್ಯ ಇದೆ. ಬೌದ್ಧ ಅನುಯಾಯಿಗಳು ದೆಹಲಿ ಚಲೋ ಚಳವಳಿಗೆ ಕೊಡುಗೆ ನೀಡಬೇಕು. ಆ ಮೂಲಕ ದೇಶಕ್ಕೆ ಸಂದೇಶ ರವಾನಿಸಬೇಕು. ಆಳುವವರ ಮೇಲೆ ಒತ್ತಡ ತರಬೇಕು. ರಾಜಕಾರಣಿಗಳು ಬೌದ್ಧ ಸಮ್ಮೇಳನ ಉದ್ಘಾಟಿಸುತ್ತಾರೆ. ಯಾರೋ ಬರೆದು ಕೊಟ್ಟಿದ್ದನ್ನು ಓದುತ್ತಾರೆ. ಅದನ್ನು ಕೇಳಿ ಸಾವಿರ ಜನ ಚಪ್ಪಾಳೆ ತಟ್ಟುತ್ತಾರೆ. ಪಂಚಶೀಲತತ್ವಗಳು ಗೊತ್ತಾದ ಮೇಲೂ ತಪ್ಪು ಮಾಡುವುದು ಮೂರ್ಖತನ ಅಲ್ಲವೇ. ಮೀಸಲಾತಿಯಿಂದ ಸರ್ಕಾರಿ ನೌಕರಿ ಪಡೆದ ಪರಿಶಿಷ್ಟ ಜಾತಿಯ ನೌಕರರು ಸಮುದಾಯದ ಆರ್‌ಬಿಐ. ಪ್ರತಿಭೆ, ಹಣಕಾಸುವಂತರು. ಅವರು ಇಂದಿನಿಂದ ಸಮುದಾಯದ ಪರವಾಗಿ ಕೆಲಸ ಮಾಡಿದರೆ 100 ವರ್ಷಗಳಲ್ಲಿ ಫಲಿತಾಂಶ ಬರುತ್ತದೆ ಎಂದರು.



ಮೈಸೂರು ವಿಶ್ವವಿದ್ಯಾನಿಲಯದ ಇಎಂಆರ್‌ಸಿ ಸಭಾಂಗಣದಲ್ಲಿ ನಡೆದ ಬೋದ್ ಗಯಾ ಬುದ್ಧವಿಹಾರ: ಬಿಕ್ಕಟ್ಟು ಮತ್ತು ಪರಿಹಾರ' ಕುರಿತ ವಿಚಾರ ಸಂಕಿರಣವನ್ನು ಬೌದ್ಧ ಚಿಂತಕ, ಹಿರಿಯ ಹೋರಾಟಗಾರ ಬಿ.ಗೋಪಾಲ್ ಬುದ್ಧರ ಮೂರ್ತಿಗೆ ಪುಷ್ಪಾರ್ಚನೆ ಮಾಡಿ ಉದ್ಘಾಟಿಸಿದರು.

ಸಾಮಾಜಿಕ ಹೋರಾಟಗಾರ ಅಹಿಂದ ಜವರಪ್ಪ ಮಾತನಾಡಿ, ಬಾಬರಿ ಮಸೀದಿಯನ್ನು ರಾಮಮಂದಿರವಾಗಿ ಪರಿವರ್ತಿಸಿದವರ ಜನಸಂಖ್ಯೆ ಎಷ್ಟಿದೆ. ಬುದ್ಧನನ್ನು ಅನುಸರಿಸುವವರ ಸಂಖ್ಯೆ ಎಷ್ಟಿದೆ ಎಂದು ಅವಲೋಕಿಸಬೇಕು. ಆದರೆ, ಅತಿಕ್ರಮಣ ಮಾಡುವುದು ಬೇಡ. ಕಾನೂನು ಮೂಲಕ ಸುರ್ಪದಿಗೆ ಪಡೆಯಲು ಮುಂದಾಗಬೇಕು. ಒಟ್ಟಾಗಿ ಸಾಗಿದರೆ ಬುದ್ಧಗಯಾ ವಿಮೋಚನೆ ದೊಡ್ಡ ಬಿಕ್ಕಟ್ಟು ಅಲ್ಲ ಎಂದು ಹೇಳಿದರು.

ಬೌದ್ಧ ಬಿಕ್ಕುಗಳು ಅಮೆರಿಕದಲ್ಲಿ ಶಾಂತಿಗಾಗಿ ನಡಿಗೆ ಮಾಡುತ್ತಿದ್ದಾರೆ. ಇಡೀ ಅಮೆರಿಕವೇ ಅವರನ್ನು ಸ್ವಾಗತಿಸಿದೆ, ಗೌರವ ಸಲ್ಲಿಸುತ್ತಿದೆ. ಧಮ್ಮವೂ ಜಗತ್ತಿನಾದ್ಯಂತ ಪ್ರಖರವಾಗಿದೆ. ಸಂಶೋಧನೆ ವಿದ್ಯಾರ್ಥಿಗಳು ಬೌದ್ಧ ಅವಶೇಷಗಳು, ತಥಾಗತ ಗೌತಮ ಬುದ್ಧರ ಕುರಿತಾಗಿ ಹೆಚ್ಚು ಸಂಶೋಧನೆ ಮಾಡಬೇಕು ಎಂದು ಸಲಹೆ ನೀಡಿದರು.

ಕೊಳ್ಳೇಗಾಲ ಜೇತವನದ ಮನೋರಖ್ಖಿತ ಭಂತೇಜಿ ಮಾತನಾಡಿ, ಮೀಸಲಾತಿ ಕ್ಷೇತ್ರದಿಂದ ತಮ್ಮ ಜನಗಳ ಕಷ್ಟ ಕೇಳದ, ಸರಿಯಾಗಿ ಕೆಲಸ ಮಾಡದವನನ್ನು ಕೆಳಕ್ಕೆ ಇಳಿಸಬೇಕು. ಮೈಸೂರು ವಿವಿಗೆ ಪ್ರಾಧ್ಯಾಪಕರನ್ನು ನೇಮಕ ಮಾಡದೇ ನಿಸ್ತೇಜವಾಗಿದೆ. ಪ್ರಾಥಮಿಕ ಶಾಲೆಗೆ ಶಿಕ್ಷಕರನ್ನು ನೇಮಕ ಮಾಡುತ್ತಿಲ್ಲ. ಅತಿಥಿ ಉಪನ್ಯಾಸಕರು ಅರೆಹೊಟ್ಟೆಯಲ್ಲಿ ಪಾಠ ಮಾಡಬೇಕಾದ ಸ್ಥಿತಿ ಇದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮೈಸೂರು ವಿಶ್ವವಿದ್ಯಾನಿಲಯದ ಡೀನ್ ಪ್ರೊ.ಗುರುಸಿದ್ದಯ್ಯ ಮಾತನಾಡಿ, ಬುದ್ಧಗಯಾದಿಂದ ಬಿಹಾರ ಸರ್ಕಾರಕ್ಕೆ ವಾರ್ಷಿಕ 450 ಕೋಟಿ ರೂ. ಆದಾಯ ಇದೆ. ಪ್ರವಾಸೋದ್ಯಮ ಬೆಳೆದಿದೆ. ಬುದ್ಧ ಗಯಾದಲ್ಲಿ ನಾಲ್ವರು ಹಿಂದು, ನಾಲ್ವರು ಬೌದ್ಧ ಬಿಕ್ಕುಗಳ ಸಮಿತಿ ಇದೆ. ಆ ಸಮಿತಿ ಅಧ್ಯಕ್ಷ ಜಿಲ್ಲಾಧಿಕಾರಿಯಾದರೆ, ಹಿಂದುಗಳ ಕೈ ಮೇಲಾಗುತ್ತದೆ ಎಂಬ ಕಾರಣಕ್ಕೆ ಸಮಸ್ಯೆ ಉದ್ಭವವಾಗಿದೆ. ಭಾರತದಲ್ಲಿ ಮಹಾಬೋಧಿ ಸೊಸೈಟಿಗೆ ಐತಿಹಾಸಿಕ ಹಿನ್ನೆಲೆ ಇದೆ. ಮುಸ್ಲಿಂರಿಗೆ ಮೆಕ್ಕಾ, ಕ್ರಿಶ್ಚಿಯನ್ನರಿಗೆ ವ್ಯಾಟಿಕನ್ ಹಿಂದೂಗಳಿಗೆ ಕಾಶಿ, ವಾರಣಾಸಿ ಇರುವಂತೆ ಬುದ್ಧ ಅನುಯಾಯಿಗಳಿಗೆ ಬುದ್ಧಗಯಾ ಪವಿತ್ರ ಸ್ಥಳವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಮಾಜಿ ಮೇಯರ್ ಪುರುಷೋತ್ತಮ್, ಬುದ್ಧ ಬಳಗದ ಜಗದೀಶ್ ಮಹದೇವಯ್ಯ, ಶಿವು ಬಂಡಳ್ಳಿ, ಮಹೇಶ್ ಪಿ.ಮರಳ್ಳಿ ಇನ್ನಿತರರು ಉಪಸ್ಥಿತರಿದ್ದರು.

'ಪ್ರಸಾದ' ಯೋಜನೆ ಕಾಮಗಾರಿಯಿಂದ ಚಾಮುಂಡೇಶ್ವರಿ ದೇವಸ್ಥಾನದ ಗೋಪುರಕ್ಕೆ ಹಾನಿ ಸಾಧ್ಯತೆ

ಸಂಸದ ಯದುವೀರ್ ಆತಂಕ

- ದೇವಸ್ಥಾನದ ಹಿಂದಿನ ಕಾಮಗಾರಿ ಬಗ್ಗೆ ಅಧ್ಯಯನ ಮಾಡಲಿ
- 'ಪ್ರಸಾದ' ಯೋಜನೆಯಿಂದ ಪಾರಂಪರಿಕತೆಗೆ ಧಕ್ಕೆ ಆಗಬಾರದು
- ಅಧಿಕಾರಿಗಳಿಂದ ತರಾತುರಿಯಲ್ಲಿ ಕಾಮಗಾರಿ
- ಮೊದಲು ಜನರ ಅಭಿಪ್ರಾಯ ಆಲಿಸಲಿ



ಮೈಸೂರು, ಜ.24(ಬಿಎಲ್ ಯು)– 'ಪ್ರಸಾದ' ಯೋಜನೆಯಡಿ ಚಾಮುಂಡಿ ಬೆಟ್ಟದಲ್ಲಿ ಕೈಗೊಂಡಿರುವ ಕಾಮಗಾರಿಯಿಂದ ಚಾಮುಂಡೇಶ್ವರಿ ದೇವಸ್ಥಾನದ ಗೋಪುರಕ್ಕೆ ಹಾನಿಯಾಗಬಹುದು ಎಂದು ಸಂಸದ ಯದು ವೀರ್ ಕೃಷ್ಣದತ್ತ ಚಾಮ ರಾಜ ಒಡೆಯರ್ ಆತಂಕ ವ್ಯಕ್ತಪಡಿಸಿದ್ದಾರೆ.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಇಂದು ಪತ್ರಕರ್ತರೊಂದಿಗೆ ಮಾತನಾಡಿದ ಅವರು, ದೇವಸ್ಥಾನ ನಿರ್ಮಾಣ ಮಾಡುವಾಗ ಯಾವ ರೀತಿ ಕಾಮಗಾರಿ ನಡೆಸಿದ್ದಾರೆ ಎಂದು ಅಧ್ಯಯನ ಮಾಡಲಿ, ತರುವಾಯ ಸಾಧಕ–ಬಾಧಕ ನೋಡಿಕೊಂಡು ಕಾಮಗಾರಿ ಮುಂದುವರೆಸಲಿ ಎಂದು ಸಲಹೆ ನೀಡಿದರು.

ಈ ವಿಚಾರವಾಗಿ ನನ್ನ ಅಭಿಪ್ರಾಯವನ್ನು ನಾನು ತಿಳಿಸಿದ್ದೇನೆ, ಇದರ ಜೊತೆಗೆ ಚಾಮುಂಡಿಬೆಟ್ಟದ ಗ್ರಾಮಸ್ಥರು ಕೂಡ ಕಾಮಗಾರಿಯನ್ನು ವಿರೋಧ ಮಾಡುತ್ತಿದ್ದಾರೆ. ಚಾಮುಂಡಿಬೆಟ್ಟದ ಅಭಿವೃದ್ಧಿ ಕೂಡ ಆಗಬೇಕು, ಆದರೆ ಅಲ್ಲಿನ ಪಾರಂಪರಿಕತೆಗೆ ಯಾವುದೇ ರೀತಿಯಲ್ಲೂ ಧಕ್ಕೆ ಆಗಬಾರದು ಎಂದು ಅಭಿಪ್ರಾಯಪಟ್ಟರು.

ಪ್ರಸಾದ ಯೋಜನೆ ಕಾಮಗಾರಿಗೆ ನನ್ನ ಅನುಮತಿಗಿಂತ ವಿರೋಧ ಮಾಡುತ್ತಿರುವವರ ಅನುಮತಿ ಬಹಳ ಮುಖ್ಯ. ಈ ಹಿನ್ನೆಲೆಯಲ್ಲಿ ಜನರ ಅಭಿಪ್ರಾಯ ಪಡೆದು ಕಾಮಗಾರಿ ಮುಂದುವರೆಸಲಿ ಎಂದು ಅಧಿಕಾರಿಗಳಿಗೆ ಕಿವಿಮಾತು ಹೇಳಿದರು.

ಆದರೆ ಯಾರ ಅಭಿಪ್ರಾಯವನ್ನು ಆಲಿಸದೆ ಅಧಿಕಾರಿಗಳು ತರಾತುರಿಯಲ್ಲಿ ಕಾಮಗಾರಿ ಮಾಡುತ್ತಿರುವ ಹಿನ್ನೆಲೆ ಏನು ಎಂದು ತಿಳಿಯುತ್ತಿಲ್ಲ ಎಂದು ಯದುವೀರ್ ಹೇಳಿದರು.

ಮಾದಕ ವಸ್ತು ಮಾರಾಟ; ಅಪರಾಧಿಗೆ ನಾಲ್ಕು ವರ್ಷ ಜೈಲು



ಮೈಸೂರು, ಜ.24(ಬಿಎಲ್‌ಯು)– ಮೈಸೂರು ನಗರದಲ್ಲಿ ಮಾದಕ ವಸ್ತು ಮಾರಾಟ ಮಾಡುತ್ತಿದ್ದ ವ್ಯಕ್ತಿಗೆ ಮೈಸೂರಿನ 7ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ 4 ವರ್ಷ ಜೈಲು ಶಿಕ್ಷೆ ವಿಧಿಸಿದೆ.

ಮೈಸೂರಿನ ಶಾಂತಿನಗರದ ನಿವಾಸಿ ಮೊಹಮ್ಮದ್ ಅಕ್ಬರ್‌ಗೆ ಶಿಕ್ಷೆ ವಿಧಿಸಲಾಗಿದ್ದು, ಈತನ ವಿರುದ್ಧ ಮಾದಕ ವಸ್ತು ಮಾರಾಟ ಮಾಡುತ್ತಿದ್ದ ಆರೋಪದಡಿ ಉದಯಗಿರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಈ ಸಂಬಂಧ ತನಿಖೆ ನಡೆಸಿದ ಪೊಲೀಸ್ ಅಧಿಕಾರಿಗಳು, ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ಮೈಸೂರಿನ 7ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮೊಹಮ್ಮದ್ ಅಕ್ಬರ್‌ಗೆ 4 ವರ್ಷ ಜೈಲು ಶಿಕ್ಷೆ ಹಾಗೂ 40 ಸಾವಿರ ರೂ. ದಂಡ ವಿಧಿಸಿ, ತೀರ್ಪು ಪ್ರಕಟಿಸಿದ್ದಾರೆ.

ಕಲೆ, ಸಂಸ್ಕೃತಿ ಅಳವಡಿಸಿಕೊಂಡ ಮಕ್ಕಳು ಉತ್ತಮ ಪ್ರಜೆಗಳಾಗಿ ದೇಶ ಕಟ್ಟುತ್ತಾರೆ

- ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಡಾ.ಪದ್ಮಾ ಶೇಖರ್ ಅಭಿಮತ
- ಮಕ್ಕಳ ಸಾಂಸ್ಕೃತಿಕ ಉತ್ಸವ, ಗಾಂಧಿ ಸದ್ಭಾವನಾ, ಸ್ವಾಮಿ ವಿವೇಕಾನಂದ ಸಮಾಜ ಸೇವಾ ಪ್ರಶಸ್ತಿ ಪ್ರದಾನ



'ಗಾಂಧಿ ಸದ್ಭಾವನಾ ಪ್ರಶಸ್ತಿ'ಯನ್ನು ಸಾಧಕರಿಗೆ ಪ್ರದಾನ ಮಾಡಲಾಯಿತು.

ಮೈಸೂರು, ಜ.24(ವಿವಿಹೆಚ್)– ಮಕ್ಕಳನ್ನು ನಾಲ್ಕು ಗೋಡೆಯಲ್ಲಿ ಕುಳ್ಳಿರಿಸಿ, ಪಠ್ಯದ ಮೂಲಕ ಅವರ ಭವಿಷ್ಯ ರೂಪಿಸುವುದಕ್ಕೆ ಬದಲು, ಅರ್ಹ ವೇದಿಕೆ ಒದಗಿಸಿ ಕೊಡುವ ಮೂಲಕ ಅವರನ್ನು ತಯಾರು ಮಾಡಬೇಕು. ಕಲೆ, ಸಂಸ್ಕೃತಿ ಅಳವಡಿಸಿಕೊಂಡ ಮಕ್ಕಳು ಉತ್ತಮ ಪ್ರಜೆಗಳಾಗಿ ದೇಶ ಕಟ್ಟುತ್ತಾರೆ ಎಂದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಡಾ.ಪದ್ಮಾ ಶೇಖರ್ ಅಭಿಪ್ರಾಯಪಟ್ಟರು.

ಮೈಸೂರಿನ ವಿಜಯನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಅದಮ್ಯ ರಂಗಶಾಲೆ ಮೈಸೂರು ವತಿಯಿಂದ ಶನಿವಾರ ನಡೆದ ಮಕ್ಕಳ ಸಾಂಸ್ಕೃತಿಕ ಉತ್ಸವ, ಗಾಂಧಿ ಸದ್ಭಾವನಾ ಪ್ರಶಸ್ತಿ , ಸ್ವಾಮಿ ವಿವೇಕಾನಂದ ಸಮಾಜ ಸೇವಾ ಪ್ರಶಸ್ತಿ, ಅದಮ್ಯ ಚಿಗುರು ಪ್ರತಿಭಾ ಚೇತನ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದರು.

ಮಕ್ಕಳಲ್ಲಿ ಹೊಸ ಚೈತನ್ಯ, ಉತ್ಸಾಹ ಮತ್ತು ಸಾಂಸ್ಕೃತಿಕ ಆಸಕ್ತಿಯನ್ನು ಬೆಳೆಸುವುದರಲ್ಲಿ ನಮ್ಮ ಪರಂಪರೆ, ಸಂಸ್ಕೃತಿ ಪ್ರಮುಖ ಪಾತ್ರ ವಹಿಸುತ್ತದೆ. ಉನ್ನತ ಶಿಕ್ಷಣದೊಂದಿಗೆ ನಮ್ಮ ಮೌಲ್ಯವನ್ನು ಮಕ್ಕಳಲ್ಲಿ ಬಿತ್ತುವ ಕೆಲಸ ಆಗಬೇಕು. ನಮ್ಮ ಪರಂಪರೆಯನ್ನು ಮುಂದಿನ ಪೀಳಿಗೆಗೆ ಬಳುವಳಿಯಾಗಿ ಕೊಡುವ ಕೆಲಸವನ್ನು ಇಂದಿನವರು ಮಾಡಬೇಕು ಎಂದರು.

ರಾಜ್ಯ ಸರ್ಕಾರವೂ ಸೇರಿದಂತೆ ವಿವಿಧ ಸಂಘ ಸಂಸ್ಥೆಗಳು ಪ್ರಶಸ್ತಿ ನೀಡುವ ಜೊತೆಗೆ ಹಣವನ್ನು ಬಹುಮಾನವಾಗಿ ನೀಡುತ್ತಾರೆ. ಇದರಿಂದಾಗಿ ಪ್ರಶಸ್ತಿಗಳು ಮೌಲ್ಯವನ್ನು ಕಳೆದುಕೊಳ್ಳುತ್ತಿವೆ. ಹಣದಿಂದ ಸಂಬಂಧವನ್ನು ಅಳೆಯುವ ಕಾಲಘಟ್ಟದಲ್ಲಿದ್ದು, ಹಣ ಕೊಡುವುದನ್ನು ನಿಲ್ಲಿಸಿ ಅರ್ಹರನ್ನು ಗುರುತಿಸಿ ಪ್ರಶಸ್ತಿ ನೀಡುವ ಮೂಲಕ ಪ್ರಶಸ್ತಿಗೂ ಗೌರವ ಇರಲಿದೆ ಎಂದು ಅಭಿಪ್ರಾಯಿಸಿದರು.

ಇನ್ನು ಮಹಾತ್ಮ ಗಾಂಧಿ, ವಿವೇಕಾನಂದ ಅವರು ಸತ್ಯ, ದೇಶ ಪ್ರೇಮ, ಅಹಿಂಸೆ, ಆಧ್ಯಾತ್ಮಿಕತೆ, ಸಂಸ್ಕೃತಿ ಚಿಂತನೆಗೆ ಹೆಸರಾಗಿದ್ದಾರೆ. ನಮ್ಮ ಅಸ್ತಿತ್ವ ತಿಳಿಸುವುದು ನಮ್ಮ ಆಧ್ಯಾತ್ಮಿಕತೆ ಮತ್ತು ದೇಶ ಪ್ರೇಮ. ಇದನ್ನು ಸಾರಿದ ಮಹಾನ್ ನಾಯಕರ ಹೆಸರಲ್ಲಿ ಪ್ರಶಸ್ತಿ ನೀಡುತ್ತಿರುವುದು ಶ್ಲಾಘನೀಯ ಎಂದರು.

ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಅಧ್ಯಕ್ಷರಾದ ಡಾ.ಕವಿತಾ ರೈ ಮಾತನಾಡಿ, ಅತ್ಯಂತ ಔಚಿತ್ಯವನ್ನು ಮನವರಿಕೆ ಮಾಡಿಕೊಂಡು, ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಸಮಾಜಕ್ಕೆ ಕೊಡುಗೆ ನೀಡುತ್ತಾ ಬಂದಿರುವ ನಿಜವಾದ ಸಾಧಕರನ್ನು ಗುರುತಿಸಿ ಪ್ರಶಸ್ತಿ ನೀಡುತ್ತಿರುವುದು ಮೆಚ್ಚುಗೆಯ ಕೆಲಸವಾಗಿದೆ ಎಂದರು.

ಕರ್ನಾಟಕ ಮಾಹಿತಿ ಆಯೋಗದ ನಿಕಟಪೂರ್ವ ವಾಹಿತಿ ಆಯುಕ್ತ ಕೆ.ಎಂ.ಚಂದ್ರೇಗೌಡ, ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಕೆ.ಬಿ.ಲಿಂಗರಾಜು, ಹಿರಿಯ ಸಾಹಿತಿ ಮಿರ್ಲೆ ಚಂದ್ರಶೇಖರ್, ಗಿರೀಶ್ ಎಂಟರ್ ಪ್ರೈಸಸ್ ಮಾಲೀಕ ಎನ್.ಎಲ್.ಗಿರೀಶ್, ಗೌರವ ಕಾರ್ಯದರ್ಶಿ ಟಿ.ಸತೀಶ್ ಜವರೇಗೌಡ, ಸಂಸ್ಥಾಪಕ ಕಾರ್ಯದರ್ಶಿ ಚಂದ್ರು ಮಂಡ್ಯ ಉಪಸ್ಥಿತರಿದ್ದರು.

ಗಾಂಧಿ ಸದ್ಭಾವನ ಪ್ರಶಸ್ತಿ ಪುರಸ್ಕೃತರು: ಪತ್ರಕರ್ತ ಐತಿಚಂಡ ರಮೇಶ್ ಉತ್ತಪ್ಪ, ಲೇಖಕಿ ಪ್ರೊ ಷಹಸೀನಾ ಬೇಗಂ, ಚನ್ನಪಟ್ಟಣ ಪೊಲೀಸ್ ತರಬೇತಿ ಶಾಲೆಯ ಪೊಲೀಸ್ ಉಪಾಧೀಕ್ಷಕ ಸಿ.ಕಿರಣ್ ಕುಮಾರ್, ಹುಣಸೂರು ಶಾಸ್ತ್ರಿ ಸಂಯುಕ್ತ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ಎಂ.ಎಲ್.ರವಿಶಂಕರ್ ಪ್ರಶಸ್ತಿ ಸ್ವೀಕರಿಸಿದರು.

ಸ್ವಾಮಿ ವಿವೇಕಾನಂದ ಸಮಾಜ ಸೇವ ಪ್ರಶಸ್ತಿ ಪುರಸ್ಕೃತರು: ವರದಿಗಾರ ಅವಿನಾಶ್ ಜೈನಹಳ್ಳಿ, ಮೈಸೂರಿನ ಜೆ.ಎಸ್.ಎಸ್. ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನಾಧಿಕಾರಿ ಎನ್. ಸಂತೋಷ್ ಕುಮಾರ್, ಸಾಹಿತಿ ಮತ್ತು ಉಪನ್ಯಾಸಕರಾದ ನಾಗಮಂಗಲದ ಡಾ. ನೀ.ಗೂ. ರಮೇಶ್ ಮತ್ತು ತಿಪಟೂರಿನ ಗಂಗಾಧರ ಎಸ್. ಕದ್ರಿ, ಮೈಸೂರಿನ ಕುವೆಂಪು ನಗರದ ಬಿಜಿಎಸ್ ಬಿ.ಇಡಿ. ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಹಾಗೂ ಪುಸ್ತಕ ಸಂಗ್ರಾಹಕ ಡಾ.ಹೆಚ್.ಬಿ. ಬೆಟ್ಟಸ್ವಾಮಿ, ನಂಜನಗೂಡಿನ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಎಸ್.ಎನ್. ಚಂದ್ರಶೇಖರ ಬಾಬು, ತಿಪಟೂರಿನ ಟೈಮ್ಸ್ ಪಿಯು ಕಾಲೇಜಿನ ಆಡಳಿತಾಧಿಕಾರಿ. ಕೆ.ಎಲ್. ಅನೂಪ್, ಹೆಚ್.ಡಿ. ಕೋಟೆಯ ಸೇಂಟ್ ಮೇರಿಸ್ ಪಿಯು ಕಾಲೇಜಿನ ಪ್ರಾಂಶುಪಾಲ ಸಂತೋಷ್ ಕುಮಾರ್, ಕೆ.ಆರ್.ನಗರದ ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜಿನ ಉಪನ್ಯಾಸಕ ಎಂ. ಕೃಷ್ಣ ಬನ್ನಹಳ್ಳಿ, ಮಳವಳ್ಳಿಯ ಶಾಂತಿ ಪದವಿ ಪೂರ್ವ ಕಾಲೇಜಿನ ಕನ್ನಡ ಉಪನ್ಯಾಸಕಿ ಸಿ. ಅನಿತಾ. ಪ್ರಶಸ್ತಿ ಸ್ವೀಕರಿಸಿದರು.

ಡಬ್ಲ್ಯೂಪಿಎಲ್–2026; ಆರ್‌ಸಿಬಿಯ ಜಯದ ಓಟಕ್ಕೆ ಬ್ರೇಕ್ ಹಾಕಿದ ಡೆಲ್ಲಿ ಕ್ಯಾಪಿಟಲ್ಸ್



ವಡೋದರ, ಜ.24(ವಿವಿಹೆಚ್)– ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯೂಪಿಎಲ್) ಟೂರ್ನಿಯಲ್ಲಿ ಆರ್‌ಸಿಬಿಯನ್ನು 7 ವಿಕೆಟ್‌ಗಳಿಂದ ಮಣಿಸಿದ ಡೆಲ್ಲಿ ಕ್ಯಾಪಿಟಲ್ಸ್ ಆರ್‌ಸಿಬಿಯ ಅಜೇಯ ಓಟಕ್ಕೆ ಬ್ರೇಕ್ ಹಾಕಿದೆ.

ಇಲ್ಲಿನ ಕೊಟಂಬಿ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಆರ್‌ಸಿಬಿ ನಿಗದಿತ 20 ಓವರ್‌ಗಳಲ್ಲಿ ಕೇವಲ 109 ರನ್‌ಗಳಿಗೆ ಸರ್ವಪತನ ಕಂಡಿತು. ಈ ಸಾಧಾರಣ ಮೊತ್ತ ಬೆನ್ನತ್ತಿದ ಡೆಲ್ಲಿ ಕ್ಯಾಪಿಟಲ್ಸ್ 15.4 ಓವರ್‌ಗಳಲ್ಲಿ ಕೇವಲ 3 ವಿಕೆಟ್ ಕಳೆದುಕೊಂಡು 111 ರನ್ ಗಳಿಸಿ ಗೆಲುವಿನ ನಗೆ ಬೀರಿತು.

ಡೆಲ್ಲಿ ಬೌಲಿಂಗ್ ದಾಳಿಗೆ ಆರ್‌ಸಿಬಿಯ ಬಲಿಷ್ಠ ಬ್ಯಾಟಿಂಗ್ ಪಡೆ ಮಂಕಾಯಿತು. ನಾಯಕಿ ಸ್ಮೃತಿ ಮಂದನಾ 38(34), ರಾಧಾ ಯಾದವ್ 18(17), ಜಾರ್ಜಿಯಾ 11(14) ಹೊರತುಪಡಿಸಿ ಮತ್ಯಾರಿಂದಲೂ ಎರಡಂಕಿ ಮೊತ್ತ ದಾಖಲಾಗಲೇ ಇಲ್ಲ. ಉಳಿದಂತೆ ಗ್ರೇಸ್ ಹ್ಯಾರೀಸ್ 9, ಗೌತಮಿ ನಾಯ್ಕ್ 3, ರಿಚಾ ಘೋಷ್ 5, ನಡೀನ್ ಡಿ ಕ್ಲೆರ್ಕ್ 5, ಅರುಂಧತಿ ರೆಡ್ಡಿ 2, ಸಯಾಲಿ 3, ಶ್ರೇಯಾಂಕಾ ಪಾಟೀಲ್ 7 ಹಾಗೂ ಲೌರೆನ್ ಬೆಲ್ 1 ರನ್‌ಗಳಿಸಿ ಅಜೇಯರಾಗಿ ಉಳಿದರು.

ಡೆಲ್ಲಿ ಪರ ಕರಾರುವಕ್ಕಾದ ಬೌಲಿಂಗ್ ದಾಳಿ ಮಾಡಿದ ನಂದಿನಿ ಶರ್ಮಾ 4 ಓವರ್‌ಗಳಲ್ಲಿ 26 ರನ್ ಬಿಟ್ಟುಕೊಟ್ಟು ಪ್ರಮುಖ 3 ವಿಕೆಟ್ ಪಡೆದು ಆರ್‌ಸಿಬಿಯನ್ನು ಕಾಡಿದರು. ಚಿನೆಲ್ಲೆ ಹೆನ್ರಿ ಮಿನ್ನು ಮಣಿ ಹಾಗೂ ಮರಿಜನ್ನೆ ಕೇಪ್ ತಲಾ 2 ವಿಕೆಟ್, ಶ್ರೀ ಚಾರಿಣಿ ಒಂದು ವಿಕೆಟ್ ಪಡೆದರು.

ಈ ಸಾಧಾರಣ ಮೊತ್ತ ಬೆನ್ನತ್ತಿದ ಡೆಲ್ಲಿಗೆ ಲಾರಾ ವೋಲ್ವಾರ್ಡ್ ಹಾಗೂ ನಾಯಕಿ ಜಾಮಿಯಾ ರೋಡ್ರಿಗಸ್ ಆಸರೆಯಾದರು. ನಾಯಕಿ ಜಾಮಿಯಾ 24 ರನ್ ಗಳಿಸಿದರೆ, ಲಾರಾ 38 ಎಸೆತಗಳಲ್ಲಿ 4 ಬೌಂಡರಿ, 1 ಸಿಕ್ಸರ್ ಸಹಿತ ಅಜೇಯ 42 ರನ್ ಗಳಿಸಿ ತಂಡಕ್ಕೆ ಗೆಲುವು ತಂದುಕೊಟ್ಟರು. ಇವರಿಗೆ ಸಾಥ್ ನೀಡಿದ ಕೆಪ್ 19 ರನ್ ಗಳಿಸಿ ಕ್ರೀಜ್‌ನಲ್ಲಿದ್ದರು. ಉಳಿದಂತೆ ಶಫಾಲಿ ವರ್ಮಾ 16, ಲಿಜೆಲ್ ಲೀ 6 ರನ್ ಗಳಿಸಿದರು. ಆರ್‌ಸಿಬಿ ಪರ ಸಯಾಲಿ ಸತ್ಘರೆ 2 ವಿಕೆಟ್, ರಾಧಾ ಯಾದವ್ 1 ವಿಕೆಟ್ ಪಡೆದರು.

ಜ.26ರಂದು ಗಾರ್ಡನ್ ಟೆನ್ನಿಸ್ ಕ್ಲಬ್ ನವೀಕೃತ ಕಟ್ಟಡ ಉದ್ಘಾಟನೆ

ಮೈಸೂರು,ಜ.24(ಪಿಎಂ)– ನಜರ್‌ಬಾದಿನ ಗೌರ್ನಮೆಂಟ್ ಹೌಸ್ ರಸ್ತೆಯ ಗಾರ್ಡನ್ ಟೆನ್ನಿಸ್ ಕ್ಲಬ್‌ನಲ್ಲಿ ಜ.26ರಂದು ಗಣರಾಜ್ಯೋತ್ಸವ ಹಾಗೂ ಕ್ಲಬ್‌ನ ನವೀಕೃತ ಕಟ್ಟಡದ ಉದ್ಘಾಟನಾ ಸಮಾರಂಭ ಆಯೋಜಿಸಲಾಗಿದೆ. ಅಂದು ಬೆಳಗ್ಗೆ 8ಕ್ಕೆ ಕಟ್ಟಡದ ಉದ್ಘಾಟನೆಯನ್ನು ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ನೆರವೇರಿಸಲಿದ್ದಾರೆ. ಮುಡಾ ಮಾಜಿ ಅಧ್ಯಕ್ಷ ಡಿ.ಧ್ರುವಕುಮಾರ್ ಧ್ವಜಾರೋಹಣ ಮಾಡಲಿದ್ದು, ಜಿಮ್ನಾಷಿಯಂ ಉದ್ಘಾಟನೆಯನ್ನು ಗಾರ್ಡನ್ ಟೆನ್ನಿಸ್ ಕ್ಲಬ್ ಅಧ್ಯಕ್ಷ ಎನ್.ಧ್ರುವರಾಜ್ ನೆರವೇರಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ರಾಜ್ಯಪಾಲರದ್ದು ದಮನಕಾರಿ ನೀತಿ

ಸಿಪಿಐ(ಎಂ) ರಾಜ್ಯ ಸಮಿತಿ ಕಾರ್ಯದರ್ಶಿ ಕೆ.ಪ್ರಕಾಶ್ ಕಿಡಿನುಡಿ

ಮೈಸೂರು, ಜ.24(ಎಂಟಿವೈ)– ವಿಧಾನಮಂಡಲ ಅಧಿವೇಶನದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ನಡೆದುಕೊಂಡ ರೀತಿ ಒಕ್ಕೂಟ ವ್ಯವಸ್ಥೆಯನ್ನು ಅಣಕಿಸುವಂತಿದೆ. ಜನರಿಂದ ಆಯ್ಕೆಯಾಗಿರುವ ಸರ್ಕಾರವನ್ನು ದಮನ ಮಾಡುವಂತೆ ಅವರು ವರ್ತಿಸಿದ್ದಾರೆ ಎಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ರಾಜ್ಯ ಸಮಿತಿ ಕಾರ್ಯದರ್ಶಿ ಕೆ. ಪ್ರಕಾಶ್ ಕಿಡಿಕಾರಿದ್ದಾರೆ.



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಆಯೋಜಿಸಿದ್ದ 'ಪರ್ಯಾಯ ರಾಜಕಾರಣ' ಕುರಿತ ವಿಚಾರ ಸಂಕಿರಣದಲ್ಲಿ ಸಿಪಿಐ(ಎಂ) ರಾಜ್ಯ ಸಮಿತಿ ಕಾರ್ಯದರ್ಶಿ ಕೆ. ಪ್ರಕಾಶ್ ಮಾತನಾಡಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದ) ಜಿಲ್ಲಾ ಸಂಘಟನಾ ಸಮಿತಿಯು ಆಯೋಜಿಸಿದ್ದ 'ಪರ್ಯಾಯ ರಾಜಕಾರಣ' ಕುರಿತ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, ಸಂಸತ್ ಕಲಾಪದ ಆರಂಭದಲ್ಲಿ ರಾಷ್ಟ್ರಪತಿಗಳು ಹಾಗೂ ವಿಧಾನಮಂಡಲ ಕಲಾಪದ ಆರಂಭದಲ್ಲಿ ರಾಜ್ಯಪಾಲರು ಸದನವನ್ನು ಉದ್ದೇಶಿಸಿ ಮಾತನಾಡಲು ಸಂವಿಧಾನ ಅವಕಾಶ ಕಲ್ಪಿಸಿದೆ. ಇತ್ತೀಚೆಗಷ್ಟೇ ಆರಂಭವಾದ ವಿಧಾನಮಂಡಲ ಅಧಿವೇಶನದಲ್ಲಿ ರಾಜ್ಯಪಾಲರು ನಡೆದುಕೊಂಡ ರೀತಿ ಖಂಡನೀಯ. ಅವರ ವರ್ತನೆ ಒಕ್ಕೂಟ ವ್ಯವಸ್ಥೆಗೆ ವಿರುದ್ಧವಾಗಿದೆ. ಅಲ್ಲದೆ, ಜನರಿಂದ ಆಯ್ಕೆಯಾದ ಸರ್ಕಾರವನ್ನು ದಮನ ಮಾಡುವಂತೆ ನಡೆದುಕೊಂಡಿದ್ದಾರೆ. ಇದು ವಸಾಹತುಶಾಹಿ ಆಡಳಿತದ ಮುಂದುವರಿದ ಭಾಗವಾಗಿರುವಂತೆ ಕಂಡು ಬರುತ್ತಿದ್ದು, ರಾಜ್ಯದ ಒಳಿತಿಗಾಗಿ ಮುಂದಿನ ದಿನಗಳಲ್ಲಿ ವಿಧಾನಮಂಡಲದ ಅಧಿವೇಶನಲ್ಲಿ ವಸಾಹತುಶಾಹಿಯ ಆಡಳಿತದ ಭಾಗದಂತಿರುವ ರಾಜ್ಯಪಾಲರ ಭಾಷಣವನ್ನು ಕಿತ್ತುಹಾಕಬೇಕು ಎಂದು ಪ್ರತಿಪಾದಿಸಿದರು.

ದೇಶದಲ್ಲಿ ಸಂಸದರು, ಶಾಸಕರು ಬಂಡವಾಳಶಾಹಿಗಳಾಗಿದ್ದಾರೆ. ರಾಜ್ಯದಲ್ಲಿ ಹಲವು ಸಚಿವರು, ಶಾಸಕರು ನೂರಾರು ಕೋಟಿ ರೂ.ಗಳ ಒಡೆಯರಾಗಿದ್ದಾರೆ. ಪ್ರಜಾಪ್ರಭುತ್ವದ ನೆಪದಲ್ಲಿ ಪೂರ್ಣ ಪ್ರಮಾಣದ ವ್ಯಾಪಾರಿಗಳೇ ಆಯ್ಕೆ ಆಗುತ್ತಿದ್ದಾರೆ. ಇದರಿಂದ ಬಡವ-ಶ್ರೀಮಂತರ ಅಂತರ ಹೆಚ್ಚುತ್ತಲೇ ಇದೆ ಎಂದು ವಿಷಾದಿಸಿದರು.

ದೇಶ ಹಾಗೂ ರಾಜ್ಯದಲ್ಲಿ ಆಗಾಗ್ಗೆ ರಾಜಕೀಯ ಪರ್ಯಾಯ ವ್ಯವಸ್ಥೆ ಕುರಿತು ಚರ್ಚೆ ನಡೆಯುತ್ತಲೇ ಇರುತ್ತವೆ. ಅಧಿಕಾರ ಎನ್ನುವುದು ರಾಜಕಾರಣದ ಜೊತೆಯಲ್ಲಿ ತಳುಕು ಹಾಕಿಕೊಂಡಿದೆ. ಜನರ ಬದುಕನ್ನು ಬದಲಿಸಲು ಅಧಿಕಾರ ಹಾಗೂ ಅದನ್ನು ಪಡೆಯಲು ರಾಜಕಾರಣ ಬೇಕು. ಈ ಪ್ರಕ್ರಿಯೆ ಏಳು ಬೀಳಿನ ಪ್ರಕ್ರಿಯೆಯೂ ಆಗಿದೆ ಎಂದರು.

ದೇಶದಲ್ಲಿ ಕಾಂಗ್ರೆಸ್ ಇತ್ತೀಚಿನ ವರ್ಷದಲ್ಲಿ ಕೇಂದ್ರದಲ್ಲಿ ಅಧಿಕಾರ ಕಳೆದುಕೊಂಡಿದೆ. ನೆಹರು, ಇಂದಿರಾಗಾಂಧಿ ಅವರನ್ನು ದೇಶದ ಜನ ಸೋಲಿಸಿದರು. ನಂತರದಲ್ಲಿ ಕೇಂದ್ರದಲ್ಲಿ ಸ್ಥಿರ ಸರ್ಕಾರ ಬರಲು ಸಾಧ್ಯವಾಗಲಿಲ್ಲ. 1983ರಲ್ಲಿ ರಾಜಕೀಯ ಪರ್ಯಾಯ ವ್ಯವಸ್ಥೆಗಾಗಿ ಕರ್ನಾಟಕದಲ್ಲಿ ಜನತಾ ಸರ್ಕಾರ ಅಧಿಕಾರಕ್ಕೆ ಬಂದಿತ್ತು. ಆದರೂ, ಪಕ್ಷಗಳ ಬದಲಾವಣೆಯಿಂದ ಜನರ ಅಭಿವೃದ್ಧಿ ಆಗುವುದಿಲ್ಲ ಎಂದು ತೋರಿಸಿದೆ. ಇಷ್ಟೆಲ್ಲ ಆದರೂ ಬಂಡವಾಳಶಾಹಿಗಳ ಪರ ನೀತಿಗಳೇ ಮುಂದುವರಿದಿವೆ ಎಂದು ಕಿಡಿಕಾರಿದರು.

ಕೇಂದ್ರ ಬಿಜೆಪಿಯ ಆಕ್ರಮಣಕಾರಿ ಉದಾರೀಕರಣದ ನೀತಿಯನ್ನು ರಾಜ್ಯ ಕಾಂಗ್ರೆಸ್ ಸರ್ಕಾರ ಯಾವ ಅಡ್ಡಿಯೂ ಇಲ್ಲದೇ ಮುಂದುವರಿಸಿದೆ. ನೀತಿಗಳನ್ನು ಆಧರಿಸಿದ, ಜನಸಮೂಹಗಳು ಪಾಲ್ಗೊಳ್ಳುವ ಪರ್ಯಾಯ ರಾಜಕಾರಣ ಕಟ್ಟುವುದು ನಮ್ಮೆಲ್ಲರ ಆದ್ಯತೆ ಆಗಬೇಕು. ಸಮಾನ ಮನಸ್ಕ ಪಕ್ಷಗಳು ಹಾಗೂ ಸಂಘಟನೆಗಳು ಇದಕ್ಕಾಗಿ ಒಟ್ಟಾಗಬೇಕು ಎಂದು ಮನವಿ ಮಾಡಿದರು.

ಇದೇ ವೇಳೆ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಿಪಿಐಎಂ ಜಿಲ್ಲಾ ಕಾರ್ಯದರ್ಶಿ ಜಗದೀಶ್ ಸೂರ್ಯ ವಹಿಸಿದ್ದರು. ಹೋರಾಟಗಾರ್ತಿ ರತಿರಾವ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಉದಯಗಿರಿಯಲ್ಲಿ ರಾತ್ರಿ 10ಕ್ಕೆ ಅಂಗಡಿ ಮುಚ್ಚಿಸಿ

- ಪೊಲೀಸರಲ್ಲಿ ಸಾರ್ವಜನಿಕರ ಕಳಕಳಿಯ ಮನವಿ
- ವ್ಯಾಪಾರಿಗಳು ಸಹಕರಿಸಿದರೆ ನಮ್ಮದೇನು ಅಭ್ಯಂತರವಿಲ್ಲ: ಡಿಸಿಪಿ



ಮೈಸೂರಿನ ರಾಜೀವ್‌ನಗರದಲ್ಲಿ ಶನಿವಾರ ನಡೆದ ಉದಯಗಿರಿ ಪೊಲೀಸ್ ಠಾಣಾ ವ್ಯಾಪ್ತಿಯ ಜನಸಂಪರ್ಕ ಸಭೆಯಲ್ಲಿ ಡಿಸಿಪಿ ಸುಂದರ್‌ರಾಜ್ ಮಾತನಾಡುತ್ತಿರುವುದು.

ಮೈಸೂರು,ಜ.24(ಬಿಎಲ್‌ಯು)– ಮೈಸೂರಿನ ಉದಯಗಿರಿ ಪೊಲೀಸ್ ಠಾಣಾ ವ್ಯಾಪ್ತಿಯ ಅಂಗಡಿ ಮುಂಗಟ್ಟುಗಳನ್ನು ರಾತ್ರಿ 10 ಗಂಟೆಗೆ ಬಂದ್ ಮಾಡಿಸುವಂತೆ ಸಾರ್ವಜನಿಕರು ಪೊಲೀಸರಲ್ಲಿ ಮನವಿ ಮಾಡಿದ್ದಾರೆ.

ಮೈಸೂರು ನಗರ ಪೊಲೀಸ್ ವತಿಯಿಂದ ರಾಜೀವ್‌ನಗರದ ಮರಿಯ ಬೋಟಿಕ್ ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ್ದ ಉದಯಗಿರಿ ಪೊಲೀಸ್ ಠಾಣೆ ವ್ಯಾಪ್ತಿಯ ಜನ ಸಂಪರ್ಕ ಸಭೆಯಲ್ಲಿ ಸಾರ್ವಜನಿಕರ ಈ ಒತ್ತಾಸೆಗೆ ಸ್ಪಂದಿಸಿದ ಪೊಲೀಸರು, ಸ್ವಯಂಪ್ರೇರಿತವಾಗಿ ಅಂಗಡಿಗಳನ್ನು ಬಂದ್ ಮಾಡಿದರೆ ನಾವು ಸಹಕರಿಸುತ್ತೇವೆ ಎಂದು ಭರವಸೆ ನೀಡಿದ್ದಾರೆ.

ರಾಜಕೀಯ ಪಕ್ಷಗಳ ಮುಖಂಡರು, ವಿವಿಧ ಸಮುದಾಯದ ಮುಖಂಡರು, ಮೌಲ್ವಿಗಳು, ವ್ಯಾಪಾರಿಗಳು ಹಾಗೂ ಸಾರ್ವಜನಿಕರು ಸೇರಿದಂತೆ ಸಭೆಯಲ್ಲಿ ಭಾಗವಹಿಸಿದ್ದವರಲ್ಲಿ ಬಹುತೇಕ ಮಂದಿ, ಅಂಗಡಿಗಳನ್ನು ರಾತ್ರಿ ಬಹುಹೊತ್ತಿನವರೆಗೂ ತೆರೆದಿರುವುದರಿಂದ ಪುಂಡಪೋಕರಿಗಳ ಉಪಟಳ ಹೆಚ್ಚಾಗಿದೆ. ಧೂಮಪಾನ, ಮದ್ಯಪಾನ, ಗಾಂಜಾ ಸೇವನೆಯಿಂದ ಗಲಾಟೆಗಳಾಗುತ್ತಿವೆ. ಕ್ಷುಲ್ಲಕ ಕಾರಣಕ್ಕೆ ವೈಷಮ್ಯ ಬೆಳೆಸಿಕೊಂಡು ಹಲ್ಲೆ ನಡೆಸುವ ಪ್ರಕರಣಗಳು ಹೆಚ್ಚುತ್ತಿವೆ. ಇಂತಹವರ ಸಹವಾಸದಿಂದ ಯುವಕರು ಹಾಳಾಗುತ್ತಿದ್ದಾರೆ. ಆದ್ದರಿಂದ ರಾತ್ರಿ 10 ಗಂಟೆಗೆ ಕಡ್ಡಾಯವಾಗಿ ಅಂಗಡಿ ಮುಂಗಟ್ಟುಗಳನ್ನು ಬಂದ್ ಮಾಡಿಸಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಡಿಸಿಪಿ ಸುಂದರ್ ರಾಜ್, ನಾವು ನಿಯಮದನ್ವಯ ಕಾರ್ಯ ನಿರ್ವಹಿಸುತ್ತೇವೆ. ವ್ಯಾಪಾರಿಗಳು ಸ್ವಯಂ ಪ್ರೇರಿತವಾಗಿ ರಾತ್ರಿ 10 ಗಂಟೆಗೆ ಬಂದ್ ಮಾಡಿದರೆ ನಾವೂ ಸಹಕರಿಸುತ್ತೇವೆ. ಈ ನಿಟ್ಟಿನಲ್ಲಿ ಸ್ಥಳೀಯ ಮುಖಂಡರು ವ್ಯಾಪಾರಿಗಳಿಗೆ ಮನವರಿಕೆ ಮಾಡಿಕೊಡಬೇಕು. ಮಾದಕ ವಸ್ತುಗಳ ಬಳಕೆ, ಸಂಗ್ರಹಣೆ ಹಾಗೂ ಮಾರಾಟದ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಬೇಕು. ಕಾನೂನು ಬಾಹಿರ ಚಟುವಟಿಕೆಗಳನ್ನು ಹತ್ತಿಕ್ಕಲು ನಮ್ಮೊಂದಿಗೆ ಕೈಜೋಡಿಸಬೇಕು ಎಂದು ಮನವಿ ಮಾಡಿದರು.

ಸಭೆಯಲ್ಲಿ ದೇವರಾಜ ಉಪವಿಭಾಗದ ಎಸಿಪಿ ರಾಜೇಂದ್ರ, ನರಸಿಂಹರಾಜ ಉಪವಿಭಾಗದ ಎಸಿಪಿ ಮ್ಯಾಥ್ಯೂ ಥಾಮಸ್, ಇನ್ಸ್‌ಪೆಕ್ಟರ್‌ಗಳಾದ ಸುಧಾಕರ್, ಸ್ವರ್ಣ ಮತ್ತಿತರರು ಹಾಜರಿದ್ದರು.

ಫೆ.1, ನಿಮಿಷಾಂಬ ದೇಗುಲದಲ್ಲಿ ಮಾಘ ಶುದ್ಧ ಪೌರ್ಣಮಿ

ಭಕ್ತರಿಗೆ ತೊಂದರೆಯಾಗದಂತೆ, ಸೂಕ್ತ ಭದ್ರತೆ ಒದಗಿಸಲು ಶಾಸಕ ರಮೇಶ್‌ಬಾಬು ಸೂಚನೆ



ಸಭೆಯಲ್ಲಿ ಶಾಸಕ ರಮೇಶ್‌ಬಾಬು ಮಾತನಾಡಿದರು.

ಮಂಡ್ಯ, ಜ.24– ಮಾಘ ಶುದ್ಧ ಹುಣ್ಣಿಮೆಯ ಪ್ರಯುಕ್ತ ಫೆ.1ರಂದು ಶ್ರೀರಂಗಪಟ್ಟಣದ ಶ್ರೀನಿಮಿಷಾಂಬ ದೇವಸ್ಥಾನಕ್ಕೆ ಲಕ್ಷಾಂತರ ಭಕ್ತರು ಆಗಮಿಸುವ ಹಿನ್ನೆಲೆಯಲ್ಲಿ ಮೂಲ ಸೌಕರ್ಯದೊಂದಿಗೆ ಯಾವುದೇ ತೊಂದರೆಯಾಗದಂತೆ ಅಗತ್ಯ ಮುಂಜಾಗ್ರತಾ ಕ್ರಮ ಕೈಗೊಳ್ಳುವಂತೆ ಶಾಸಕ ರಮೇಶ್‌ಬಾಬು ತಿಳಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಮಾಘ ಶುದ್ಧ ಪೌರ್ಣಮಿ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಅಂದು ದೇವಾಲಯದಲ್ಲಿ ಧಾರ್ಮಿಕ ಕಾರ್ಯಕ್ರಮ ನಡೆಯಲಿದ್ದು, ಒಂದು ಲಕ್ಷಕ್ಕೂ ಹೆಚ್ಚು ಭಕ್ತರು ಸೇರುವ ನಿರೀಕ್ಷೆ ಇರುವುದರಿಂದ ಸೂಕ್ತ ಭದ್ರತೆಗಾಗಿ ಪೊಲೀಸ್ ಸಿಬ್ಬಂದಿ ನಿಯೋಜಿಸಿ ಭಕ್ತರಿಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು ಎಂದು ತಿಳಿಸಿದರು.

ದೇವಸ್ಥಾನಕ್ಕೆ ಬರುವ ಸಾರ್ವಜನಿಕರಿಗೆ ತೊಂದರೆಯಾಗದಂತೆ ಮೊಜೊ ಬ್ಯಾರಿಕೇಡ್ ಹಾಕಿಸಿ ಹಾಗೂ ದೇವರ ದರ್ಶನಕ್ಕೆ ಬ್ಯಾರಿಕೇಡ್ ಅಳವಡಿಸಿ ಭಕ್ತರು ಸರಾಗವಾಗಿ ದೇವರ ದರ್ಶನ ಪಡೆಯಲು ಕ್ರಮ ವಹಿಸಿ. ಕಾವೇರಿ ನದಿಯಲ್ಲಿ ಸ್ನಾನ ಮಾಡಿದ ನಂತರ ಭಕ್ತರು ಬಟ್ಟೆ ಬದಲಾಯಿಸಲು ಮಹಿಳೆಯರು ಮತ್ತು ಪುರುಷರಿಗೆ ಪ್ರತ್ಯೇಕ ಕೋಣೆ ತೆರೆಯಬೇಕು ಹಾಗೂ ಮಹಿಳೆಯರು ಬಟ್ಟೆ ಬದಲಾಯಿಸುವ ಸ್ಥಳದಲ್ಲಿ ಮಹಿಳಾ ಪೊಲೀಸ್ ಸಿಬ್ಬಂದಿ ನಿಯೋಜಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು. ಅಲ್ಲದೇ ಭಕ್ತರ ಭದ್ರತೆ ದೃಷ್ಟಿಯಿಂದ ಕಾವೇರಿ ನದಿ ಬಳಿ ಹಾಗೂ ನಿಮಿಷಾಂಬ ದೇವಾಲಯದಲ್ಲಿ ಅಗತ್ಯ ಸ್ಥಳಗಳಲ್ಲಿ ತಾತ್ಕಾಲಿಕ ಸಿಸಿಟಿವಿ ಅಳವಡಿಸಿ ಎಂದರು.

ನಿಮಿಷಾಂಬ ದೇವಸ್ಥಾನದ ಸುತ್ತಲೂ ಸೂಕ್ತ ದೀಪಾಲಂಕಾರ ಮಾಡಿ. ರಾತ್ರಿ ವೇಳೆಯೂ ಭಕ್ತರು ದೇವಾಲಯಕ್ಕೆ ಬರುವುದರಿಂದ ಬೆಳಕಿನ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕು ಹಾಗೂ ವಿದ್ಯುತ್ ಸಂಪರ್ಕ ನಿರಂತರವಾಗಿ ನೀಡಬೇಕು. ತುರ್ತು ಸಂದರ್ಭ ಜನರೇಟರ್ ಇಟ್ಟಿರಬೇಕು ಎಂದರು.

ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸುವುದರಿಂದ ತುರ್ತು ಸೇವೆ ಒದಗಿಸಬೇಕು. ದೇವಸ್ಥಾನದ ಸಮೀಪ ಅಗ್ನಿಶಾಮಕ ದಳ, ಅಗತ್ಯ ಔಷಧಿಗಳೊಂದಿಗೆ ತಾತ್ಕಾಲಿಕ ಆರೋಗ್ಯ ಕೇಂದ್ರ ಮತ್ತು ಆಂಬುಲೆನ್ಸ್ ಸೇವೆ ಹಾಗೂ ಭಕ್ತರು ಸ್ನಾನ ಮಾಡುವ ಸ್ಥಳದಲ್ಲಿ ನುರಿತ ಈಜುಗಾರರ ತಂಡ ಸಿದ್ಧವಾಗಿರಬೇಕು ಎಂದು ಸೂಚಿಸಿದರು.

ಜಿಲ್ಲಾಧಿಕಾರಿ ಡಾ.ಕುಮಾರ್ ಮಾತನಾಡಿ, ದೇವಾಲಯಕ್ಕೆ ಬರುವ ಭಕ್ತಾದಿಗಳ ವಾಹನಗಳನ್ನು ದೇವಸ್ಥಾನದ ಹತ್ತಿರಕ್ಕೆ ಬಿಡದೆ ನಿಗದಿತ ದೂರದಲ್ಲಿ ಸೂಕ್ತ ಸ್ಥಳ ಗುರುತಿಸಿ ವಾಹನಗಳಿಗೆ ಪಾರ್ಕಿಂಗ್ ವ್ಯವಸ್ಥೆ ಮಾಡಬೇಕು. ಭಕ್ತಾದಿಗಳ ನೂಕು ನುಗ್ಗಲು ತಪ್ಪಿಸಲು ಅಗತ್ಯ ಬ್ಯಾರಿಕೇಡ್, ವಾಹನಗಳಿಗೆ ಮಾರ್ಗ ಸೂಚನಾ ಫಲಕ ಪಾರ್ಕಿಂಗ್ ಫಲಕಗಳನ್ನು ಅಳವಡಿಸಿಕೊಳ್ಳಬೇಕು ಎಂದರು.

ನಗರದ ಪ್ರಮುಖ ಸ್ಥಳಗಳನ್ನು ಗುರುತಿಸಿ ರಾತ್ರಿ ವೇಳೆ ವಿದ್ಯುತ್ ದೀಪಾಲಂಕಾರ ಮಾಡುವಂತೆ ಹಾಗೂ ನಿರಂತರವಾಗಿ ವಿದ್ಯುತ್ ವ್ಯವಸ್ಥೆ ಮಾಡಬೇಕು. ಭಕ್ತರಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು ಮತ್ತು ತಾತ್ಕಾಲಿಕ ಬಯೋ ಶೌಚಾಲಯ ನಿರ್ಮಿಸಬೇಕು ಎಂದರು.

ದೇವಸ್ಥಾನದ ಆವರಣ ಹಾಗೂ ಸುತ್ತಮುತ್ತ, ಸ್ನಾನ ಮಾಡುವ ಕಡೆ ಬಳಿ ಸ್ವಚ್ಛತೆ ಕಾಪಾಡಿಕೊಳ್ಳಬೇಕು. ದೇವಾಲಯದ ಆವರಣದಲ್ಲಿ ಸ್ವಚ್ಛತೆ ಕಾಪಾಡಲು ಅಗತ್ಯ ಪೌರ ಕಾರ್ಮಿಕರನ್ನು ನೇಮಿಸಬೇಕು ಎಂದರು.

ಜಿಲ್ಲಾ ಪೊಲೀಸ್ ಅಧೀಕ್ಷಕಿ ಶೋಭಾರಾಣಿ ಮಾತನಾಡಿ, ನಿಮಿಷಾಂಬ ದೇವಾಲಯಕ್ಕೆ ಭಕ್ತಾದಿಗಳು ಬರಲು ಸೂಕ್ತ ಬಸ್ ವ್ಯವಸ್ಥೆ ಕಲ್ಪಿಸಬೇಕು. ಶ್ರೀರಂಗಪಟ್ಟಣದಿಂದ ಗಂಜಾಂವರೆಗೆ ನಿಗದಿತ ಅವಧಿಯೊಳಗೆ ಬಸ್‌ಗಳ ಸಂಚಾರ ಮಾಡಲು ಸೂಕ್ತ ಕ್ರಮ ಕೈಗೊಳ್ಳಬೇಕು. ದೇವಸ್ಥಾನ ಆವರಣದಲ್ಲಿ ಧೂಳನ್ನು ನಿಯಂತ್ರಿಸಲು ಟ್ಯಾಂಕರ್ ಮೂಲಕ ನೀರನ್ನು ಸಿಂಪಡಿಸಬೇಕು ಎಂದರು.

ಸಭೆಯಲ್ಲಿ ಎಡಿಸಿ ಬಿ.ಸಿ.ಶಿವಾನಂದ ಮೂರ್ತಿ, ಶ್ರೀರಂಗಪಟ್ಟಣ ತಹಸೀಲ್ದಾರ್ ಚೇತನ ಯಾದವ್, ಮುಜರಾಯಿ ಇಲಾಖೆ ತಹಸೀಲ್ದಾರ್ ತಮ್ಮೇಗೌಡ, ಜಿಲ್ಲಾಧಿಕಾರಿ ಕಚೇರಿ ತಹಸೀಲ್ದಾರ್ ರವಿಶಂಕರ್, ನಿಮಿಷಾಂಬ ದೇವಾಲಯದ ಆಡಳಿತ ವರ್ಗದ ಸಿಬ್ಬಂದಿ ಇತರರಿದ್ದರು.

ಹಾಡಹಗಲೇ ಲಕ್ಷಾಂತರ ರೂ. ಮೌಲ್ಯದ ಚಿನ್ನಾಭರಣ ಕಳವು

ಹಲಗೂರು, ಜ.24– ಹಾಡಹಗಲೇ ಮನೆ ಬಾಗಿಲಿನ ಚಿಲಕ ತೆಗೆದು ಒಳ ನುಗ್ಗಿರುವ ದುಷ್ಕರ್ಮಿ ಲಕ್ಷಾಂತರ ರೂ. ಮೌಲ್ಯದ ಚಿನ್ನಾಭರಣ ಹಾಗೂ ನಗದು ಹಣ ದೋಚಿ ಪರಾರಿಯಾಗಿರುವ ಘಟನೆ ಹಲಗೂರಿನ ಇಂದಿರಾ ಕಾಲೋನಿಯಲ್ಲಿ ಶುಕ್ರವಾರ ಮಧ್ಯಾಹ್ನ ನಡೆದಿದೆ.

ಕಾಲೋನಿ ನಿವಾಸಿ ಮುತ್ತುರಾಜ್ ಅವರ ಮನೆಯಲ್ಲಿ ಕಳ್ಳತನ ನಡೆದಿರುವುದು. ಶುಕ್ರವಾರ ಮಧ್ಯಾಹ್ನ 3.45ರಲ್ಲಿ ಮುತ್ತುರಾಜ್ ಅವರ ಪತ್ನಿ ಮಗುವನ್ನು ಶಾಲೆಯಿಂದ ಕರೆದುಕೊಂಡು ಬರಲು ಮನೆ ಬಾಗಿಲ ಚಿಲಕ ಹಾಕಿ ತೆರಳಿದ್ದರು. ಈ ವೇಳೆ ಮನೆಯಲ್ಲಿ ಯಾರೂ ಇಲ್ಲದನ್ನು ಖಚಿತಪಡಿಸಿಕೊಂಡ ದುಷ್ಕರ್ಮಿ ಮನೆ ಬಾಗಿಲ ಚಿಲಕ ತೆಗೆದು ಒಳ ನುಗ್ಗಿ ಬೀರುವಿನಲ್ಲಿದ್ದ 20 ಗ್ರಾಂ ತೂಕದ ಚಿನ್ನದ ಬ್ರೇಸ್‌ಲೆಟ್, 25 ಗ್ರಾಂ ತೂಕದ ಚಿನ್ನದ ಚೈನ್, ಐದು ಚಿನ್ನದ ಉಂಗುರಗಳು, 20 ಗ್ರಾಂ ತೂಕದ ಒಂದು ಜೊತೆ ಚಿನ್ನದ ಓಲೆ, 3 ಗ್ರಾಂ ತೂಕದ ಓಲೆ ಹಾಗೂ 6 ಸಾವಿರ ರೂ. ನಗದು ದೋಚಿದ್ದಾನೆ. ಮುತ್ತುರಾಜ್ ಅವರ ಪತ್ನಿ ಮಗುವಿನೊಂದಿಗೆ ಮನೆಗೆ ಆಗಮಿಸಿದಾಗ ಮನೆಯ ಬಾಗಿಲಿನ ಚಿಲಕ ತೆಗೆದಿರುವುದನ್ನು ಕಂಡು ಗಾಬರಿಯಿಂದ ಮನೆ ಒಳಗೆ ಪ್ರವೇಶಿಸಿದಾಗ ಹಿಂಬಾಗಿಲಿನ ಬಳಿ ಅವಿತುಕೊಂಡಿದ್ದ ಕಳ್ಳ ಅವರನ್ನು ತಳ್ಳಿ ಹೊರ ಬಂದು ಮನೆ ಚಿಲಕ ಹಾಕಿ ಪರಾರಿಯಾಗಿದ್ದಾನೆ.

ವಿಷಯ ತಿಳಿದು ಮಳವಳ್ಳಿ ಉಪ ವಿಭಾಗದ ಡಿವೈಎಸ್ಪಿ ಯಶವಂತ್ ಕುಮಾರ್, ಹಲಗೂರು ಸಿಪಿಐ ಶ್ರೀಧರ್, ಎಸ್ಐ ಲೋಕೇಶ್ ಮತ್ತು ಸಿಬ್ಬಂದಿ ಶ್ವಾನದಳ ಹಾಗೂ ಬೆರಳಚ್ಚು ತಂಡದೊಂದಿಗೆ ಸ್ಥಳಕ್ಕಾಗಮಿಸಿ ಪರಿಶೀಲಿಸಿ ಮುಂದಿನ ತನಿಖೆ ಕೈಗೊಂಡಿದ್ದಾರೆ. ಈ ಸಂಬಂಧ ಹಲಗೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕ್ರೀಡೆ ಕೇವಲ ಮನರಂಜನೆಗೆ ಮೀಸಲಾಗಬಾರದು



ಕ್ರೀಡಾಜ್ಯೋತಿಯನ್ನು ದೈಹಿಕ ಶಿಕ್ಷಣ ಶಿಕ್ಷಕ ಮಧುಸೂದನ್ ಸ್ವೀಕರಿಸಿದರು.

ಭಾರತೀನಗರ, ಜ.24– ಕ್ರೀಡೆ ಕೇವಲ ಮನರಂಜನೆಗೆ ಮೀಸಲಾಗಬಾರದು. ಕ್ರೀಡೆಯನ್ನು ಪ್ರತಿಯೊಬ್ಬರೂ ಗೌರವಿಸಬೇಕು ಎಂದು ಕಡಿಲುವಾಗಿಲು ದೈಹಿಕ ಶಿಕ್ಷಣ ಶಿಕ್ಷಕ ಮಧುಸೂಧನ್ ತಿಳಿಸಿದರು.

ಭಾರತೀನಗರದ ರಾಯಲ್ ಓಕ್ಸ್ ಪಬ್ಲಿಕ್ ಸ್ಕೂಲ್‌ನಲ್ಲಿ ಆಯೋಜಿಸಿದ್ದ ಕ್ರೀಡಾ ದಿನಾಚರಣೆಯಲ್ಲಿ ಕ್ರೀಡಾ ಜ್ಯೋತಿ ಸ್ವೀಕರಿಸಿ ಮಾತನಾಡಿದ ಅವರು, ಜೀವನದಲ್ಲಿ ಏಳು–ಬೀಳು, ಸೋಲು–ಗೆಲುವು ಸಹಜ. ಇವುಗಳನ್ನು ನಾವು ಛಲದಿಂದ ಸ್ವೀಕರಿಸಬೇಕು. ಅಲ್ಲದೇ ನಿಖರ ಗುರಿಯೊಂದಿಗೆ ಮುಂದುವರೆದಲ್ಲಿ ಯಶಸ್ಸು ಗಳಿಸಲು ಸಾಧ್ಯ. ಹಾಗಾಗಿ ಯುವಕರು ಗುರಿಯ ಬೆನ್ನು ಬೀಳಬೇಕೆಂದು ಕಿವಿಮಾತು ಹೇಳಿದರು.

ಜಿಪಂ ಮಾಜಿ ಸದಸ್ಯ ಎ.ಎಸ್. ರಾಜೀವ್ ಮಾತನಾಡಿ, ದೈಹಿಕವಾಗಿ ಆರೋಗ್ಯವಾಗಿರಬೇಕಾದರೆ ಕ್ರೀಡೆ ಅತ್ಯವಶ್ಯಕ. ಗ್ರಾಮೀಣ ಕ್ರೀಡಾಪಟುಗಳು ವಿವಿಧ ಕ್ರೀಡಾ ಸ್ಪರ್ಧೆಗಳಲ್ಲಿ ರಾಷ್ಟ್ರವನ್ನು ಪ್ರತಿನಿಧಿಸಿರುವ ಉದಾಹರಣೆ ಸಾಕಷ್ಟಿವೆ. ಹಾಗಾಗಿ ವಿದ್ಯಾರ್ಥಿಗಳು ಕ್ರೀಡೆಯಲ್ಲಿ ಹೆಚ್ಚು ಭಾಗವಹಿಸುವ ಮೂಲಕ ಸಾಧನೆಯ ಪಟ್ಟಿಯಲ್ಲಿ ಸೇರಿಕೊಳ್ಳಬೇಕು. ಆಗ ಮಾತ್ರ ಶಾಲೆಗೆ ಮತ್ತು ತಮ್ಮ ಗ್ರಾಮಕ್ಕೆ ಒಳ್ಳೆಯ ಹೆಸರು ಬರುತ್ತದೆ ಎಂದರು.

ಪರಿಸರ ಜಾಗೃತಿ ವೇದಿಕೆಯ ತಾಲೂಕು ಅಧ್ಯಕ್ಷ ಅಣ್ಣೂರು ಸತೀಶ್ ಮಾತನಾಡಿ, ಕ್ರೀಡೆಗೆ ಉತ್ತೇಜನ ನೀಡಲು ದೇಶದಲ್ಲಿ ಪ್ರತಿ ವರ್ಷ ಆ.29 ರಂದು ಮೇಜರ್ ಧ್ಯಾನ್‌ಚಂದ್ ಅವರ ಜನ್ಮ ದಿನಾಚರಣೆ ಅಂಗವಾಗಿ ಕ್ರೀಡಾ ದಿನಾಚರಣೆ ಆಚರಿಸುತ್ತಾ ಬರಲಾಗುತ್ತಿದೆ. ಕ್ರೀಡೆಯಲ್ಲಿ ಉತ್ತಮ ಸಾಧನೆ ಮಾಡಿದವರು ಕ್ರೀಡಾ ಕೋಟಾದಲ್ಲಿ ಉನ್ನತ ಉದ್ಯೋಗ ಅಲಂಕರಿಸಬಹುದು ಎಂದರು.

ಈ ವೇಳೆ ಪರಿಸರ ಜಾಗೃತಿ ವೇದಿಕೆ ತಾಲೂಕು ಅಧ್ಯಕ್ಷ ಅಣ್ಣೂರು ಸತೀಶ್, ದೈಹಿಕ ಶಿಕ್ಷಣ ಶಿಕ್ಷಕ ಮಧುಸೂಧನ್ ಅವರನ್ನು ಸನ್ಮಾನಿಸಲಾಯಿತು. ನಂತರ ವಿವಿಧ ಕ್ರೀಡೆಯಲ್ಲಿ ವಿಜೇತರಾದ ಮಕ್ಕಳಿಗೆ ಬಹುಮಾನ ವಿತರಿಸಲಾಯಿತು.

ರಾಯಲ್ ಓಕ್ಸ್ ಶಾಲೆ ಅಧ್ಯಕ್ಷ ಡಿ.ಆರ್. ಸುಮನ್, ಗೌರವಾಧ್ಯಕ್ಷ ಎಸ್. ರಾಜಣ್ಣ, ಮುಖ್ಯಶಿಕ್ಷಕಿ ಡಿ.ಎಂ.ನಂದಿನಿ, ನಿರ್ದೇಶಕ ಮಂಜು, ಮುಖಂಡರಾದ ಗಿರೀಶ್, ಶಿಕ್ಷಕರಾದ ಮಧುಸೂದನ್, ದೈಹಿಕ ಶಿಕ್ಷಣ ಶಿಕ್ಷಕ ಬಸವರಾಜು, ಅಶ್ವಿನಿ, ಶಿಲ್ಪ, ಮಲ್ಲಿಕ್ ಸೇರಿದಂತೆ ಹಲವರಿದ್ದರು.

5, 10 ವರ್ಷ ಅಧಿಕಾರ ನಡೆಸಿದವರು ಮಾಡದ ಕೆಲಸವನ್ನು

20 ತಿಂಗಳಲ್ಲೇ ಪ್ರಚಾರ ಪಡೆಯದೇ ಮಾಡಿದ್ದೇನೆ: ಹೆಚ್‌ಡಿಕೆ



ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಮಾತನಾಡಿದರು.

ಶ್ರೀರಂಗಪಟ್ಟಣ, ಜ.24– ಪ್ರಸ್ತುತ ರಾಜ್ಯ ಸರ್ಕಾರ ಕೆಲಸಕ್ಕಿಂತ ಪ್ರಚಾರವೇ ಹೆಚ್ಚಾಗಿ ತೆಗೆದುಕೊಳ್ಳುತ್ತಿದೆ. 5, 10 ವರ್ಷ ಅಧಿಕಾರ ನಡೆಸಿದವರು ಮಾಡಲು ಸಾಧ್ಯವಾಗದ ಕೆಲಸಗಳನ್ನು ನಾನು 2006ರಲ್ಲಿ ಮುಖ್ಯಮಂತ್ರಿಯಾಗಿದ್ದ ವೇಳೆ ಕೇವಲ 20 ತಿಂಗಳಲ್ಲೇ ಯಾವುದೇ ಪ್ರಚಾರ ತೆಗೆದುಕೊಳ್ಳದೇ ಮಾಡಿದ್ದೇನೆ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ತಿಳಿಸಿದರು.

ತಾಲೂಕಿನ ಮಹದೇವಪುರ ಗ್ರಾಮದ ಎಂ.ಕೆ.ಆನಂದಾಳ್ವಾರ್ ಪ್ರೌಢಶಾಲೆ ಸುವರ್ಣ ಮಹೋತ್ಸವ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ದೇಶಕ್ಕೆ ಸ್ವಾತಂತ್ರ್ಯ ಬಂದು 60 ವರ್ಷಗಳಾದರೂ ರಾಜ್ಯದಲ್ಲಿ ಕೇವಲ 169 ಸರ್ಕಾರಿ ಕಾಲೇಜುಗಳಿದ್ದವು. ನಾನು 2006ರಲ್ಲಿ ಮುಖ್ಯಮಂತ್ರಿ ಆದ 1 ವರ್ಷದಲ್ಲೇ 189 ಕಾಲೇಜುಗಳನ್ನು ಪ್ರಾರಂಭಿಸಿದ್ದೇನೆ. ಜೊತೆಗೆ 500 ಜೂನಿಯರ್ ಕಾಲೇಜು, 1400 ಪ್ರೌಢಶಾಲೆ ತೆರೆದು 56 ಸಾವಿರ ಕುಟುಂಬದ ನನ್ನ ಸಹೋದರ ಹಾಗೂ ಸಹೋದರಿಯರಿಗೆ ಶಿಕ್ಷಕ ಹುದ್ದೆ ನೀಡಿದ್ದೇನೆ. ಅಷ್ಟೇ ಅಲ್ಲದೇ ಇಂಜಿನಿಯರಿಂಗ್, ಮೆಡಿಕಲ್ ಸೇರಿದಂತೆ ಅನೇಕ ಕಾಲೇಜುಗಳನ್ನು ತೆರೆಯಲಾಗಿದೆ ಎಂದರು.

2ನೇ ಬಾರಿಗೆ ಮುಖ್ಯಮಂತ್ರಿ ಆದ ವೇಳೆ ಕರ್ನಾಟಕ ಪಬ್ಲಿಕ್ ಶಾಲೆ ಪ್ರಾರಂಭಿಸಲು ತೀರ್ಮಾನಿಸಿದ್ದೆ. ಜೊತೆಗೆ 1995ನೇ ಸಾಲಿನವರೆಗೆ ಎಲ್ಲಾ ಅನುದಾನ ರಹಿತ ಶಾಲಾ ಶಿಕ್ಷಕರಿಗೆ ಅನುದಾನ ನೀಡಲು ತೀರ್ಮಾನಿಸಿ ಆದೇಶ ಮಾಡಿದ್ದೇನೆ. ಆದರೆ ಮತ್ತೆ ಅಧಿಕಾರಕ್ಕೆ ಬಂದ ಸರ್ಕಾರಗಳು ಅನುದಾನರಹಿತ ಶಿಕ್ಷಕರನ್ನು ಕಡೆಗಾಣಿಸಿದ್ದಾರೆ. ಅವರ ಬಗ್ಗೆ ಯಾವಾಗ ಅನುಕಂಪ ಬರುತ್ತದೆ ನೋಡಬೇಕು. ನಮ್ಮ ರಾಜ್ಯ ಅತ್ಯಂತ ಸಂಪತ್ಭರಿತವಾಗಿದ್ದು, ಹಣದ ಕೊರತೆ ಇಲ್ಲ. ರಾಜ್ಯದ ಜನರು ಸಹ ಸರ್ಕಾರಕ್ಕೆ ಯತ್ತೇಚ್ಛವಾಗಿ ತೆರಿಗೆ ಹಣ ನೀಡಿ, ಸರ್ಕಾರದ ಖಜಾನೆ ತುಂಬಿಸುತ್ತೀರಿ. ಆದರೆ ನಿಮ್ಮ ಕಷ್ಟಗಳಿಗೆ ಯಾವ ರೀತಿ ಸ್ಪಂದಿಸುತ್ತಿದ್ದಾರೆ. ರೈತ ಬೆಳೆದ ಬೆಳೆಗೆ ಒಂದು ಒಳ್ಳೆಯ ಬೆಲೆ ನೀಡಿ ಎಂದರೆ ಸರಿಯಾದ ಬೆಲೆ ಕೊಡುತ್ತಿಲ್ಲ. ಅಧಿಕಾರಿಗಳಿಗೆ ಒತ್ತಡ ಹೇರಿ ಕೆಲಸ ಮಾಡಿಸುತ್ತಿದ್ದಾರೆ. ಇದರಿಂದ ಅಧಿಕಾರಿಗಳು ತೊಂದರೆ ಅನುಭವಿಸುವಂತಾಗಿದೆ. ಹಾಗಾಗಿ ಅಧಿಕಾರಿಗಳು ಯಾವುದೇ ಜನಪ್ರತಿನಿಧಿ ಹೇಳಿದರೂ ಕಾನೂನು ಮೀರಿ ಕೆಲಸ ಮಾಡಬೇಡಿ ಎಂದು ಮನವಿ ಮಾಡಿದರು.

ಎಂ.ಕೆ.ಆನಂದಾಳ್ವಾರ್ ಶಾಲೆಯಲ್ಲಿ 650ಕ್ಕೂ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು, ಇಲ್ಲಿ ಹೆಣ್ಣು ಮಕ್ಕಳ ಶೌಚಾಲಯ ನಿರ್ಮಿಸಿ ಕೊಡುವಂತೆ ಮನವಿ ಸಲ್ಲಿಸಿದ್ದೀರಿ. ಒಂದೆರಡು ದಿನಗಳಲ್ಲಿ ನಮ್ಮ ಕಚೇರಿ ಸಿಬ್ಬಂದಿ ಜಾಗ ಪರಿಶೀಲಿಸಲಿದ್ದು, ಮಕ್ಕಳ ಅನುಕೂಲಕ್ಕಾಗಿ ಶೌಚಾಲಯ ನಿರ್ಮಿಸಿ ಕೊಡುವುದಾಗಿ ಭರವಸೆ ನೀಡಿದರು.

ಮಾಜಿ ಶಾಸಕ ರವೀಂದ್ರ ಶ್ರೀಕಂಠಯ್ಯ ಮಾತನಾಡಿ, ಹೆಚ್.ಡಿ.ಕುಮಾರಸ್ವಾಮಿ ಅವರ ಪಂಚರತ್ನ ಯೋಜನೆ ಹಾಗೂ ಶಿಕ್ಷಣದ ಬಗೆಗಿನ ಕಾಳಜಿಯಿಂದ ಪ್ರತಿ ಹೋಬಳಿ ಮಟ್ಟದಲ್ಲಿ ಅತ್ಯಾಧುನಿಕ ಕನ್ನಡ ಹಾಗೂ ಇಂಗ್ಲಿಷ್ ಕನ್ನಡ ಮಾಧ್ಯಮ ಶಾಲೆ ತೆರೆಯಲು ಮುಂದಾಗಿದ್ದರು. ಇದನ್ನು ಜನಸಾಮಾನ್ಯರು ಅರ್ಥ ಮಾಡಿಕೊಂಡಿದ್ದರೆ ಗ್ರಾಮೀಣ ಮಕ್ಕಳಿಗೆ ಹೆಚ್ಚಿನ ಅನುಕೂಲವಾಗುತ್ತಿತ್ತು. ತಿರುನಾರಾಯಣ್ ಅಯ್ಯಂಗಾರ್ ಅವರು ಗ್ರಾಮೀಣ ಮಕ್ಕಳಿಗಾಗಿ ಶಾಲೆ ತೆರೆದು ಇಂದಿಗೂ ಸಹ ಕಡಿಮೆ ಶುಲ್ಕ ಪಡೆದು ಶಿಕ್ಷಣ ನೀಡುತ್ತಾ ಬಂದಿರುವುದು ಸಂತಸದ ವಿಷಯ ಎಂದರು.

ಆನಂದ ಶಿಕ್ಷಣ ಸಂಸ್ಥೆ ಅಧ್ಯಕ್ಷ ಡಾ.ಗಿಣಿ ಸ್ವಾಮಿ, ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ, ತಹಸೀಲ್ದಾರ್ ಚೇತನಾ ಯಾದವ್, ಜೆಡಿಎಸ್ ತಾಲೂಕು ಅಧ್ಯಕ್ಷ ದಶರಥ, ಕಾರ್ಯಾಧ್ಯಕ್ಷ ತಿಲಕ್, ಯುವ ಘಟಕ ಅಧ್ಯಕ್ಷ ಸಂಜಯ್, ಇಸ್ಕಾನ್ ಸಂಸ್ಥೆ ಮಹೋತ್ಸಾಹ ಚೈತನ್ಯದಾಸ್, ಜಗಪತಿ ದಾಸ್, ಧರ್ಮಸ್ಥಳ ಸಂಸ್ಥೆ ಗಣಪತಿ ಭಟ್, ತಾಪಂ ಮಾಜಿ ಅಧ್ಯಕ್ಷ ಪುಟ್ಟಸ್ವಾಮಿ, ಎಂಪಿಸಿಎಸ್ ಅಧ್ಯಕ್ಷ ಎಂ.ಬಿ.ಶೇಖರ್ ಇದ್ದರು.

ಒಂದನೇ ಪುಟದಿಂದ

ಬರೀ ಇಂಗ್ಲಿಷ್, ಹಿಂದಿ ಕಾರುಬಾರು

ಭಾರತೀಯ ಅಂಚೆ ಇಲಾಖೆಯಲ್ಲಿ ಕನ್ನಡ ಭಾಷಾ ವಿರೋಧಿ ಧೋರಣೆಯನ್ನು ಇನ್ನೂ ಮುಂದುವರೆಸಿರುವುದು ವಿಷಾಧನೀಯ ಎಂದು ಅಂಚೆ ಸೇವಾಕಾಂಕ್ಷಿ ಹಿರಿಯ ನಾಗರಿಕರೊಬ್ಬರು ಆಕ್ರೋಶ ವ್ಯಕ್ತಪಡಿಸಿದ್ದಾರೆ. 'ಜನ್ ಧನ್' ಅಭಿಯಾನದಡಿ ಗೃಹಿಣಿಯರು ಸೇರಿದಂತೆ ಎಲ್ಲಾ ವರ್ಗದ ಸಾಮಾನ್ಯರು ಅಂಚೆ ಕಚೇರಿಗಳಲ್ಲಿ ಉಳಿತಾಯ ಖಾತೆ ತೆರೆದಿದ್ದಾರೆ. ಈ ಮೂಲಕ ಕಷ್ಟ ಕಾಲಕ್ಕೆಂದು ಒಂದಷ್ಟು ಹಣ ಉಳಿತಾಯ ಮಾಡುತ್ತಿದ್ದಾರೆ. ಆದರೆ ತಮ್ಮ ಖಾತೆಗೆ ಹಣ ಜಮಾ ಮಾಡುವಾಗ ಹಾಗೂ ಹಿಂಪಡೆಯುವಾಗ ತಿಣುಕಾಡಬೇಕು. ಚಲನ್‌ಗಳು ಇಂಗ್ಲಿಷ್ ಹಾಗೂ ಹಿಂದಿಯಲ್ಲಿ ಮಾತ್ರ ಇರುವುದರಿಂದ, ಅವುಗಳನ್ನು ಭರ್ತಿ ಮಾಡಲು ಬೇರೊಬ್ಬರನ್ನು ಗೋಗರೆಯಬೇಕು. ಹೀಗೆ ಸಹಾಯ ಕೇಳಲು ಮುಜುಗರಪಡುವವರು ಮನೆಯಿಂದಲೇ ಮತ್ತೊಬ್ಬರನ್ನು ಕರೆತರುತ್ತಾರೆ. ಇನ್ನು ವೃದ್ಧಾಪ್ಯ ವೇತನ, ವಿಧವಾ ವೇತನ, ವಿಕಲಚೇತನರ ಸಹಾಯ ಧನ ಸೇರಿದಂತೆ ಸಾಮಾಜಿಕ ಭದ್ರತಾ ಪಿಂಚಣಿ ಯೋಜನೆಯ ಫಲಾನುಭವಿಗಳು ಪ್ರತಿ ತಿಂಗಳು ಈ ಸಮಸ್ಯೆ ಎದುರಿಸುತ್ತಿದ್ದಾರೆ ಎಂದು ತೀವ್ರ ಬೇಸರದಿಂದ ನುಡಿದಿದ್ದಾರೆ.

ಕನ್ನಡ ಭಾಷೆಯಲ್ಲಿ ಮುದ್ರಿತವಾದ ಚಲನ್ ಇನ್ನಿತರ ದಾಖಲೆಗಳಿವೆ, ಆದರೆ ಸದ್ಯಕ್ಕೆ ಪೂರೈಕೆಯಾಗಿಲ್ಲ. ಆದ್ದರಿಂದ ಇಂಗ್ಲಿಷ್ ಹಾಗೂ ಹಿಂದಿ ದಾಖಲೆಗಳನ್ನು ಒದಗಿಸಲಾಗುತ್ತಿದೆ ಎಂದು ಅಂಚೆ ಇಲಾಖೆ ಸಿಬ್ಬಂದಿ ಸಬೂಬು ಹೇಳುತ್ತಾರೆಯೇ ಹೊರತು ಗ್ರಾಹಕರಿಗೆ ಅನುಕೂಲವಾಗುವ ಕ್ರಮ ಕೈಗೊಳ್ಳುತ್ತಿಲ್ಲ. ಈ ಬಗ್ಗೆ ರಾಜ್ಯ ಸರ್ಕಾರವಾಗಲೀ, ಕನ್ನಡ ಅಭಿವೃದ್ಧಿ ಪ್ರಾಧಿಕಾರವಾಗಲೀ, ಕನ್ನಡ ಸಾಹಿತ್ಯ ಪರಿಷತ್ ಆಗಲೀ, ಕನ್ನಡ ಪರ ಸಂಘಟನೆ ಹಾಗೂ ಸಂಘ–ಸಂಸ್ಥೆಗಳಾಗಲೀ ಗಮನಹರಿಸದೆ ಇರುವುದು ಅಚ್ಚರಿ ಸಂಗತಿ ಎಂದು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ವಿಶ್ವಾದ್ಯಂತ ಇರುವ ಭಾರತೀಯ ಅಂಚೆ ಕಚೇರಿಗಳಿಗೆ ವಹಿವಾಟಿಗೆ ಅಗತ್ಯವಿರುವ ಸ್ಟೇಷನರಿಗಳನ್ನು ಪೋಸ್ಟಲ್ ಸ್ಟೇಷನರಿ ಡಿಪಾರ್ಟ್‌ಮೆಂಟ್ ಮುದ್ರಿಸಿ ಸರಬರಾಜು ಮಾಡಲಿದೆ. ತಮಿಳುನಾಡು ಸೇರಿದಂತೆ ಕೆಲ ರಾಜ್ಯಗಳಲ್ಲಿ ನಡೆದ ಭಾರೀ ಪ್ರತಿಭಟನೆ ಹಿನ್ನಲೆಯಲ್ಲಿ ಅಲ್ಲೆಲ್ಲಾ ಇಂಗ್ಲಿಷ್ ಹಾಗೂ ಸ್ಥಳೀಯ ಭಾಷೆಗಳಲ್ಲಿ ಚಲನ್, ಸ್ಲಿಪ್‌ಗಳು ಮುದ್ರಣವಾಗುತ್ತಿದೆ. ಆದರೆ ಕರ್ನಾಟಕದಲ್ಲಿ ಈ ಬಗ್ಗೆ ಯಾರೂ ಚಕಾರ ಎತ್ತದ ಕಾರಣ ಇಲ್ಲಿ ಮಾತ್ರ ಇಂಗ್ಲಿಷ್, ಹಿಂದಿಯಲ್ಲೇ ಪ್ರಕಟ ಮಾಡಲಾಗುತ್ತಿದೆ ಎಂದು ಹೆಸರೇಳಲು ಇಚ್ಛಿಸದ ಅಂಚೆ ಇಲಾಖೆ ಕನ್ನಡ ಮೂಲದ ಹಿರಿಯ ಅಧಿಕಾರಿಯೊಬ್ಬರು ಬೇಸರದಿಂದಲೇ ತಿಳಿಸಿದ್ದಾರೆ.

ಹೋರಾಟ ಅನಿವಾರ್ಯ

ಕನ್ನಡದಲ್ಲಿ ಮಾತನಾಡದಿದ್ದರೆ, ದಾಖಲೆಗಳು ಕನ್ನಡದಲ್ಲಿ ಇಲ್ಲದಿದ್ದರೆ ತಮ್ಮ ಖಾತೆಯನ್ನು ಸ್ಥಗಿತಗೊಳಿಸುತ್ತೇವೆ ಎಂದು ಪ್ರತಿರೋಧ ವ್ಯಕ್ತಪಡಿಸಬೇಕು. ಒಟ್ಟಾರೆ ಈ ಬಗ್ಗೆ ದೊಡ್ಡಮಟ್ಟದ ಹೋರಾಟವೇ ನಡೆಯಬೇಕು ಎಂದು ಹೇಳಿದರು.

ಕೇಂದ್ರ ಸರ್ಕಾರದ ಸೇವೆಗಳಿಗೆ ಉದ್ದೇಶಪೂರ್ವಕವಾಗಿ ದೇಶಿ ಭಾಷಿಗರು ಬಾರದಂತೆ ನೋಡಿಕೊಳ್ಳಲಾಗುತ್ತಿದೆ. ಹಿಂದಿ ಮತ್ತು ಇಂಗ್ಲಿಷ್‌ಗಳಲ್ಲಿ ಪರೀಕ್ಷೆ ನಡೆಸುವುದರಿಂದ ನಮ್ಮ ಕನ್ನಡಿಗರು ವಿಫಲರಾಗುತ್ತಿದ್ದಾರೆ. ರಾಜ್ಯ ಸರ್ಕಾರದಿಂದ ಪತ್ರಗಳಿಗೆ ಕೇಂದ್ರ ಸರ್ಕಾರ ಪರಿಗಣಿಸುವುದಿಲ್ಲ. ನಾನೇ ಅನೇಕ ಪತ್ರಗಳನ್ನು ಬರೆದಿರುವುದಲ್ಲದೆ, ಕೇಂದ್ರ ಸಚಿವರಾದ ನಿರ್ಮಲಾ ಸೀತಾರಾಮನ್ ಅವರನ್ನು ಭೇಟಿಯಾಗಿ ಪ್ರತಿ ಬ್ಯಾಂಕ್‌ನಲ್ಲಿ ಒಬ್ಬರಾದರೂ ಕನ್ನಡಿಗ ಸಿಬ್ಬಂದಿ ನಿಯೋಜಿಸಿ ಎಂದು ಮನವಿ ಮಾಡಿದ್ದೇನೆ. ಇದಕ್ಕೆ ಮೌಖಿಕವಾಗಿ ಸಮ್ಮತಿಸಿದ ಅವರು ಈ ನಿಟ್ಟಿನಲ್ಲಿ ಆದೇಶ ಹೊರಡಿಸಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಇಷ್ಟೊಂದು ಭಾಷಾ ಸಮಸ್ಯೆ ಇದ್ದರೂ ಯಾವ ಸಂಸದರು ಧ್ವನಿ ಎತ್ತುತ್ತಿಲ್ಲ. ಈ ಬಗ್ಗೆ ಒಮ್ಮೆಯೂ ಮಾತನಾಡಿಲ್ಲ. ಹಿಂದೆ ಎಲ್.ಹನುಮಂತಯ್ಯ ಅವರು ರಾಜ್ಯಸಭೆಯಲ್ಲಿ ಪ್ರಾದೇಶಿಕ ನೇಮಕಾತಿ ಮಂಡಳಿ ರಚಿಸಿ, ಸ್ಥಳೀಯ ಭಾಷಿಗರಿಗೆ ಬ್ಯಾಂಕ್ ಉದ್ಯೋಗ ಕಲ್ಪಿಸುವಂತೆ ಧ್ವನಿ ಎತ್ತಿದ್ದರು. ಈ ಬಗ್ಗೆ ಒಂದೆರಡು ಬಾರಿ ಚರ್ಚೆಯೂ ಆಗಿತ್ತು. ಈಗಿನ ಜನಪ್ರತಿನಿಧಿಗಳು ಈ ನಿಟ್ಟಿನಲ್ಲಿ ಗಟ್ಟಿ ಧ್ವನಿಯಿಂದ ಮಾತನಾಡಬೇಕು. ಸ್ಥಳೀಯ ಭಾಷೆಗಳ ಉಳಿವಿಗೆ ಕೇಂದ್ರ ಸರ್ಕಾರದ ನೀತಿ ನಿಯಮಗಳಲ್ಲಿಯೇ ಬದಲಾವಣೆಯಾಗಬೇಕು ಎಂದರು.

ಭೂಮಿ ಕಬಳಿಕೆ ಪ್ರಕರಣದಲ್ಲಿ ಇಡಿ ಪ್ರವೇಶ

ಪೊಲೀಸರ ಮತ್ತು ಲೋಕಾಯುಕ್ತ ಪೊಲೀಸರ ತನಿಖೆಗೆ ಸಹಕರಿಸುತ್ತಿದೆ. ನಕಲಿ ದಾಖಲೆ ಸೃಷ್ಟಿಸಿ ಭೂಮಿ ಕಬಳಿಕೆ ಪ್ರಕರಣವನ್ನು ತನಿಖೆ ನಡೆಸುತ್ತಿರುವ ಡಿವೈಎಸ್ಪಿ ಚಲುವರಾಜು ಹಾಗೂ ಪಟ್ಟಣ ಠಾಣೆಯ ಇನ್ಸ್‌ಪೆಕ್ಟರ್ ಶಿವಕುಮಾರ್, ಖುದ್ದು ಕಡತಗಳನ್ನು ಪರಿಶೀಲಿಸಿ ಸಂಬಂಧಿಸಿದ ಮಾಹಿತಿ ಕಲೆ ಹಾಕುತ್ತಿದ್ದಾರೆ. ಮೂಲ ಕಡತಗಳನ್ನು ತಿದ್ದುವ ಜೊತೆಗೆ ನಕಲಿ ದಾಖಲೆಗಳನ್ನು ಕಡತಗಳಿಗೆ ಸೇರಿಸಿರುವುದನ್ನು ಕೂಡ ಬಹಳ ಸೂಕ್ಷ್ಮವಾಗಿ ಪರಿಶೀಲಿಸುವ ಕೆಲಸ ಮಾಡುತ್ತಿದ್ದಾರೆ. ನಾಗಮಂಗಲ ತಾಲೂಕು ಕಚೇರಿಯಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸಿ ಕೋಟ್ಯಾಂತರ ರೂಪಾಯಿ ಮೌಲ್ಯದ ಭೂಕಬಳಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಇಡಿ ಅಧಿಕಾರಿಗಳು ಶುಕ್ರವಾರ ತಾಲೂಕು ಕಚೇರಿ ಹಾಗೂ ಪಟ್ಟಣ ಪೊಲೀಸ್ ಠಾಣೆಗೆ ತೆರಳಿ ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಪಡೆದಿದ್ದಾರೆ ಎಂದು ತಿಳಿದು ಬಂದಿದ್ದು, ಈ ಮೂಲಕ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತಷ್ಟು ಆರೋಪಿಗಳ ಹೆಸರು ಬಹಿರಂಗವಾಗುವ ಸಾಧ್ಯತೆ ಇದೆ ಎನ್ನಲಾಗುತ್ತಿದೆ.

ಹೋರಾಟದ ಕಿಚ್ಚು ಆರಿಲ್ಲ ...!

ನೀವು ನೀಡಿದ್ದೀರಿ. ನಾನು ಇನ್ನು ಎಷ್ಟು ವರ್ಷ ಬದುಕಿರುತ್ತೇನೋ ಗೊತ್ತಿಲ್ಲ, ಆದರೆ ಅಷ್ಟರಲ್ಲಿ ಈ ಜಿಲ್ಲೆಯ ಪ್ರತಿ ಕುಟುಂಬಕ್ಕೆ ಆರ್ಥಿಕ ಶಕ್ತಿ ತುಂಬುವುದೇ ನನ್ನ ಗುರಿ ಎಂದರು. 1991ರಲ್ಲಿ ತನ್ನನ್ನು ಸೋಲಿಸಿದ ಜನರೇ ಮತ್ತೆ ಕೈಹಿಡಿದಿದ್ದನ್ನು ನೆನೆದ ಅವರು, 'ನನ್ನನ್ನು ತುಳಿಯಲು ಯತ್ನಿಸಿದವರನ್ನು ಮೆಟ್ಟಿ ನಿಲ್ಲುವ ಶಕ್ತಿ ಈ ಜನರೇ ಕೊಟ್ಟಿದ್ದಾರೆ' ಎಂದು ಹೆಚ್.ಡಿ.ದೇವೇಗೌಡರು ತಲೆ ಬಾಗಿದರು.

ಹಾಸನ ಜಿಲ್ಲೆಗೆ ರೇವಣ್ಣ ಶ್ರಮ ಇದೆ: ಜೆಡಿಎಸ್ ಪ್ರಬಲವಾದ ಪಕ್ಷ. ಹಾಸನ ಜಿಲ್ಲೆಯಲ್ಲಿ ರೇವಣ್ಣ ಅಭಿವೃದ್ಧಿಗಾಗಿ ಶ್ರಮವಿಸುತ್ತಿದ್ದಾರೆ. ಅಂತಹ ಒಬ್ಬ ನನ್ನ ಮಗನನ್ನ ತುಳಿಯಲು ಪ್ರಯತ್ನ ಮಾಡುತ್ತಿದ್ದಾರೆ. ನನ್ನನ್ನ ಈ ಜಿಲ್ಲೆಯಲ್ಲಿ ಒಮ್ಮೆ ಸೋಲಿಸಿದ್ದರು. ಒಂದು ಸಿನಿಮಾ ಥಿಯೇಟರ್ ನಿರ್ಮಾಣ ಮಾಡಿದೆ ಎಂಬ ಕಾರಣಕ್ಕೆ ನನ್ನನ್ನು ಸೋಲಿಸಿದರು. ಬಳಿಕ 1991ರಲ್ಲಿ ಅದೇ ಜನ ನನ್ನನ್ನ ಗೆಲ್ಲಿಸಿದರು. ಅವರಿಗೆ ನಾನು ಕೈಮುಗಿದು ನಮಿಸುತ್ತೇನೆ. ಕುಮಾರಸ್ವಾಮಿ ಅವರು 25 ವರ್ಷಗಳ ಹಿಂದೆ ಹಣ ಕೊಟ್ಟು ಜಮೀನು ಖರೀದಿ ಮಾಡಿದರು. ಆದರೆ ಈ ಸರ್ಕಾರ ಅದು ಗೋಮಾಳ ಎಂದು ಅವರ ಮೇಲೆ ಆರೋಪ ಮಾಡಿ, ತನಿಖೆ ಮಾಡುತ್ತಾರೆ ಎಂದು ವಾಗ್ದಾಳಿ ಮಾಡಿದರು.

ನಿಮ್ಮ ಆಟ ನಡೆಯುವುದಿಲ್ಲ: ಹಾಸನ ಜಿಲ್ಲೆಯಲ್ಲಿರುವ ಕೆಲವು ಸ್ಥಳೀಯ ಸಂಸ್ಥೆಗಳು ಜೆಡಿಎಸ್ ಹಿಡಿತದಲ್ಲಿದ್ದರೂ ಕೂಡ ಎಲ್ಲಾ ಜನಾಂಗದವರಿಗೂ ಅಧಿಕಾರವನ್ನು ನೀಡಿದೆ. ಕಾರಣ ಜೆಡಿಎಸ್ ಕೇವಲ ನನ್ನ ಪಕ್ಷ ಅಲ್ಲ ಇದು ಜನರ ಪಕ್ಷ. ಇವತ್ತು ರಾಜ್ಯದಲ್ಲಿ ಆಡಳಿತ ನಡೆಸುವವರಿಗೆ ಒಂದು ಎಚ್ಚರಿಕೆ ನೀಡುತ್ತೇವೆ. ಮುಂದಿನ ದಿನಗಳಲ್ಲಿ ನಿಮ್ಮ ಆಟ ನಡೆಯುವುದಿಲ್ಲ, ನಾವಿನ್ನು ಬದುಕಿದ್ದೇವೆ. ಹಾಸನ ಜಿಲ್ಲೆಗೆ ಕುಮಾರ ಸ್ವಾಮಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ನೀಡಿದ್ದಾರೆ. ಹಾಸನಕ್ಕೆ ವಿಮಾನ ನಿಲ್ದಾಣ ಶಂಕು ಸ್ಥಾಪನೆ ಆಯಿತು. ಇವತ್ತಿನ ಪರಿಸ್ಥಿತಿ ಏನಾಗಿದೆ. ಐಐಟಿ ತರಬೇಕೆಂದು ಜಮೀನನ್ನ ಮೀಸಲಿಟ್ಟಿದ್ದೇವೆ. ಆದರೆ ಅದರ ಪರಿಸ್ಥಿತಿ ಏನಾಗಿದೆ. ಎಲ್ಲಾ ಅಭಿವೃದ್ಧಿಯನ್ನು ಈ ಸರ್ಕಾರ ಕುಂಠಿತ ಮಾಡಿದೆ.

ಇನ್ನು ಕಾಂಗ್ರೆಸ್‌ನ ರಾಹುಲ್ ಗಾಂಧಿಯವರು ಹೇಳುತ್ತಾರೆ ಮೋದಿ ಅವರ ಆರ್ಥಿಕ ಸುಧಾರಣೆ ಸತ್ತು ಹೋಗಿದೆ ಎಂದು. ಇನ್ನು ವೋಟ್ ಚೋರಿ ಎಂಬ ಅಭಿಯಾನ ಮಾಡಿ ಬಿಹಾರದಲ್ಲಿ ಆರು ಸ್ಥಾನ ಪಡೆದರು. ದೇಶದಲ್ಲಿ ಕೇವಲ ಮೂರು ರಾಜ್ಯದಲ್ಲಿ ಮಾತ್ರ ಕಾಂಗ್ರೆಸ್ ಅಧಿಕಾರದಲ್ಲಿದೆ. ರೇವಣ್ಣ ಕುಟುಂಬವನ್ನ ಮುಗಿಸಬೇಕು ಅಂತ ಪ್ರಯತ್ನ ಪಡ್ತಿದ್ದೀರಲ್ಲ. ನೀವು ರಾಜ್ಯದಲ್ಲಿ ಏನೇನ್ ಮಾಡಿದ್ದೀರಿ ಎಂಬುದನ್ನ ನಾನು ಹೇಳಲಾ ಎಂದು ಆಕ್ರೋಶ ವ್ಯಕ್ತಪಡಿಸಿದರು. ಇವತ್ತು ದೇಶದಲ್ಲಿ ಮಹಿಳೆಯರಿಗೆ ರಾಜಕೀಯ ಮೀಸಲಾತಿ ದೊರೆ ತಿದೆ ಎಂದರೆ ಅದಕ್ಕೆ ನಮ್ಮ ಪಕ್ಷ ಶ್ರಮ ಪಟ್ಟಿದೆ ಎಂದರು.

ರಾಜ್ಯ ಸರ್ಕಾರಕ್ಕೆ ಪತ್ರ ಬರೆದಿದ್ದೇನೆ: ನಮ್ಮ ಪಕ್ಷ ಕೇವಲ ಒಂದೇ ಜನಾಂಗವನ್ನು ಅವಲಂಬಿಸಿಲ್ಲ, ಪ್ರತಿ ಸಮಾಜಕ್ಕೂ ಅಧಿಕಾರವನ್ನ ಹಂಚಿಕೆ ಮಾಡುವುದರಲ್ಲಿ ಮೊದಲಿಗರು. ಒಳ ಮೀಸಲಾತಿಯನ್ನು ಹೇಗೆ ವಿಂಗಡನೆ ಮಾಡಬೇಕು ಎಂಬುದರ ಬಗ್ಗೆ ರಾಜ್ಯ ಸರ್ಕಾರಕ್ಕೆ ಪತ್ರ ಬರೆದಿದ್ದೇನೆ. ಇನ್ನು ನಾನು ಲೋಕೋಪಯೋಗಿ ಸಚಿವನಾಗಿದ್ದಾಗ ದಲಿತರಿಗೆ 23% ಮೀಸಲಾತಿ ನೀಡಬೇಕು ಎಂದು ಧ್ವನಿ ಎತ್ತಿದ್ದು ನಾನು. ಈಗಾಗಲೇ ಕಾಂಗ್ರೆಸ್ ಪಕ್ಷ ಹಾಸನ ಜಿಲ್ಲೆಯಲ್ಲಿ ಎರಡು ಸಮಾವೇಶವನ್ನು ನಡೆಸಿದೆ. ಹಾಸನ ಜಿಲ್ಲೆಯಲ್ಲಿ ಜೆಡಿಎಸ್ ಮುಗಿಸಲೇಬೇಕು ಎಂದು ಕರೆ ಕೊಟ್ಟಿದ್ದಾರೆ. ಇನ್ನು ಮುಂದಿನ ದಿನಗಳಲ್ಲಿ ರಾಜ್ಯದ ಬಿಜೆಪಿ 18 ಎಂಪಿಗಳನ್ನ ಒಂದೇ ವೇದಿಕೆಯಲ್ಲಿ ಕೂರಿಸಿ, ಹಾಸನ ಜಿಲ್ಲೆಯಲ್ಲಿ ನೆನೆಗುದಿಗೆ ಬಿದ್ದಿರುವ ವಿಮಾನ ನಿಲ್ದಾಣ ಮತ್ತು ಐಐಟಿ ಯೋಜನೆಗಳನ್ನ ಮತ್ತೆ ಪುನರ್ಜರಿ ಮಾಡುವ ಸಂಕಲ್ಪವನ್ನು ಶೀಘ್ರದಲ್ಲೇ ಮಾಡುತ್ತೇನೆ ಎಂದು ವಿರೋಧಿ ಕಾಂಗ್ರೆಸ್‌ಗೆ ಸಂದೇಶ ರವಾನಿಸಿದರು.

ಬ್ರೋಕರ್‌ಗಳು, ಲೂಟಿಕೋರರ ಸರ್ಕಾರ

ಮೆಕ್ಕೆಜೋಳ, ತೊಗರಿ ಬೆಳೆದ ರೈತರಿಗೆ ಬೆಂಬಲ ಬೆಲೆ ಸಿಗದೆ ಕಣ್ಣೀರು ಹಾಕುತ್ತಿದ್ದರೂ ನಿರ್ಲಕ್ಷಿಸಿದ್ದಾರೆ. ಕಳೆದ ಎರಡೂವರೆ ವರ್ಷದಲ್ಲಿ 2,800 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆದರೂ ಸರ್ಕಾರಕ್ಕೆ ಕಿಂಚಿತ್ತೂ ಪಶ್ಚಾತಾಪವಿಲ್ಲ. ಕೇವಲ ಕುರ್ಚಿಗಾಗಿ ನಾಟಕವಾಡುತ್ತಿದ್ದಾರೆ ಎಂದು ಆಕ್ರೋಶದಿಂದ ನುಡಿದರು.

ಅಲ್ಪಸಂಖ್ಯಾತರಿಗೂ ರಕ್ಷಣೆ ಇಲ್ಲ: ಅಲ್ಪಸಂಖ್ಯಾತ ಸಮುದಾಯದವರು ತಮಗೆ ರಕ್ಷಣೆ ಸಿಗುತ್ತದೆ ಎಂದು ನಂಬಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿದರು. ಆದರೆ, ಇಂದು ಅದೇ ಸರ್ಕಾರ ಬೆಂಗಳೂರಿನಲ್ಲಿ ಅಲ್ಪಸಂಖ್ಯಾತ ಕುಟುಂಬಗಳ ಮನೆಗಳನ್ನು ಒಡೆದು ಹಾಕಿ, ಅವರು ಕೊರೆಯುವ ಚಳಿಯಲ್ಲಿ ಬೀದಿಯಲ್ಲಿ ಮಲಗುವಂತೆ ಮಾಡಿದೆ. ಹಾಸನ ಜಿಲ್ಲಾ ಉಸ್ತುವಾರಿ ಸಚಿವರೇ ಆ ಭಾಗದ ಶಾಸಕರು. ಅವರಿಗೆ ನಾಲ್ಕೈದು ವರ್ಷಗಳಿಂದ ಅಲ್ಲಿ ಜನರು ಮನೆ ಕಟ್ಟಿಕೊಂಡಿದ್ದು ಅವರಿಗೆ ತಿಳಿದಿರಲಿಲ್ಲವೇ. ಮತ ಹಾಕಿಸಿಕೊಂಡು ಈಗ ಅವರನ್ನು ಬೀದಿಗೆ ತಳ್ಳುವುದು ಎಷ್ಟು ಸರಿ ಎಂದು ಕಿಡಿಕಾರಿದರು.

ದೇವೇಗೌಡರ ಬದ್ಧತೆ ನಮಗೆ ಮಾದರಿ: 1989ರಲ್ಲಿ ಹೊಳೆನರಸೀಪುರದಲ್ಲಿ ದೇವೇಗೌಡರನ್ನು ಸೋಲಿಸಿದ ಪರಿಣಾಮವನ್ನು ಕಾವೇರಿ ಜಲಾನಯನ ಪ್ರದೇಶದ ಜನ ಈಗಲೂ ಅನುಭವಿಸುತ್ತಿದ್ದಾರೆ. ಅಂದು ನಮ್ಮ ತಂದೆಯವರನ್ನು ಸೋಲಿಸಿ, ಬೇರೊಬ್ಬರನ್ನು ನೀರಾವರಿ ಸಚಿವರನ್ನಾಗಿ ಮಾಡಿದ್ದರಿಂದ ಕಾವೇರಿ ವಿಚಾರದಲ್ಲಿ ರಾಜ್ಯಕ್ಕೆ ಹಿನ್ನಡೆಯಾಯಿತು. ದೇವೇಗೌಡರು ಹೇಮಾವತಿ ಜಲಾಶಯ ನಿರ್ಮಿಸದಿದ್ದರೆ ಇಂದು ತುಮಕೂರಿಗೆ ನೀರು ಸಿಗುತ್ತಿರಲಿಲ್ಲ. 2026ರ ಏಪ್ರಿಲ್‌ಗೆ ದೇವೇಗೌಡರ ರಾಜ್ಯಸಭೆ ಅವಧಿ ಮುಗಿಯಲಿದ್ದು, ತಮ್ಮ 93ರ ಇಳಿವಯಸ್ಸಿನಲ್ಲೂ ರಾಜ್ಯದ ನೀರಾವರಿ ಯೋಜನೆಗಳ ಬಗ್ಗೆ ಮಾತನಾಡಲು ಸ್ಪೀಕರ್ ಬಳಿ ಅರ್ಧ ಗಂಟೆ ಸಮಯ ಕೇಳಿದ್ದಾರೆ. ಇದು ಅವರ ಬದ್ಧತೆ ಎಂದರು.

ನಾನು ಆಕಸ್ಮಿಕವಾಗಿ ರಾಜಕೀಯಕ್ಕೆ ಬಂದು, ದಿನಕ್ಕೆ 20 ಗಂಟೆ ಕೆಲಸ ಮಾಡಿದೆ. ಜನತಾ ದರ್ಶನ, ಗ್ರಾಮ ವಾಸ್ತವ್ಯದಂತಹ ಮಾದರಿ ಕಾರ್ಯಕ್ರಮಗಳನ್ನು ನೀಡಿದೆ. ಅಧಿಕಾರಿಗಳ ವಿರೋಧದ ನಡುವೆಯೂ ಅರಸೀಕೆರೆಗೆ ಇಂಜಿನಿಯರಿಂಗ್ ಕಾಲೇಜು ಮಂಜೂರು ಮಾಡಿದೆ. ಹಾಸನ ವಿಮಾನ ನಿಲ್ದಾಣ ಯೋಜನೆ ಕೂಡ ಕೃಷಿ ಉತ್ಪನ್ನಗಳ ಸಾಗಣೆಗಾಗಿಯೇ ಹೊರತು ಮೋಜಿನ ಜೀವನಕ್ಕಲ್ಲ ಎಂದು ಸ್ಪಷ್ಟಪಡಿಸಿದರು.

ಇಂದು ಮೈಸೂರಿನಲ್ಲಿ ರಥಸಪ್ತಮಿ 'ನೃತ್ಯ ಸಮರ್ಪಣಂ'

ಮೈಸೂರು: ಮೈಸೂರಿನ ವಿಜಯನಗರದ ನೃತ್ಯ ವರ್ಣ ಕಲಾ ಸೌರಭ ವತಿಯಿಂದ ರಥಸಪ್ತಮಿ ಪ್ರಯುಕ್ತ ಸಾಮೂಹಿಕ ನೃತ್ಯ ಸೇವೆ ನೃತ್ಯ ಸಮರ್ಪಣಂ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಪ್ರತಿವರ್ಷ ರಥಸಪ್ತಮಿ ದಿನದಂದು 'ನೃತ್ಯ ಸಮರ್ಪಣಂ' ಕಾರ್ಯಕ್ರಮವನ್ನು ಮೈಸೂರಿನ ವಿವಿಧ ದೇವಾಲಯಗಳಲ್ಲಿ ನಡೆಸಿಕೊಂಡು ಬರುತ್ತಿದ್ದು, ಈ ವರ್ಷ ಜ.25 ರಂದು ಸಂಜೆ 5 ಗಂಟೆಗೆ ನಗರದ ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿರುವ ಶ್ರೀ ಲಕ್ಷ್ಮೀಕಾಂತ ಸ್ವಾಮಿ ದೇವಸ್ಥಾನದಲ್ಲಿ 'ನೃತ್ಯ ಸಮರ್ಪಣಂ' ಕಾರ್ಯಕ್ರಮ ಆಯೋಜಿಸಲಾಗಿದೆ. ಅಧ್ಯಕ್ಷತೆಯನ್ನು ಶ್ರೀ ಸೋಮೇಶ್ವರ ಸ್ವಾಮೀಜಿ ವಹಿಸಲಿದ್ದು, ಸುಮಾರು 110ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ ಎಂದು ಸಂಸ್ಥೆ ಸಂಸ್ಥಾಪಕ ನಿರ್ದೇಶಕಿ ಕಲ್ಪಿತ ಪ್ರಶಾಂತ್ ತಿಳಿಸಿದ್ದಾರೆ.

ಕ್ಯಾರೆ ಎನ್ನದ ಅಧಿಕಾರಿ ವರ್ಗ!

ಮಾಡಿದ ಶಿಫಾರಸುಗಳನ್ನು ಹಿರಿಯ ಅಧಿಕಾರಿಗಳು ಪರಿಗಣಿಸುತ್ತಿಲ್ಲ ಎಂಬುದು ಎಷ್ಟರ ಮಟ್ಟಿಗೆ ಇದೆ ಎಂದರೆ, ಜನಪ್ರತಿನಿಧಿಗಳು ಕೇಳುವ ಅಧಿಕಾರಿಗಳ ವರ್ಗಾವಣೆ ಇಲ್ಲದೆ ಅನೇಕ ಹುದ್ದೆಗಳು ಖಾಲಿ ಇವೆ. ಇದು ಶಾಸಕರಿಗಷ್ಟೇ ಅಲ್ಲ, ಗೃಹ ಸಚಿವ ಡಾ.ಜಿ.ಪರಮೇಶ್ವರ್ ಸಹ ತಮ್ಮ ಇಲಾಖಾ ವರ್ಗಾವಣೆಗೆ ಸಂಬಂಧಿಸಿದಂತೆ ಬಹಿರಂಗವಾಗಿಯೇ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಐಎಎಸ್, ಐಪಿಎಸ್, ಕೆಎಎಸ್ ಶ್ರೇಣಿಯ ಅಧಿಕಾರಿಗಳ ವರ್ಗಾವಣೆ ತೀರ್ಮಾನ, ಆಡಳಿತಕ್ಕೆ ಸಂಬಂಧಿಸಿದ ನಿರ್ಣಯಗಳನ್ನು ಕೈಗೊಳ್ಳುವ ಡಿಪಿಆರ್ ಕಾರ್ಯದರ್ಶಿಗಳಿಗೆ ಸಿಎಂ ಕಾರ್ಯಾಲಯದಿಂದ 2 ಬಾರಿ ಕರೆ ಬಂದರೂ, ಅವರು ಅತ್ತ ಗಮನವನ್ನೇ ಹರಿಸಿಲ್ಲ. ಇದರಿಂದ ಸಿಟ್ಟಿಗೆದ್ದ ಸಿದ್ದರಾಮಯ್ಯ, ಸದರಿ ಅಧಿಕಾರಿ ಅಮಾನತಿಗೆ ಮುಖ್ಯಕಾರ್ಯದರ್ಶಿ ಅವರಿಗೆ ಸೂಚಿಸಿದ್ದರಾದರೂ, ಕೇವಲ ಕಾರಣ ಕೇಳಿ ನೋಟಿಸ್ ನೀಡಲಾಗಿದೆ. ಶಾಸಕರ ಶಿಫಾರಸುಗಳಿಗೆ ಅಧಿಕಾರಿಗಳು ಸ್ಪಂದಿಸುತ್ತಿಲ್ಲ. ಕೆಲವು ಅಧಿಕಾರಿಗಳಂತೂ ಜನಪ್ರತಿನಿಧಿಗಳ ದೂರವಾಣಿ ಕರೆಗಳನ್ನೂ ಸ್ವೀಕರಿಸುತ್ತಿಲ್ಲ.

ಈ ಬೆಳವಣಿಗೆಯಿಂದ ಬೇಸರಗೊಂಡ ಜನಪ್ರತಿನಿಧಿಗಳು ಸಿಎಂ, ಡಿಸಿಎಂಗೆ ದೂರು ನೀಡಿದ್ದಾರೆ. ಜನಪ್ರತಿನಿಧಿಗಳು, ಆಡಳಿತಶಾಹಿ ನಡುವೆ ಕಂದಕ ನಿರ್ಮಾಣವಾಗುತ್ತಿದ್ದಂತೆ ಮುಖ್ಯ ಕಾರ್ಯದರ್ಶಿ, ಎಲ್ಲ ಹಿರಿಯ ಅಧಿಕಾರಿಗಳಿಗೆ ಪತ್ರ ಬರೆದು, ಸಂಸದರು, ವಿಧಾನಮಂಡಲದ ಉಭಯ ಸದನಗಳ ಸದಸ್ಯರು ಕರೆ ಮಾಡಿದರೆ ಸ್ವೀಕರಿಸಬೇಕು ಮತ್ತು ಅವರು ನೀಡುವ ಅಭಿವೃದ್ಧಿ ಕಾರ್ಯಗಳಿಗೆ ಸ್ಪಂದಿಸುವಂತೆ ಸುತ್ತೋಲೆ ಹೊರಡಿಸಿದ್ದಾರೆ.

ಯೋಜನಾ ಪ್ರದೇಶ ದ್ವಿಗುಣ

ಹೊರಡಿಸಿರುವುದರಿಂದ ಪಾಲಿಕೆ ವ್ಯಾಪ್ತಿಗೆ ಸುಮಾರು 40 ಗ್ರಾಮಗಳು ಸೇರಲಿವೆ. ಈ ಹಿನ್ನಲೆಯಲ್ಲಿ ಪ್ರಸ್ತುತ 2031ರವರೆಗೆ ಅನುಮೋದನೆಯಾಗಿದ್ದ ಮೈಸೂರು ಸ್ಥಳೀಯ ಯೋಜನಾ ಪ್ರದೇಶವನ್ನು (ಎಂಡಿಎ ವ್ಯಾಪ್ತಿ) ವಿಸ್ತರಿಸಿ ಮತ್ತಷ್ಟು ಗ್ರಾಮಗಳನ್ನು ಸೇರಿಸುವ ಬಗ್ಗೆ ಸಭೆಯಲ್ಲಿ ಸುದೀರ್ಘ ಚರ್ಚಿಸಿ, ಸಾಧಕ–ಬಾಧಕಗಳ ಕುರಿತು ಅವಲೋಕಿಸಿ, ಎಲ್‌ಪಿಎ ವ್ಯಾಪ್ತಿಯನ್ನು 509 ಚದರ ಕಿ.ಮೀ. ನಿಂದ 1200 ಚದರ ಕಿ.ಮೀ.ರವರೆಗೆ ವಿಸ್ತರಿಸಲು ಒಮ್ಮತದ ತೀರ್ಮಾನ ಕೈಗೊಳ್ಳಲಾಯಿತು.

ರೈತರಿಗೆ ಮುಂಗಡ ಹಣ: ಪ್ರಾಧಿಕಾರವು ಮೈಸೂರು ತಾಲೂಕು, ಇಲವಾಲ ಹೋಬಳಿ ಬೋಮೇನ ಹಳ್ಳಿ ಸುತ್ತಮುತ್ತ ಸುಮಾರು 2000 ಎಕರೆ ಪ್ರದೇಶದಲ್ಲಿ ಅನುಷ್ಠಾನಗೊಳ್ಳಲುದ್ದೇಶಿಸಿರುವ ವಸತಿ ಬಡಾವಣೆ (ಟೌನ್‌ಶಿಪ್) ಬಡಾವಣೆಗೆ ಭೂಮಿ ನೀಡಲು ಮುಂದಾಗುತ್ತಿರುವ ರೈತರು ಮುಂಗಡ ಹಣ ಹಾಗೂ ಪರಿಹಾರ ಕೇಳುತ್ತಿರುವ ಕುರಿತಂತೆ ಎಂಡಿಎ ಕಮಿಷನರ್ ಕೆ.ಆರ್. ರಕ್ಷಿತ್ ವಿಷಯ ಪ್ರಸ್ತಾಪಿಸಿದರು.

ಈ ಬಗ್ಗೆ ಸಮಾಲೋಚನೆ ನಡೆಸಿದ ಸಭೆಯು ಬಡಾವಣೆ ನಿರ್ಮಿಸಿ ವಸತಿ ರಹಿತರಿಗೆ ನಿಯಮಾನುಸಾರ ನಿವೇಶನಗಳನ್ನು ಮಂಜೂರು ಮಾಡುವುದು ಪ್ರಾಧಿಕಾರ ಪ್ರಮುಖ ಜವಾಬ್ದಾರಿಯಾಗಿರುವುದರಿಂದ ರೈತರ ಬೇಡಿಕೆಗಳನ್ನು ಈಡೇರಿಸುವುದು ಅನಿವಾರ್ಯವಾಗಿದೆ ಎಂಬುದನ್ನು ಮನಗಂಡು ಸಭೆಯು ಶೇ.50:50ರ ಅನುಪಾತದಲ್ಲಿ ಒಡಂಬಡಿಕೆ ಮಾಡಿ ರೈತರಿಂದ ಭೂಮಿ ಪಡೆಯಲು ನಿರ್ಧರಿಸಲಾಯಿತು.

ಪಿಪಿಪಿ ಬದಲಾಗಿ ಇಪಿಸಿ: ಉದ್ದೇಶಿತ ಪೆರಿಫೆರಲ್ ರಿಂಗ್ ರಸ್ತೆ ನಿರ್ಮಾಣ ಯೋಜನೆಗಾಗಿ ಈ ಹಿಂದೆ ಪಿಪಿಪಿ ಮಾದರಿಯಲ್ಲಿ ತಯಾರಿಸಲಾಗಿದ್ದ ಡಿಪಿಆರ್ ಬದಲು ಇಪಿಸಿ (ಇಂಜಿನಿಯರಿಂಗ್, ಪ್ರೊಕ್ಯೂರ್‌ಮೆಂಟ್ ಅಂಡ್ ಕನ್‌ಸ್ಟ್ರಕ್ಷನ್) ಮಾದರಿಯನ್ನು ಅಳವಡಿಸಿಕೊಂಡು ಪ್ರಾಧಿಕಾರವೇ ಯೋಜನೆ ರೂಪಿಸುವ ಬಗ್ಗೆಯು ಸಭೆ ನಿರ್ಣಯ ಕೈಗೊಂಡಿತು.

> ಎಂಡಿಎ ಸಭೆಯಲ್ಲಿ ಕೈಗೊಂಡ ನಿರ್ಣಯದ ನಡಾವಳಿಯೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಅನುಮೋದನೆ ಪಡೆದ ಬಳಿಕ ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಿ ಅಂತಿಮವಾಗಿ ಇದನ್ನು ಅನುಷ್ಠಾನಗೊಳಿಸಬೇಕಾಗಿದೆ. ಅದಕ್ಕೆ ಪೂರಕವಾಗಿ ನಕ್ಷೆ, ಯೋಜನಾ ಬದ್ಧ ಅಭಿವೃದ್ಧಿ ಮಾಹಿತಿಗಳು, ಭವಿಷ್ಯದ ಜನಸಂಖ್ಯೆ, ವಾಹನ ದಟ್ಟಣೆಗನುಗುಣವಾಗಿ ಯೋಜನೆ ರೂಪಿಸುವ ಸಂಬಂಧ ದೃಢೀಕೃತ ದಾಖಲೆಗಳನ್ನು ಎಂಡಿಎ ಅಧಿಕಾರಿಗಳು ಸರ್ಕಾರಕ್ಕೆ ಸಲ್ಲಿಸಲಿದ್ದಾರೆ.

ಬಡಾವಣೆ ಅನುಮೋದನೆ: ಖಾಸಗಿ ಡೆವಲಪರ್‌ಗಳು, ಗೃಹನಿರ್ಮಾಣ ಸಹಕಾರ ಸಂಘಗಳು ಹಾಗೂ ವ್ಯಕ್ತಿಗಳು ರಚಿಸಲು ಮುಂದಾಗಿರುವ ಸುಮಾರು 450 ಎಕರೆ ವಸತಿ ಬಡಾವಣೆಗಳಿಗೆ ನಕ್ಷೆ ಅನುಮೋದನೆ ಹಾಗೂ ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿಗೊಂಡಿರುವ ಬಡಾವಣೆಗಳ ನಿವೇಶನಗಳನ್ನು ಬಿಡುಗಡೆ ಮಾಡುವ ಬಗ್ಗೆಯೂ ಪ್ರಾಧಿಕಾರದ ಸಭೆ ಸಮ್ಮತಿಸಿತು. ನಗರಾಭಿವೃದ್ಧಿ ಇಲಾಖೆ ಜಂಟಿ ನಿರ್ದೇಶಕ ಕೃಷ್ಣಮೂರ್ತಿ, ಪಾಲಿಕೆ ಕಮಿಷನರ್ ಶೇಖ್ ತನ್ವೀರ್ ಆಸೀಫ್, ಎಂಡಿಎ ಕಾರ್ಯದರ್ಶಿ ಜಾನ್ಸನ್, ಸೂಪರಿಂಟೆಂಡಿಂಗ್ ಇಂಜಿನಿಯರ್ ಮಂಜು, ನಗರ ಯೋಜಕ ಸದಸ್ಯ ಶಿವರಾಮಯ್ಯ, ಸೆಸ್ಕ್ ಚೀಫ್ ಇಂಜಿನಿಯರ್ ಮೃತ್ಯಂಜಯ್, ನಗರ ನೀರು ಸರಬರಾಜು–ಒಳಚರಂಡಿ ಮಂಡಳಿ ಚೀಫ್ ಇಂಜಿನಿಯರ್ ಸುಬಾಶ್ ನಾಯ್ಕವಾಡ ಉಪಸ್ಥಿತರಿದ್ದರು.

ಕಬಿನಿ ಹಿನ್ನೀರಿನಲ್ಲಿ ನಿರ್ಮಾಣಗೊಂಡಿರುವ ರೆಸಾರ್ಟ್‌ಗಳ ವಿರುದ್ಧ ಫೆ.25ರೊಳಗೆ ಕ್ರಮ ಜರುಗಿಸದಿದ್ದರೆ ಹೋರಾಟ

ಸೇವ್ ಕಬಿನಿ ಸಮಿತಿಯಿಂದ ಎಚ್ಚರಿಕೆ



ಸುದ್ದಿಗೋಷ್ಠಿಯಲ್ಲಿ ವಕೀಲ ರವಿಕುಮಾರ್ ಮಾತನಾಡಿದರು.

ಮೈಸೂರು, ಜ.24(ಜಿಎ)–ಕಬಿನಿ ಹಿನ್ನೀರಿನ ಸುತ್ತಮುತ್ತಲೂ ಅನಧಿಕೃತವಾಗಿ ನಿರ್ಮಾಣಗೊಂಡಿರುವ ರೆಸಾರ್ಟ್ ವಿರುದ್ಧ ಫೆ.25ರೊಳಗೆ ಕ್ರಮ ಜರುಗಿಸದಿದ್ದರೆ ರೈತಪರ, ದಲಿತಪರ, ಕನ್ನಡಪರ, ಕಾರ್ಮಿಕಪರ ಸೇರಿದಂತೆ ವಿವಿಧ ಸಂಘಟನೆಗಳ ವತಿಯಿಂದ ಅನಿರ್ದಿಷ್ಟಾವಧಿ ಹೋರಾಟ ಮಾಡಲಾಗುತ್ತದೆ ಎಂದು ಸೇವ್ ಕಬಿನಿ ಸಮಿತಿ ಎಚ್ಚರಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಮಿತಿ ಸದಸ್ಯ ವಕೀಲ ರವಿಕುಮಾರ್ ಈ ವಿಷಯ ತಿಳಿಸಿ, ಕಳೆದೊಂದು ವರ್ಷದಿಂದ ಅಕ್ರಮ ರೆಸಾರ್ಟ್‌ಗಳ ವಿರುದ್ಧ ಸಾಕಷ್ಟು ಹೋರಾಟಗಳನ್ನು ಮಾಡಿಕೊಂಡು ಬಂದಿದ್ದು, ಜೊತೆಗೆ ಇದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಸಂಗ್ರಹಿಸಿ ಅಧಿಕಾರಿಗಳಿಗೂ ನೀಡಲಾಗಿದೆ. ಆದರೂ ಏನು ಪ್ರಯೋಜನವಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಕಬಿನಿ ಹಿನ್ನೀರು ಪ್ರದೇಶ, ಬಂಡೀಪುರ, ನಾಗರಹೊಳೆ ಅರಣ್ಯ ಹುಲಿ ಸಂರಕ್ಷಿತ ಪ್ರದೇಶವಾಗಿದ್ದು, ಸುತ್ತಮುತ್ತಲೂ ಸೂಕ್ಷ್ಮ ವಲಯ ಇದೆ. ಆದರೆ ಇಲ್ಲಿ ರೆಸಾರ್ಟ್ ಹಾಗೂ ಸಫಾರಿಗಳಿಂದಾಗಿ ಪರಿಸರಕ್ಕೆ ಹಾನಿಯಾಗುತ್ತಿದೆ. ವನ್ಯಜೀವಿ–ಮಾನವ ಸಂಘರ್ಷಕ್ಕೆ ಇವು ಕಾರಣವಾಗಿವೆ. ಇಡೀ ರಾಜ್ಯದ ಮನೆಗಳಿಗೆ ಉಚಿತ ವಿದ್ಯುತ್, ಮಹಿಳೆಯರಿಗೆ ಗೃಹಲಕ್ಷ್ಮಿ, ಉಚಿತ ಸಾರಿಗೆ ಭಾಗ್ಯ ನೀಡಿರುವ ಸರ್ಕಾರ ಸಫಾರಿಯಿಂದ ಬರುವ ಚಿಲ್ಲರೆ ಕಾಸಿಗೆ ಮರುಳಾಗುವುದು ಸರಿಯಲ್ಲ. ಹುಲಿ ಯೋಜನೆ ಇರುವ ಪ್ರದೇಶದಲ್ಲಿ ಸಫಾರಿಗೆ ಅನುಮತಿಯಿಲ್ಲ ಎಂದು 2025ರ ನ.17ರಂದಿನ ಸುಪ್ರೀಂ ಕೋರ್ಟ್ ಗೋದಾವರ್ಮನ್ ಪ್ರಕರಣದ ತೀರ್ಪು ಹೇಳಿದೆ. ಆದರೂ ಇಲ್ಲಿ ಸಫಾರಿಗೆ ಅವಕಾಶ ನೀಡಿ ಪ್ರಾಣಿಗಳ ನೆಮ್ಮದಿಗೆ ಭಂಗ ತರಲಾಗಿದೆ. ಅರಣ್ಯದ ಒಳಗೆ ದೊಡ್ಡ ವಾಹನಗಳ ಸಂಚಾರಕ್ಕೆ ಅವಕಾಶವಿಲ್ಲ ಎಂಬುದನ್ನು ಉಲ್ಲಂಘಿಸಲಾಗಿದೆ. ಸೂಕ್ಷ್ಮ ವಲಯದಲ್ಲಿ ಕಾಂಕ್ರಿಟ್ ಕಟ್ಟಡ, ಬಹುಮಹಡಿ ಕಟ್ಟಡಗಳಿವೆ, ಶಬ್ದ ಮಾಲಿನ್ಯ, ಜಲ ಮಾಲಿನ್ಯದಿಂದ ಪರಿಸರ ಹಾಳು ಮಾಡಲಾಗುತ್ತಿದೆ ಎಂದು ಕಿಡಿಕಾರಿದರು.

ಬೆರಳೆಣಿಕೆಯ ಬಂಡವಾಳ ಶಾಹಿಗಳ ರೂಪದಲ್ಲಿರುವ ಭೂಗಳ್ಳರು, ಅರಣ್ಯ ಭಕ್ಷಕರು ನಾಡಿನ ಇಂದಿನ ಹಾಗೂ ಮುಂದಿನ ಪೀಳಿಗೆಯ ಭವಿಷ್ಯಕ್ಕಿಂತ ಹೆಚ್ಚಾದರೇ ಎಂದು ಪ್ರಶ್ನಿಸಿ, ಪಾರದರ್ಶಕವಲ್ಲದ, ಮೂಲ ಕರಡು ಹಾಗೂ ನಕ್ಷೆಯ ಆಧಾರದ ಮೇಲೆ ಜಂಟಿ ಸ್ಥಳ ಪರಿಶೀಲನೆ ಹಾಗೂ ಸರ್ವೆ ಮಾಡದೇ ವಾಣಿಜ್ಯ ವಹಿವಾಟು ಮಾಡುವವರು ಕೊಟ್ಟಿರುವ ದಾಖಲೆ ಮೇಲೆ ಸಿದ್ಧಪಡಿಸಿರುವ ಈ ಕುರಿತ ವರದಿಯನ್ನು ನಾವು ಯಾವುದೇ ಕಾರಣಕ್ಕೂ ಒಪ್ಪುವುದಿಲ್ಲ. ಹೀಗಾಗಿ ಪಾರದರ್ಶಕವಾದ ಜಂಟಿ ಸಮಿತಿ ರಚಿಸಬೇಕು. ಅದೇ ಸಮಿತಿ ಸ್ಥಳ ಪರಿಶೀಲನೆ ನಡೆಸಬೇಕು, ಕಬಿನಿ ಜಲಾಶಯ ಹಿನ್ನೀರಿನ ಸರ್ವೆ, ಗೋದಾವರ್ಮನ್ ತೀರ್ಪಿನ ಅಡಿಯಲ್ಲಿ ಇಡೀ ರಾಜ್ಯದ ಕೋರ್ ಅರಣ್ಯ, ಬಫರ್ ವಲಯ ಮತ್ತು ಪರಿಸರ ಸೂಕ್ಷ್ಮ ವಲಯ ಗುರುತು ಮಾಡಬೇಕು. ಸರ್ಕಾರದ ಉನ್ನತ ಅಧಿಕಾರಿಗಳು, ಜಿಲ್ಲಾಡಳಿತದ ಅಧಿಕಾರಿಗಳು, ಸೇವ್ ಕಬಿನಿ ತಂಡದ ಪ್ರತಿನಿಧಿಗಳು, ಹೈಕೋರ್ಟ್ ನಿವೃತ್ತ ನ್ಯಾಯಾಧೀಶರು, ಅರಣ್ಯ, ಪರಿಸರ ಮತ್ತು ನೀರಾವರಿ ಇಲಾಖೆ ತಜ್ಞತೆ ಹೊಂದಿರುವವರು ಈ ಸಮಿತಿಯಲ್ಲಿರಬೇಕು. ಇವನ್ನು ಫೆ25ರೊಳಗೆ ಕಾರ್ಯರೂಪಕ್ಕೆ ತರದಿದ್ದರೆ ಅಂದಿನಿಂದ ಪ್ರಾದೇಶಿಕ ಆಯುಕ್ತರ ಕಚೇರಿ ಎದುರು ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಸಲಾಗುವುದೆಂದು ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಹೊನ್ನೂರು ಪ್ರಕಾಶ್, ಮಂಜುಕಿರಣ್, ಎಂ. ಮಂಜುನಾಥ್, ಭಾನುಮೋಹನ್, ಅರವಿಂದ ಶರ್ಮ ಉಪಸ್ಥಿತರಿದ್ದರು.

ರಾಜ್ಯಪಾಲರ ಅಡ್ಡಗಟ್ಟಿ–ಕಾಂಗ್ರೆಸ್ಸಿನಿಂದ ಗೂಂಡಾ ವರ್ತನೆ ಆರೋಪ

ಮೈಸೂರಲ್ಲಿ ಬಿಜೆಪಿಯಿಂದ ಪ್ರತಿಭಟನೆ



ವಿಧಾನಸಭೆ ಜಂಟಿ ಅಧಿವೇಶನದಲ್ಲಿ ಕಾಂಗ್ರೆಸ್ ನಾಯಕರು ರಾಜ್ಯಪಾಲರನ್ನು ಅಡ್ಡಗಟ್ಟಿ ಗೂಂಡಾ ವರ್ತನೆ ತೋರಿದ್ದಾರೆ ಎಂದು ಆಪಾದಿಸಿ ಬಿಜೆಪಿ ಮೈಸೂರು ನಗರ–ಗ್ರಾಮಾಂತರ ಯುವ ಮೋರ್ಚಾದಿಂದ ರಾಮಸ್ವಾಮಿ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.

ಮೈಸೂರು,ಜ.24(ಜಿಎ)–ವಿಧಾನಸಭೆ ಜಂಟಿ ಅಧಿವೇಶನದಲ್ಲಿ ಕಾಂಗ್ರೆಸ್ ನಾಯಕರು ರಾಜ್ಯಪಾಲರನ್ನು ಅಡ್ಡಗಟ್ಟಿ ಗೂಂಡಾ ವರ್ತನೆ ತೋರಿದ್ದಾರೆ ಎಂದು ಆಪಾದಿಸಿ ಬಿಜೆಪಿ ಮೈಸೂರು ನಗರ ಮತ್ತು ಗ್ರಾಮಾಂತರ ಯುವ ಮೋರ್ಚಾ ವತಿಯಿಂದ ರಾಮಸ್ವಾಮಿ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.

'ದಲಿತ ರಾಜ್ಯಪಾಲರನ್ನು ಅವಮಾನಿಸಿದ ರಾಜ್ಯ ಸರಕಾರಕ್ಕೆ ಧಿಕ್ಕಾರ', 'ದಲಿತ ವಿರೋಧಿ ಕಾಂಗ್ರೆಸ್‌ಗೆ ಧಿಕ್ಕಾರ', 'ರೌಡಿ ಕೊತ್ವಾಲ್ ಶಿಷ್ಯ ಹರಿಪ್ರಸಾದ್‌ಗೆ ಧಿಕ್ಕಾರ', 'ಕಾಂಗ್ರೆಸ್ ಗೂಂಡಾಗಳಿಗೆ ಧಿಕ್ಕಾರ', 'ಹರಿಪ್ರಸಾದ್ ಹಟಾವೋ ಕರ್ನಾಟಕ ಬಚಾವೋ' ಸೇರಿದಂತೆ ವಿವಿಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು ವಿಧಾನಸಭೆ ಜಂಟಿ ಅಧಿವೇಶನದಲ್ಲಿ ಭಾಷಣ ಮಾಡಿ ತೆರಳುತ್ತಿದ್ದ ವೇಳೆ ವಿಧಾನಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಸೇರಿದಂತೆ ಹಲವು ಕಾಂಗ್ರೆಸ್ ನಾಯಕರು ರಾಜ್ಯಪಾಲರನ್ನು ಅಡ್ಡಗಟ್ಟಿ ಗೂಂಡಾ ವರ್ತನೆ ತೋರಿದ್ದಾರೆ. ಸಂವಿಧಾನ ರಕ್ಷಕರು ಎಂದು ಬಿಂಬಿಸಿಕೊಳ್ಳುವವರು ಈ ರೀತಿ ವರ್ತಿಸಿ ಕೇವಲ ಸದನಕ್ಕೆ ಮಾತ್ರವಲ್ಲದೆ ಸಂವಿಧಾನಕ್ಕೂ ಅಪಮಾನ ಮಾಡಿದ್ದಾರೆ ಎಂದು ಪ್ರತಿಭಟನಕಾರರು ಕಿಡಿಕಾರಿದರು.

ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಮಾತನಾಡಿ, ರಾಜ್ಯಪಾಲರು ಜಂಟಿ ಅಧಿವೇಶನದ ಭಾಷಣ ಮುಗಿಸಿಕೊಂಡು ಹೋಗುವ ಸಂದರ್ಭದಲ್ಲಿ ಕಾಂಗ್ರೆಸ್ ಶಾಸಕರು ಅವರನ್ನು ತಡೆದು ಗೂಂಡಾಗಳಂತೆ ವರ್ತಿಸಿರುವುದಲ್ಲದೆ ಸಂವಿಧಾನಕ್ಕೆ ಅವಮಾನ ಮಾಡಿದ್ದಾರೆ. ಬಿ.ಕೆ.ಹರಿಪ್ರಸಾದ್, ಬಾಲಕೃಷ್ಣ ಸೇರಿದಂತೆ ಕಾಂಗ್ರೆಸ್‌ನ ಹಲವು ಶಾಸಕರು ರಾಜ್ಯಪಾಲರ ಸ್ಥಾನಕ್ಕೆ ಅಗೌರವ ತಂದಿದ್ದಾರೆ. ಸಿಎಂ ಸಿದ್ದರಾಮಯ್ಯ ಇದಕ್ಕೆ ಕುಮ್ಮಕ್ಕು ಕೊಟ್ಟಿದ್ದಾರೆ. ಹೀಗಾಗಿ ಕೂಡಲೇ ರಾಷ್ಟ್ರಪತಿಗಳು ಮಧ್ಯಪ್ರವೇಶಿಸಿ ಗೂಂಡಾ ಶಾಸಕರನ್ನು ವಜಾಗೊಳಿಸಬೇಕು. ಸಂವಿಧಾನಕ್ಕೆ ಅಪಮಾನ ಮಾಡಿರುವ ಕಾಂಗ್ರೆಸ್ ಸರ್ಕಾರವನ್ನು ಕಿತ್ತೊಗೆಯಬೇಕು ಎಂದು ಆಗ್ರಹಿಸಿದರು.

ಯುವ ಮೋರ್ಚಾ ಅಧ್ಯಕ್ಷ ರಾಕೇಶ್ ಗೌಡ ಮಾತನಾಡಿ, ಮೊನ್ನೆ ನಡೆದ ವಿಧಾನಸಭೆಯ ಜಂಟಿ ಅಧಿವೇಶನದಲ್ಲಿ ಕಾಂಗ್ರೆಸ್ ಶಾಸಕರು ರಾಜ್ಯಪಾಲರ ಸಾಂವಿಧಾನಿಕ ಹುದ್ದೆಗೆ ಅಗೌರವ ತೋರಿದ್ದಾರೆ. ಅವರಿಗೆ ಅದು ಸಾಂವಿಧಾನಿಕ ಹುದ್ದೆ ಎಂಬುದೇ ಗೊತ್ತಿಲ್ಲ. ಬಿ.ಕೆ.ಹರಿಪ್ರಸಾದ್, ಬಾಲಕೃಷ್ಣ ಸೇರಿದಂತೆ ಹಲವು ಕಾಂಗ್ರೆಸ್ ಶಾಸಕರು, ಮಾರ್ಷಲ್‌ಗಳು ಇಲ್ಲದಿದ್ದರೆ ರಾಜ್ಯಪಾಲರ ಮೇಲೆ ಹಲ್ಲೆಯನ್ನೇ ಮಾಡುತ್ತಿದ್ದರು. ಕಾಂಗ್ರೆಸ್‌ನವರು ಕರ್ನಾಟಕವನ್ನು ಗೂಂಡಾರಾಜ್ಯ ಮಾಡಲು ಹೊರಟಿದ್ದಾರೆ. ಆದರೆ, ಇದು 1980ರ ದಶಕ ಅಲ್ಲ. ಇದು ವಿಕಸಿತ ಭಾರತ ಎಂದರು.

ಅಂದು ಪಕ್ಷಾಂತರ ಮಾಡಿದರು ಎಂಬ ಕಾರಣಕ್ಕೆ 18 ಶಾಸಕರನ್ನು ಅಮಾನತು ಮಾಡಿದ್ದರು. ಆದರೀಗ ರಾಜ್ಯಪಾಲರಿಗೆ ಅಪಮಾನ ಮಾಡಿದ್ದರೂ ಸುಮ್ಮನಿರುವುದೇಕೆ? ಕೂಡಲೇ ದುರ್ವರ್ತನೆ ತೋರಿದ ಶಾಸಕರು ರಾಜ್ಯಪಾಲರ ಬಳಿ ಕ್ಷಮೆ ಕೋರಬೇಕು. ಸಿಎಂ ಸಿದ್ದರಾಮಯ್ಯ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಬಿಜೆಪಿ ಗ್ರಾಮಾಂತರ ಜಿಲ್ಲಾಧ್ಯಕ್ಷ ಕೆ.ಎನ್.ಸುಬ್ಬಣ್ಣ, ಮಾಜಿ ಮೇಯರ್ ಶಿವಕುಮಾರ್, ಮುಖಂಡರಾದ ಮಿರ್ಲೆ ಶ್ರೀನಿವಾಸ್‌ಗೌಡ, ಸೋಮಶೇಖರ್, ಚಂದ್ರಶೇಖರ ದಾರೀಪುರ, ಕಾರ್ತಿಕ್ ಮರಿಯಪ್ಪ, ಗೋಕುಲ್ ಗೋವರ್ಧನ್, ರುದ್ರಸ್ವಾಮಿ, ಜೋಗಿ ಮಂಜು, ರಾಕೇಶ್ ಭಟ್, ಅರುಣ್‌ಕುಮಾರ್‌ಗೌಡ, ಲೋಹಿತ್, ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಪೊಲೀಸರ ಕಾರ್ಯಾಚರಣೆ ; 166 ಲಘು, 108 ಕೋಟ್ಪಾ ಪ್ರಕರಣ ದಾಖಲು



ಪೊಲೀಸರು ಶನಿವಾರ ರಾತ್ರಿ ಕಾರ್ಯಾಚರಣೆ ನಡೆಸಿ ಕಾನೂನು ಸುವ್ಯವಸ್ಥೆಗೆ ಧಕ್ಕೆ ಉಂಟು ಮಾಡುವವರ ವಿರುದ್ಧ ಕ್ರಮ ಜರುಗಿಸಿದರು.

ಮೈಸೂರು,ಜ.24(ಪಿಎಂ)– ನಗರದ ಉದಯಗಿರಿ, ನರಸಿಂಹರಾಜ ಹಾಗೂ ಮಂಡಿ ಪೊಲೀಸ್ ಠಾಣೆಗಳ ವ್ಯಾಪ್ತಿ ಯಲ್ಲಿ ಶನಿವಾರ ರಾತ್ರಿ ಕಾರ್ಯಾಚರಣೆ ನಡೆಸಿರುವ ಪೊಲೀಸರು, 166 ಲಘು ಪ್ರಕರಣಗಳು ಹಾಗೂ 108 ಕೋಟ್ಪಾ ಪ್ರಕರಣಗಳನ್ನು ದಾಖಲಿಸಿದ್ದಾರೆ.

ಸದರಿ ಠಾಣೆಗಳ ವ್ಯಾಪ್ತಿಯ ಪ್ರದೇಶ ಗಳಲ್ಲಿ ಸಂಜೆ 6ರಿಂದ ರಾತ್ರಿ 10.30 ರವರೆಗೆ ಅಧಿಕಾರಿ ಮತ್ತು ಸಿಬ್ಬಂದಿ, ಕಮಾಂಡೋ ಪಡೆಗಳೊಂದಿಗೆ ವಿಶೇಷ ರೌಂಡ್ಸ್ ನಡೆಸಿದರು. ಈ ವೇಳೆ ಸಾರ್ವಜನಿಕ ರಸ್ತೆ ಹಾಗೂ ಸ್ಥಳಗಳಲ್ಲಿ ಕಾನೂನು ಉಲ್ಲಂಘಿಸುವ ಹಾಗೂ ಕಾನೂನು ಸುವ್ಯವಸ್ಥೆಗೆ ಧಕ್ಕೆ ಉಂಟು ಮಾಡುವವರ ವಿರುದ್ಧ ಕ್ರಮ ಕೈಗೊಳ್ಳಲಾಯಿತು.

ರಾತ್ರಿ 10.30ರ ವೇಳೆಯಲ್ಲಿ ಈ ಪ್ರದೇಶಗಳ ಪ್ರಮುಖ ರಸ್ತೆ ಹಾಗೂ ಜನಸಂದಣಿ ಪ್ರದೇಶಗಳಲ್ಲಿ ಎಲ್ಲಾ ಅಂಗಡಿ ಮುಂಗಟ್ಟುಗಳನ್ನು ನಿಗದಿತ ಸಮಯಕ್ಕೆ ಮುಚ್ಚಿಸಲಾಯಿತು. ನಿಗದಿತ ಸಮಯದ ನಂತರ ಸಕಾರಣವಿಲ್ಲದೆ ಅವಶ್ಯಕವಾಗಿ ಅಡ್ಡಾಡಿದ್ದಿ ಓಡಾಡುವ ವ್ಯಕ್ತಿಗಳು ವಿರುದ್ಧವೂ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು. ಮೈಸೂರು ನಗರದಲ್ಲಿ ಅಕ್ರಮ ಚಟುವಟಿಕೆಗಳನ್ನು ನಿಯಂತ್ರಿಸಿ, ಕಾನೂನು ಸುವ್ಯವಸ್ಥೆ ಮತ್ತು ಶಾಂತಿ ಕಾಪಾಡಲು ಸಾರ್ವಜನಿಕರು ಸಹಕರಿಸಬೇಕೆಂದು ಪೊಲೀಸರು ಕೋರಿದ್ದಾರೆ.

ಅಶೋಕಪುರಂನಲ್ಲಿ ನಾಳೆ ಸಂವಿಧಾನೋತ್ಸವ

ಮೈಸೂರು,ಜ.24(ಜಿಎ)–ಅಶೋಕಪುರಂ ಅಂಬೇಡ್ಕರ್ ಅಭಿಮಾನಿಗಳ ಬಳಗದಿಂದ ಗಣರಾಜ್ಯೋತ್ಸವದ ಅಂಗವಾಗಿ ಜ.26ರಂದು ಬೆಳಗ್ಗೆ 8.30ಕ್ಕೆ ಅಶೋಕಪುರಂನ ಅಂಬೇಡ್ಕರ್ ಉದ್ಯಾನವನದಲ್ಲಿ ಸಂವಿಧಾನೋತ್ಸವ ಆಚರಿಸಲಾಗುತ್ತದೆ ಎಂದು ವಕೀಲೆ ಕ್ಷಮಾ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ರಂಗ ನಿರ್ದೇಶಕಿ ಕೆ.ಆರ್.ಸುಮತಿ, ಇತಿಹಾಸ ತಜ್ಞ ನಂಜರಾಜ ಅರಸ್, ಮಾಜಿ ಮೇಯರ್ ಪುರುಷೋತ್ತಮ್, ಪಾಲಿಕೆ ಮಾಜಿ ಸದಸ್ಯೆ ಪಲ್ಲವಿ ಬೇಗಂ, ಸಾಹಿತಿ ಸಿದ್ದಸ್ವಾಮಿ, ಆದಿ ಕರ್ನಾಟಕ ಮಹಾ ಸಂಸ್ಥೆಯ ಅಧ್ಯಕ್ಷ ಸಿದ್ದರಾಜು(ಸುನೀಲ್), ಅಶೋಕಪುರಂನ ದೊಡ್ಡ ಗರಡಿ ಅಧ್ಯಕ್ಷ ಮಹೇಶ್(ಜೋಗಿ), ಚಿಕ್ಕಗರಡಿ ಅಧ್ಯಕ್ಷ ನಾಗರಾಜು(ಬಿಲ್ಲಯ್ಯ) ಆಗಮಿಸಲಿದ್ದಾರೆ ಎಂದರು. ಗೋಷ್ಠಿಯಲ್ಲಿ ಪಾಲಿಕೆ ಮಾಜಿ ಸದಸ್ಯೆ ಪಲ್ಲವಿ ಬೇಗಂ, ಸಾಹಿತಿ ಸಿದ್ದಸ್ವಾಮಿ, ಗೋವಿಂದ, ಡಾ.ರಾಜು, ಶಿವಣ್ಣ, ಬಬಿತಾ ಉಪಸ್ಥಿತರಿದ್ದರು.

ಹುಬ್ಬಳ್ಳಿಯಲ್ಲಿ 88,345 ಮನೆಗಳ ವಿತರಣೆಗೆ ಸಿಎಂ ಚಾಲನೆ



ಹುಬ್ಬಳ್ಳಿ: ವಸತಿ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಗೃಹಮಂಡಳಿ ವತಿಯಿಂದ ಇಂದು ಹುಬ್ಬಳ್ಳಿಯಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಗೃಹ ಮಂಡಳಿ ನಿರ್ಮಿಸಿರುವ 42,345 ಮನೆಗಳು ಹಾಗೂ ಕೊಳಗೇರಿ ಅಭಿವೃದ್ಧಿ ಮಂಡಳಿಯ 46,000 ಮನೆಗಳನ್ನು ವಸತಿ ರಹಿತ ಅರ್ಹ ಫಲಾನುಭವಿಗಳಿಗೆ ಸಿಎಂ ಸಿದ್ದರಾಮಯ್ಯ ವಿತರಿಸಿ, ಹೊಸ ಸೂರಿನಡಿ ನೆಮ್ಮದಿಯ ಬದುಕು ಕಟ್ಟಿಕೊಳ್ಳುವಂತೆ ಶುಭ ಹಾರೈಸಿದರು.

ಈ ವೇಳೆ ಎಐಸಿಸಿ ಅಧ್ಯಕ್ಷರು, ರಾಜ್ಯಸಭೆಯ ವಿಪಕ್ಷ ನಾಯಕರಾದ ಮಲ್ಲಿಕಾರ್ಜುನ ಖರ್ಗೆ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ವಸತಿ ಸಚಿವರಾದ ಜಮೀರ್ ಅಹ್ಮದ್ ಖಾನ್, ಸಚಿವರುಗಳಾದ ಸತೀಶ್ ಜಾರಕಿಹೊಳಿ, ಹೆಚ್.ಸಿ.ಮಹದೇವಪ್ಪ, ಹೆಚ್.ಕೆ.ಪಾಟೀಲ್, ಕೆ.ಹೆಚ್.ಮುನಿಯಪ್ಪ, ಸಂತೋಷ್ ಲಾಡ್, ಶಾಸಕರು, ಕೊಳೆಗೇರಿ ಅಭಿವೃದ್ಧಿ ಮಂಡಳಿ ಅಧ್ಯಕ್ಷರೂ ಆದ ಪ್ರಸಾದ್ ಅಬ್ಬಯ್ಯ, ಪರಿಷತ್ ಸದಸ್ಯರಾದ ಬಿ.ಕೆ.ಹರಿಪ್ರಸಾದ್, ಸಲೀಂ ಅಹ್ಮದ್ ಸೇರಿದಂತೆ ಸ್ಥಳೀಯ ಶಾಸಕರು, ಜನಪ್ರತಿನಿಧಿಗಳು ಹಾಗೂ ಮುಖಂಡರು ಉಪಸ್ಥಿತರಿದ್ದರು.

1.50 ಲಕ್ಷಕ್ಕೂ ಹೆಚ್ಚು ಜನರಿಗೆ ಊಟದ ವ್ಯವಸ್ಥೆ: ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳಿಯ ಐತಿಹಾಸಿಕ ಕಾರ್ಯಕ್ರಮಕ್ಕೆ ಎರಡು ಲಕ್ಷಕ್ಕೂ ಅಧಿಕ ಜನಸ್ತೋಮ ಭಾಗವಹಿಸಿತ್ತು. ಸಮಾರಂಭಕ್ಕೆ ಆಗಮಿಸಿದ್ದ ಸಾರ್ವಜನಿಕರಿಗೆ ರುಚಿ, ಶುಚಿಯಾದ ಊಟ, ಉಪಾಹಾರದ ವ್ಯವಸ್ಥೆ ಮಾಡಲಾಗಿತ್ತು.

ಇಂದು ಖಿದ್ಮಾ ಕನ್ನಡ ಸಂಗಮ ಕಾರ್ಯಕ್ರಮ

ಮೈಸೂರು, ಜ.24(ಜಿಎ)–ಖಿದ್ಮಾ ಫೌಂಡೇಶನ್‌ನ 6ನೇ ವಾರ್ಷಿಕೋತ್ಸವದ ಅಂಗವಾಗಿ ಮೈಸೂರಿನ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಜ.25ರಂದು ಬೆಳಗ್ಗೆ 9ರಿಂದ ಸಂಜೆ 6ರವರೆಗೆ 'ಖಿದ್ಮಾ ಕನ್ನಡ ಸಂಗಮ' ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಫೌಂಡೇಶನ್ ಅಧ್ಯಕ್ಷ ಅಮಿರ್ ಅಶ್‌ಅರೀ ಬನ್ನೂರು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ಜಿಲ್ಲಾ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಅಧ್ಯಾಪಕರಾದ ನೂರ್ ಅಸ್ಮಾ, ಮೆಹಬೂಬ ಸಾಹೇಬ, ಶಿಕ್ಷಕಿ ರಾಧಮಣಿ ಆಗಮಿಸಲಿದ್ದಾರೆ. ಆಶಯ ನುಡಿಯನ್ನು ಪತ್ರಕರ್ತ ಮಲ್ನಾಡ್ ಮೆಹಬೂಬ್ ಆಡಲಿದ್ದಾರೆ. ಅಧ್ಯಕ್ಷತೆಯನ್ನು ಸಾಹಿತಿ ಮಹಮ್ಮದ್ ಹುಮಾಯಾನ್ ವಹಿಸಲಿದ್ದಾರೆ.

ಇದೇ ವೇಳೆ ರಾಜ್ಯಮಟ್ಟದ ಖಿದ್ಮಾ ಕವಿಗೋಷ್ಠಿ ನಡೆಯಲಿದ್ದು, ರಾಜ್ಯದ ವಿವಿಧ ಭಾಗಗಳಿಂದ 12 ಮಂದಿ ಕವಿಗಳು ಭಾಗವಹಿಸಲಿದ್ದಾರೆ. ಅಧ್ಯಕ್ಷತೆಯನ್ನು ಸಾಹಿತಿ ನವೀದ್ ಮುಲ್ಲಾ ವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದ 12 ಮಂದಿ ಸಾಧಕರಿಗೆ ಖಿದ್ಮಾ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದರು.

ಸಮಾರೋಪ ಸಮಾರಂಭ ಹಾಗೂ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಸಂಜೆ 4 ಗಂಟೆಗೆ ಆರಂಭವಾಗಲಿದ್ದು, ಪ್ರಶಸ್ತಿಯನ್ನು ಶಾಸಕ ಕೆ.ಹರೀಶ್‌ಗೌಡ ವಿತರಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಪಾಲಿಕೆ ಮಾಜಿ ಸದಸ್ಯ ಎಸ್‌ಬಿಎಂ ಮಂಜು, ಸುಹೈಲ್ ಕಂದಕ್, ಡಾ.ಹೆಚ್.ಎನ್. ವಿಶ್ವನಾಥ್, ಮಹಮ್ಮದ್ ಹಾಕಿ ಕುಕ್ಕುವಳ್ಳಿ, ಹಾಶಿಂ ಬನ್ನೂರು ಆಗಮಿಸಲಿದ್ದಾರೆ ಎಂದರು. ಗೋಷ್ಠಿಯಲ್ಲಿ ಮುಹಮ್ಮದ್ ಹುಮಾಯೂನ್, ಶ್ರೀನಿವಾಸ್, ಕಮಲ ಇದ್ದರು.

ಯುವನಿಧಿ ಫಲಾನುಭವಿಗಳು ಕೌಶಲ ತರಬೇತಿಗೆ ನಿರಾಸಕ್ತಿ



ಸಾಂಕೇತಿಕ ಚಿತ್ರ

ಮೈಸೂರು, ಜ.24–ರಾಜ್ಯ ಸರ್ಕಾರದ ಮಹತ್ವದ 'ಯುವನಿಧಿ ಗ್ಯಾರಂಟಿ ಯೋಜನೆ' ಫಲಾನುಭವಿಗಳು ಕೌಶಲ ತರಬೇತಿ ಪಡೆಯುವಲ್ಲಿ ನಿರಾಸಕ್ತಿ ತೋರುತ್ತಿದ್ದಾರೆ.

ಯುವಕರು ಹಾಗೂ ಉನ್ನತ ಶಿಕ್ಷಣ ಪಡೆದ ನಿರುದ್ಯೋಗಿಗಳ ನೆರವಿಗಾಗಿ ರಾಜ್ಯ ಸರ್ಕಾರ ಯುವ ನಿಧಿ ಯೋಜನೆ ಮೂಲಕ ಸಹಾಯ ಧನ ನೀಡುತ್ತಿದೆ. ಜೊತೆಗೆ ಉದ್ಯಮಗಳು ಹಾಗೂ ಕೈಗಾರಿಕಾ ಕ್ಷೇತ್ರದಲ್ಲಿ ಉದ್ಯೋಗ ಗಿಟ್ಟಿಸಲು ಅಗತ್ಯವಾದ ಕೌಶಲ ತರಬೇತಿ ನೀಡಲು ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಗಳಿಗೆ ನಿರ್ದೇಶನ ನೀಡಿದೆ. ಆದರೆ, ಆರಂಭದಲ್ಲಿ ತರಬೇತಿ ಪಡೆಯಲು ಮುಗಿಬಿದ್ದಿದ್ದ ಯುವ ನಿಧಿ ಫಲಾನುಭವಿಗಳು, ಇದೀಗ ತರಬೇತಿಗೆ ಹಾಜರಾಗಲು ಆಸಕ್ತಿ ತೋರದ ಸ್ಥಿತಿ ನಿರ್ಮಾಣವಾಗಿದೆ.

ಮೈಸೂರಿನ ಕರ್ನಾಟಕ ಜರ್ಮನ್ ತಾಂತ್ರಿಕ ತರಬೇತಿ ಸಂಸ್ಥೆ ಸೇರಿದಂತೆ ರಾಜ್ಯದ 7 ಕೇಂದ್ರಗಳಲ್ಲಿ ಈ ಕೌಶಲ ತರಬೇತಿ ನೀಡಲು ಸರ್ಕಾರ ಮುಂದಾಗಿದ್ದು, ಇಲ್ಲಿ ಇಂಜಿನಿಯರಿಂಗ್, ಡಿಪ್ಲೊಮಾ ಪದವೀಧರರಿಗೆ ತರಬೇತಿ ನೀಡಲಾಗುತ್ತಿದೆ. ಪದವಿ ಮುಗಿಸಿ ಉದ್ಯೋಗದ ನಿರೀಕ್ಷೆಯಲ್ಲಿರುವ ಯುವಜನತೆಗೆ ಮಾಸಾಶನದ ಜೊತೆಗೆ ಅಗತ್ಯ ತರಬೇತಿಯನ್ನು ನೀಡಿ ಉದ್ಯೋಗ ಕೊಡಿಸುವ ಜವಾಬ್ದಾರಿಯನ್ನು ಇಲಾಖೆಗಳಿಗೆ ವಹಿಸಿದೆ. ಫಲಾನುಭವಿಗಳಿಗೆ ಸಹಕಾರಿಯಾಗುವಂತಹ ಹಲವು ಕಾರ್ಯಕ್ರಮಗಳನ್ನೂ ಸರ್ಕಾರ ರೂಪಿಸಿದೆ. ಆದರೆ ನಿರೀಕ್ಷಿತ ಸಾಧನೆ ಸಾಧ್ಯವಾಗಿಲ್ಲ.

ತರಬೇತಿ ನಿರಾಸಕ್ತಿಗೆ ಕಾರಣವೇನು?: ಕರ್ನಾಟಕ ಜರ್ಮನ್ ತಾಂತ್ರಿಕ ತರಬೇತಿ ಸಂಸ್ಥೆಯು, ಡಿಪ್ಲೊಮಾ ಹಾಗೂ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ 8 ಕೋರ್ಸ್‌ಗಳ ತರಬೇತಿ ನೀಡುತ್ತಿದೆ. ಅದರಲ್ಲಿ ಪಿಎಲ್ಸಿ, ಸ್ಕಾಡಾ, ಎಚ್‌ಎಂಎ ತರಬೇತಿ ಒಳಗೊಂಡಿವೆ. ಇದೇ ಮಾದರಿಯಲ್ಲಿ 3 ತಿಂಗಳ ತರಬೇತಿಯನ್ನು ಯುವನಿಧಿ ಫಲಾನುಭವಿಗಳಿಗೆ ನೀಡಲಾಗುತ್ತಿದೆ. ಕಳೆದ ಒಂದು ವರ್ಷದಿಂದ ತರಬೇತಿ ಆರಂಭಿಸಲಾಗಿದ್ದು, ಸಂಸ್ಥೆಯ ಅಧಿಕಾರಿಗಳೇ ಯುವ ನಿಧಿ ಫಲಾನುಭವಿಗಳ ಮಾಹಿತಿ ಪಡೆದು 6 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಕರೆ ಮಾಡಿ ಕೌಶಲ ತರಬೇತಿ ಮಾಹಿತಿ ನೀಡಿ, ತರಬೇತಿಗೆ ಆಹ್ವಾನಿಸಿದ್ದಾರೆ. ಆದರೆ, ಶೇ.90ಕ್ಕೂ ಹೆಚ್ಚಿನ ಫಲಾನುಭವಿಗಳು ಕೌಶಲ ತರಬೇತಿ ಬಗ್ಗೆ ಆಸಕ್ತಿ ತೋರಿಲ್ಲ. ಹೆಚ್ಚಿನದಾಗಿ ಕಂಪ್ಯೂಟರ್ ಸೈನ್ಸ್ ವಿದ್ಯಾರ್ಥಿಗಳು ಈ ತರಬೇತಿಯನ್ನು ನಿರಾಕರಿಸುತ್ತಿದ್ದಾರೆ. ಕೌಶಲ ತರಬೇತಿ ಪಡೆಯುವುದಕ್ಕಾಗಿ 1600 ಅರ್ಜಿಗಳು ಬಂದಿದ್ದು, 100 ಫಲಾನುಭವಿಗಳು ಮಾತ್ರ ಭಾಗವಹಿಸಿದ್ದಾರೆ ಎಂದು ಕರ್ನಾಟಕ ಜರ್ಮನ್ ತಾಂತ್ರಿಕ ತರಬೇತಿ ಸಂಸ್ಥೆ ಮೈಸೂರು ನಿರ್ದೇಶಕ ರಾಜು ಪಾಟೀಲ್ ತಿಳಿಸಿದ್ದಾರೆ


ಸಂಸ್ಥೆಯ ಕೋರ್ಸ್‌ಗಳ ತರಬೇತಿಗೆ ಬದಲಾಗಿ, ಫಲಾನುಭವಿಗಳು ತಮಗೆ ಬೇಕಾದ ಕೋರ್ಸ್‌ಗಳ ತರಬೇತಿಗೆ ಬೇಡಿಕೆ ಇಡುತ್ತಿದ್ದಾರೆ. ಕೆಲವರು ಉನ್ನತ ಶಿಕ್ಷಣದ ಮೊರೆ ಹೋಗಿದ್ದಾರೆ. ಹಲವರು ಯಾವುದೋ ಉದ್ಯೋಗದಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಇನ್ನೊಂದಷ್ಟು ಮಂದಿ ತಮ್ಮಿಷ್ಟದ ಕೋರ್ಸ್‌ಗಳ ತರಬೇತಿಯನ್ನು ಬೇರೆಡೆ ಪಡೆಯುತ್ತಿದ್ದಾರೆ. ಇದುವರೆಗೂ ಪ್ರತಿ ಬ್ಯಾಚ್‌ನಲ್ಲಿ 20 ಫಲಾನುಭವಿಗಳು ಭಾಗವಹಿಸಿದರೆ ಅದೇ ಹೆಚ್ಚು ಎಂದು ಹೇಳಿದ್ದಾರೆ.

ಎಐ ಕೌಶಲ ತರಬೇತಿಗೆ ಬೇಡಿಕೆ

"ಇಂದಿನ ಕೈಗಾರಿಕಾ ಕ್ಷೇತ್ರ ಹಾಗೂ ಉದ್ಯಮಗಳು ಅತ್ಯಾಧುನಿಕ ತಂತ್ರಜ್ಞಾನದ ಮೊರೆ ಹೋಗುತ್ತಿದ್ದು, ಅದಕ್ಕನುಗುಣವಾಗಿ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನದ ಬಳಕೆಯ ಕೌಶಲ ತರಬೇತಿಗೆ ಫಲಾನುಭವಿಗಳು ಬೇಡಿಕೆಯಿಡುತ್ತಿದ್ದಾರೆ. ಈ ಮೂಲಕ ಎಐ ಆಧಾರಿತ ತರಬೇತಿಗಳಿಂದ ಭವಿಷ್ಯದಲ್ಲಿ ಉತ್ತಮವಾದ ಉದ್ಯೋಗ ಪಡೆದುಕೊಳ್ಳಲು ಸಹಕಾರಿಯಾಗಲಿದೆ ಎಂಬುದು ಫಲಾನುಭವಿಗಳ ಆಶಯ. ಇದೀಗ ಸಂಸ್ಥೆಯು ಫಲಾನುಭವಿಗಳ ಬೇಡಿಕೆಯನ್ನು ಸರ್ಕಾರದ ಗಮನಕ್ಕೆ ತಂದು, ಈ ಸಂಬಂಧ ಪ್ರಸ್ತಾವನೆ ಸಲ್ಲಿಸಲಾಗಿದೆ. ಮುಂದಿನ ದಿನಗಳಲ್ಲಿ ಎಐ ಕೌಶಲ ತರಬೇತಿ ಪ್ರಾರಂಭಿಸಲಾಗುವುದು. **–ರಾಜು ಪಾಟೀಲ್, ನಿರ್ದೇಶಕ, ಕರ್ನಾಟಕ ಜರ್ಮನ್ ತಾಂತ್ರಿಕ ತರಬೇತಿ ಸಂಸ್ಥೆ, ಮೈಸೂರು**

ದೇಶ – ವಿದೇಶ

ಮೌಂಟ್ ಅಬುನಲ್ಲಿ ತಾಪಮಾನ ಶೂನ್ಯಕ್ಕಿಂತ ಗಣನೀಯ ಇಳಿಕೆ



ಜೈಪುರ: ರಾಜಸ್ಥಾನದ ಮೌಂಟ್ ಅಬುನಲ್ಲಿ ತೀವ್ರವಾದ ಶೀತ ಅಲೆಗಳು ಬೀಸುತ್ತಿದ್ದು, ತಾಪಮಾನವು ಶೂನ್ಯಕ್ಕಿಂತ ಗಮನಾರ್ಹವಾಗಿ ಕಡಿಮೆಯಾಗುತ್ತಿದೆ. ರಾಜಸ್ಥಾನದಾದ್ಯಂತ ಶೀತ ಅಲೆ ಬೀಸುತ್ತಿದ್ದು, ಎತ್ತರದ ಕಾರಣದಿಂದಾಗಿ ಮೌಂಟ್ ಅಬುವಿನಲ್ಲಿ ಹೆಚ್ಚು ಪರಿಣಾಮ ಬೀರುತ್ತದೆ. ಚಳಿಗಾಲದ ಗರಿಷ್ಠ ಅವಧಿಗೆ ಈ ತೀವ್ರ ಚಳಿ ವಿಶಿಷ್ಟವಾಗಿದೆ ಎಂದು ವರದಿಗಳು ಹೇಳುತ್ತಿವೆ.

ಪ್ರಸಕ್ತ ತಿಂಗಳ ಮಧ್ಯಭಾಗದ ವೇಳೆಗೆ, ಮೌಂಟ್ ಅಬು ಗಿರಿಶಿಖರದಲ್ಲಿ –4.4°ಸೆ. ನಿಂದ –7°ಸೆ.ವರೆಗಿನ ತಾಪಮಾನ ದಾಖಲಿಸಿದೆ. ಇದರಿಂದಾಗಿ ಸಣ್ಣ ಹೊಂಡಗಳು ಮತ್ತು ಮೇಲ್ಮೈಗಳಲ್ಲಿ ಮಂಜುಗಡ್ಡೆ ರೂಪುಗೊಳ್ಳುತ್ತಿದೆ. ತೆರೆದ ಪ್ರದೇಶಗಳನ್ನು ಮಂಜುಗಡ್ಡೆ ಆವರಿಸಿದ್ದು, ಸ್ಥಳೀಯರು ತೀವ್ರ ಚಳಿಗೆ ಪತರುಗುಟ್ಟಿ ಹೋಗಿದ್ದಾರೆ. ಚಳಿಯಿಂದ ಪಾರಾಗಲು ಸ್ಥಳೀಯರು ಬೆಂಕಿ ಮೊರೆ ಹೋಗುತ್ತಿದ್ದಾರೆ. ತೀವ್ರ ಕುಸಿತವು ಸಣ್ಣ ಹೊಂಡಗಳು, ವಾಹನಗಳ ಮೇಲ್ಛಾವಣಿಗಳು ಸೇರಿದಂತೆ ತೆರೆದ ನೀರಿನ ಮೇಲ್ಮೈಗಳಲ್ಲಿ ಮಂಜುಗಡ್ಡೆಯ ತೆಳುವಾದ ಪದರಗಳು ರೂಪುಗೊಳ್ಳಲು ಕಾರಣವಾಗಿದೆ. ತೀವ್ರ ಚಳಿಯ ಹೊರತಾಗಿಯೂ, ಅಪರೂಪದ ನೀರು ಘನೀಕರಿಸುವ ಪರಿಸ್ಥಿತಿಗಳನ್ನು ಅನುಭವಿಸಲು ಪ್ರವಾಸಿಗರು ಭೇಟಿ ನೀಡುತ್ತಿದ್ದಾರೆ.

ಭಾರತೀಯ ಮೂಲದ ವ್ಯಕ್ತಿಯಿಂದ ನಾಲ್ವರ ಹತ್ಯೆ



ವಾಷಿಂಗ್ಟನ್: ಅಮೆರಿಕಾದ ಜಾರ್ಜಿಯಾ ರಾಜ್ಯದಲ್ಲಿನ ಕೌಟುಂಬಿಕ ಕಲಹದಿಂದ ಭಾರತೀಯ ಮೂಲದ ವ್ಯಕ್ತಿಯೊರ್ವ 4 ಜನರನ್ನು ಗುಂಡಿಟ್ಟು ಕೊಂದಿರುವ ಘಟನೆ ನಡೆದಿದೆ. ಅಮೆರಿಕಾದ ಲಾರೆನ್ಸ್‌ವಿಲ್ಲೆ ನಗರದಲ್ಲಿ ಶುಕ್ರವಾರ ತಡರಾತ್ರಿ ಸುಮಾರು 2.30ರ ಸುಮಾರಿಗೆ ಈ ಘಟನೆ ನಡೆದಿದ್ದು, 51 ವರ್ಷದ ವಿಜಯ್‌ಕುಮಾರ್ ಎಂಬ ಭಾರತದ ಮೂಲದ ವ್ಯಕ್ತಿಯು ಪತ್ನಿ ಮೀಮು ಡೋಗ್ರಾ (43), ಲಾರೆನ್ಸ್‌ವಿಲ್ಲೆ ನಗರದ ಗೌರವ್ ಕುಮಾರ್ (33), ನಿಧಿ ಚಾಂಡರ್(37) ಮತ್ತು ಹರೀಶ್ ಚಾಂಡರ್ (38) ಅವರನ್ನು ಗುಂಡಿಕ್ಕಿ ಹತ್ಯೆ ಮಾಡಿದ್ದಾನೆ. ಘಟನೆ ವೇಳೆ ಸ್ಥಳದಲ್ಲಿದ್ದ ಮಕ್ಕಳು ಹೆದರಿ ಕ್ಲೋಸೆಟ್‌ನಲ್ಲಿ (ಬಟ್ಟೆಗಳನ್ನು ಇಡುವ ಕೊಠಡಿ) ಬಚ್ಚಿಟ್ಟುಕೊಂಡು ಪಾರಾಗಿದ್ದಾರೆ.

ವಿಜಯ್‌ಕುಮಾರ್ ಮತ್ತು ಪತ್ನಿ ಮೀಮು ಡೋಗ್ರಾ ನಡುವೆ ಯಾವುದೋ ವಿಚಾರಕ್ಕೆ ಮನೆಯಲ್ಲಿ ಜಗಳ ನಡೆದಿದ್ದು, ಇದು ವಿಕೋಪಕ್ಕೆ ತಿರುಗಿದೆ. ಇದರಿಂದ ಪತ್ನಿ, ತನ್ನ ಮಗುವಿನೊಂದಿಗೆ ಬ್ರೂಕ್ ಐವಿ ಕೋರ್ಟ್‌ನಲ್ಲಿರುವ ಮನೆಗೆ ತೆರಳಿದ್ದಾರೆ. ಅಲ್ಲಿ ಇವರೊಂದಿಗೆ ಗೌರವ್ ಕುಮಾರ್, ನಿಧಿ ಚಾಂಡರ್ ಮತ್ತು ಹರೀಶ್ ಚಾಂಡರ್ ಹಾಗೂ ಮೂವರು ಮಕ್ಕಳು ವಾಸವಾಗಿದ್ದಾರೆ. ವಿಜಯ್ ಕುಮಾರ್ ತನ್ನ ಬಳಿಯಿದ್ದ ಗನ್‌ನಿಂದ ಪತ್ನಿ ಸೇರಿ ನಾಲ್ವರ ಮೇಲೆ ಗುಂಡು ಹಾರಿಸಿದ್ದಾನೆ. ಮಕ್ಕಳು ಸಮಯೋಚಿತ ಪಾರಾಗಿದ್ದು, ಆರೋಪಿಯನ್ನು ಬಂಧಿಸಲಾಗಿದೆ.

ಮದ್ಯಪಾನ ಆರೋಪ; ಮಹಡಿ ಮೇಲಿಂದ ಜಿಗಿದು ವಿದ್ಯಾರ್ಥಿ ಸಾವು



ಗ್ರೇಟರ್ ನೋಯ್ಡಾ: ಇಲ್ಲಿನ ನಾಲೆಡ್ಜ್ ಪಾರ್ಕ್–3 ಸಿ ವ್ಯಾಪ್ತಿಯಲ್ಲಿರುವ ಖಾಸಗಿ ಹಾಸ್ಟೆಲ್‌ನಲ್ಲಿ ಬಿ–ಟೆಕ್ 2ನೇ ವರ್ಷದ ವಿದ್ಯಾರ್ಥಿ ಆತ್ಮಹತ್ಯೆ ಮಾಡಿ ಕೊಂಡಿದ್ದಾನೆ. ಮೃತನನ್ನು ಝಾನ್ಸಿ ಮೂಲದ ಉದಿತ್ ಸೋನಿ ಎಂದು ಗುರುತಿಸಲಾಗಿದ್ದು, ಈ ಘಟನೆಯು ಹಾಸ್ಟೆಲ್ ಮ್ಯಾನೇಜ್‌ಮೆಂಟ್ ಮತ್ತು ವಿದ್ಯಾರ್ಥಿಗಳ ನಡುವಿನ ದೊಡ್ಡ ಸಂಘರ್ಷಕ್ಕೆ ಕಾರಣವಾಗಿದೆ. ಶುಕ್ರವಾರ ರಾತ್ರಿ ಉದಿತ್ ತನ್ನ ಸ್ನೇಹಿತರೊಂದಿಗೆ ಹಾಸ್ಟೆಲ್‌ಗೆ ಮರಳಿದ್ದನು. ಈ ವೇಳೆ ಆತ ಮದ್ಯ ಸೇವಿಸಿದ್ದಾನೆ ಎಂದು ಆರೋಪಿಸಿದ ಹಾಸ್ಟೆಲ್ ಆಡಳಿತ ಮಂಡಳಿಯು ಆತನನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡಿತ್ತು ಅಲ್ಲದೆ ಉದಿತ್‌ನ ವೀಡಿಯೊ ಚಿತ್ರೀಕರಿಸಿ ಆತನ ತಂದೆ ವಿಜಯ್ ಸೋನಿಗೆ ಕಳುಹಿಸಿದ್ದರು. ವೀಡಿಯೋ ನೋಡಿದ ತಂದೆ ಮಗನಿಗೆ ಫೋನ್ ಮಾಡಿ ಬೈದಿದ್ದಲ್ಲದೆ, ಕಾಲೇಜಿನಿಂದ ನಿನ್ನ ಹೆಸರು ತೆಗೆಸಿ ಮನೆಗೆ ವಾಪಸ್ ಕರೆಸಿಕೊಳ್ಳುವುದಾಗಿ ಎಚ್ಚರಿಕೆ ನೀಡಿದ್ದರು. ಇದರಿಂದ ತೀವ್ರವಾಗಿ ನೊಂದ ಉದಿತ್, ಹಾಸ್ಟೆಲ್‌ನ 4ನೇ ಮಹಡಿಯಿಂದ ಜಿಗಿದು ಪ್ರಾಣ ಬಿಟ್ಟಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ರಾತ್ರಿ 9 ಗಂಟೆಗೆ ಹಾಸ್ಟೆಲ್‌ಗೆ ಬಂದರೂ ವಿನಾಕಾರಣ ಮದ್ಯ ಸೇವನೆಯ ಆರೋಪ ಹೊರಿಸಿ ಉದಿತ್‌ಗೆ 10,000 ರೂ. ದಂಡ ವಿಧಿಸಲಾಯಿತು ಎಂದು ಸ್ನೇಹಿತರು ಆರೋಪಿಸಿದ್ದು, ಘಟನೆಯಿಂದ ಕೆರಳಿದ ನೂರಾರು ವಿದ್ಯಾರ್ಥಿಗಳು ಹಾಸ್ಟೆಲ್ ಆಸ್ತಿಪಾಸ್ತಿ ಮತ್ತು ಬಸ್‌ಗಳನ್ನು ಧ್ವಂಸಗೊಳಿಸಿದ್ದಾರೆ.


ಮದುವೆ ಸಮಾರಂಭದಲ್ಲೂ ಆತ್ಮಾಹುತಿ ಬಾಂಬರ್ ಸ್ಫೋಟ: 7 ಸಾವು



ಪಾಕಿಸ್ತಾನ: ಇಲ್ಲಿನ ವಾಯುವ್ಯ ಖೈಬರ್ ಪಖ್ತುಂಖ್ವಾದಲ್ಲಿ ಶಾಂತಿ ಸಮಿತಿ ಸದಸ್ಯರೊಬ್ಬರ ನಿವಾಸದಲ್ಲಿ ಶುಕ್ರವಾರ ನಡೆದ ಆತ್ಮಾಹುತಿ ಸ್ಫೋಟದಲ್ಲಿ ಕನಿಷ್ಠ 7 ಮಂದಿ ಸಾವನ್ನಪ್ಪಿ, 10 ಜನ ಗಾಯಗೊಂಡಿದ್ದಾರೆ.

ಖುರೇಷಿ ಮೋರ್ ಬಳಿಯ ಶಾಂತಿ ಸಮಿತಿ ಮುಖ್ಯಸ್ಥ ನೂರ್ ಆಲಂ ಮೆಹ್ಸೂದ್ ಅವರ ನಿವಾಸದಲ್ಲಿ ವಿವಾಹ ಸಮಾರಂಭದ ವೇಳೆ ಈ ದಾಳಿ ನಡೆದಿದೆ, ಇದನ್ನು ಡೇರಾ ಇಸ್ಮಾಯಿಲ್ ಖಾನ್ ಜಿಲ್ಲೆಯ ಜಿಲ್ಲಾ ಪೊಲೀಸ್ ಅಧಿಕಾರಿ ಸಜ್ಜಾದ್ ಅಹ್ಮದ್ ಸಾಹಿಬ್ಜಾದಾ ಆತ್ಮಾಹುತಿ ದಾಳಿ ಎಂದು ದೃಢಪಡಿಸಿದ್ದಾರೆ. ಖೈಬರ್ ಪಖ್ತುಂಖ್ವಾ ಗವರ್ನರ್ ಘಟನೆ ಬಗ್ಗೆ ವರದಿ ಕೇಳಿದ್ದು, ಡೇರಾ ಸ್ಫೋಟದಲ್ಲಿ ಗಾಯಗೊಂಡವರಿಗೆ ಎಲ್ಲಾ ವೈದ್ಯಕೀಯ ನೆರವು ನೀಡುವಂತೆ ಸೂಚಿಸಿದ್ದಾರೆ. ಅತಿಥಿಗಳು ನೃತ್ಯ ಮಾಡುತ್ತಿದ್ದ ವೇಳೆ ಈ ಘಟನೆ ನಡೆದಿದ್ದು, ಸ್ಫೋಟದ ತೀವ್ರತೆಯಿಂದ ಕೋಣೆಯ ಮೇಲ್ಛಾವಣಿ ಕುಸಿದುಬಿದ್ದಿದೆ. ಅವಶೇಷಗಳಡಿ ಸಿಲುಕಿರುವವರನ್ನು ರಕ್ಷಿಸಲಾಗುತ್ತಿದ್ದು, ಸಾವು–ನೋವಿನ ಸಂಖ್ಯೆ ಹೆಚ್ಚಾಗುವ ಸಾಧ್ಯತೆ ಇದೆ. ಕ್ಯಾಮರಾದಲ್ಲಿ ಸೆರೆಯಾಗಿರುವ ಘಟನೆಯ ದೃಶ್ಯಗಳು ಸ್ಥಳೀಯ ಮಾಧ್ಯಮಗಳಲ್ಲಿ ಪ್ರಸಾರವಾಗಿವೆ. ಈ ಸ್ಫೋಟವು ಪ್ರದೇಶದಲ್ಲಿ ಶಾಂತಿ ಸಮಿತಿ ಸದಸ್ಯರನ್ನು ಗುರಿಯಾಗಿಸಿಕೊಂಡ ಸರಣಿ ದಾಳಿಗಳ ಮುಂದುವರಿದ ಭಾಗವೆಂದು ಭಾವಿಸಲಾಗಿದೆ

ಶುಭಾಂಶು ಶುಕ್ಲಾ ಸೇರಿ ನಾಲ್ವರಿಗೆ ಯುಪಿ ಗೌರವ ಸಮ್ಮಾನ್




ಲಖನೌ: ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ (ಐಎಸ್‌ಎಸ್)ಕ್ಕೆ ಐತಿಹಾಸಿಕ ಭೇಟಿ ನೀಡಿ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ರಾಜ್ಯಕ್ಕೆ ಕೀರ್ತಿ ತಂದ ವಿಂಗ್ ಕಮಾಂಡರ್ ಶುಭಾಂಶು ಶುಕ್ಲಾ ಸೇರಿದಂತೆ ಐವರು ಗಣ್ಯರನ್ನು ಉತ್ತರ ಪ್ರದೇಶ ಸರ್ಕಾರ ಸನ್ಮಾನಿಸಲಿದೆ. ಈ ವರ್ಷ ಬಾಹ್ಯಾಕಾಶ ವಿಜ್ಞಾನ, ಶಿಕ್ಷಣ, ಸಾಹಿತ್ಯ, ಮಹಿಳಾ ಸಬಲೀಕರಣ ಮತ್ತು ಕೃಷಿಯಂತಹ ವಿವಿಧ ಕ್ಷೇತ್ರಗಳಲ್ಲಿ ಗಮನಾರ್ಹ ಕೊಡುಗೆ ನೀಡಿದ ಐವರನ್ನು ಉತ್ತರ ಪ್ರದೇಶ ಗೌರವ್ ಸಮ್ಮಾನ್ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದ್ದು, ಇಂದಿನಿಂದ ಆರಂಭವಾಗುವ ಮೂರು ದಿನಗಳ ಉತ್ತರ ಪ್ರದೇಶ ರಾಜ್ಯೋತ್ಸವ 2026ರ ಸಂದರ್ಭದಲ್ಲಿ ಐವರು ಸಾಧಕರನ್ನು ಗೌರವಿಸಲಾಗುತ್ತಿದೆ. ಲಖನೌದಲ್ಲಿ ಹೊಸದಾಗಿ ನಿರ್ಮಿಸಲಾದ ರಾಷ್ಟ್ರ ಪ್ರೇರಣಾ ಸ್ಥಳದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದ್ದು, ಕೇಂದ್ರ ಗೃಹ ಸಚಿವ ಅಮಿತ್ ಶಾ ಉದ್ಘಾಟನೆ ನೆರವೇರಿಸಲಿದ್ದಾರೆ.

ಈ ಗೌರವಕ್ಕೆ ಪಾತ್ರವಾಗಿರುವ ಲಖನೌದ ಸ್ಥಳೀಯ ಯುವಕ ವಿಂಗ್ ಕಮಾಂಡರ್ ಶುಭಾಂಶು ಶುಕ್ಲಾ, ಕಳೆದ ವರ್ಷ ಜೂನ್ 26ರಂದು ನಾಸಾದ ಕೆನಡಿ ಬಾಹ್ಯಾಕಾಶ ಕೇಂದ್ರದಿಂದ ಸ್ಪೇಸ್‌ಎಕ್ಸ್‌ನ ಡ್ರ್ಯಾಗನ್ ಮೂಲಕ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ(ಐಎಸ್‌ಎಸ್)ಕ್ಕೆ ಹೋಗಿ ಬರುವ ಮೂಲಕ ಇತಿಹಾಸ ಸೃಷ್ಟಿಸಿದ್ದಾರೆ.

ಪುಷ್ಪ ಪ್ರೇಮಿಗಳನ್ನು ಸೂಜಿಗಲ್ಲಿನಂತೆ ಆಕರ್ಷಿಸುವ ಫಲಪುಷ್ಪ ಪ್ರದರ್ಶನಕ್ಕೆ ನಾಂದಿ

ಮಡಿಕೇರಿ, ಜ.24– ಮಂಜಿನ ನಗರಿಯ ಪ್ರಸಿದ್ಧ ಪ್ರವಾಸಿ ತಾಣ ರಾಜಾಸೀಟಿನಲ್ಲಿ ವರ್ಣಮಯ ಪುಷ್ಪಗಳ ದೃಶ್ಯಕಾವ್ಯ ಫಲಪುಷ್ಪ ಪ್ರದರ್ಶನದ ಮೂಲಕ ಅನಾವರಣಗೊಂಡಿದ್ದು, ಪುಷ್ಪ ಪ್ರೇಮಿಗಳನ್ನು ತನ್ನೆಡೆಗೆ ಸೂಜಿಗಲ್ಲಿನಂತೆ ಆಕರ್ಷಿಸುತ್ತಿದೆ. ಗಣರಾಜ್ಯೋತ್ಸವದ ಹಿನ್ನೆಲೆಯಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ತೋಟಗಾರಿಕಾ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಇಂದಿನಿಂದ ಜ.26ರವರೆಗೆ ನಡೆಯಲಿರುವ ಫಲಪುಷ್ಪ ಪ್ರದರ್ಶನವನ್ನು ಶನಿವಾರ ಸಂಜೆ ಶಾಸಕ ಡಾ.ಮಂತರ್ ಗೌಡ ಉದ್ಘಾಟಿಸಿ ಸೊಬಗಿನ ವೀಕ್ಷಣೆಗೆ ಅನುವು ಮಾಡಿಕೊಟ್ಟರು.

ನಗರಸಭಾ ಅಧ್ಯಕ್ಷೆ ಪಿ.ಕಲಾವತಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಎನ್. ಬಿಂದು ಮಣಿ ಸೇರಿದಂತೆ ಹಲವು ಗಣ್ಯರು ಪಾಲ್ಗೊಂಡಿದ್ದರು.





ಫಲಪುಷ್ಪ ಪ್ರದರ್ಶನದಲ್ಲಿ ನೋಡುಗರನ್ನು ಆಕರ್ಷಿಸುತ್ತಿರುವ ಕನ್ನಡ ಭಾಷೆಯ ಸುಂದರವಾದ ಅಕ್ಷರಗಳು, ಕಲ್ಲಂಗಡಿ ಹಣ್ಣಿನಲ್ಲಿ ಮಹಾನ್ ಸಾಧಕರು

ಹಲ ಪ್ರಭೇದದ ಸಹಸ್ರಾರು ಪುಷ್ಪ ಶೋಡಷಿಯರ ಸಂಗಮವಾಗಿ, ವರ್ಣ ವೈವಿಧ್ಯತೆಗಳಿಂದ ರಾಜಾಸೀಟು ಕಂಗೊಳಿಸುತ್ತಿದೆ. ವಾರಾಂತ್ಯದ ಹಿನ್ನೆಲೆಯಲ್ಲಿ ಸಹ ಸ್ರಾರು ಸಂಖ್ಯೆಯ ಪ್ರವಾಸಿಗರು ರಾಜಾ ಸೀಟಿಗೆ ಭೇಟಿ ನೀಡುತ್ತಿದ್ದಾರೆ. ಸ್ಥಳೀ ಯರು ಕೂಡ ಪ್ರಕೃತಿ ಸೌಂದರ್ಯದೊಂದಿಗೆ ವರ್ಣಮಯ ಪುಷ್ಪಗಳ ಸೌಂದರ್ಯವನ್ನು ಮನದುಂಬಿ ಕೊಳ್ಳುತ್ತಿದ್ದಾರೆ.

ಪುಷ್ಪಾಲಂಕಾರದ ಶ್ರೀ ಭಗಂಡೇಶ್ವರ: ಫಲಪುಷ್ಪ ಪ್ರದರ್ಶನದಲ್ಲಿ ವರ್ಷಂಪ್ರತಿ ಸಹಸ್ರಾರು ಪುಷ್ಪಗಳಿಂದ ಜಿಲ್ಲೆಯ ಪ್ರವಾಸಿ ತಾಣ, ಶ್ರದ್ಧಾ ಕೇಂದ್ರಗಳನ್ನು ರಚಿಸುವುದು ಕೆಲವು ವರ್ಷಗಳಿಂದ ನಡೆದುಕೊಂಡು ಬಂದಿದೆ. ಕಳೆದ ಸಾಲಿನಲ್ಲಿ ಶ್ರೀ ಓಂಕಾರೇಶ್ವರ ದೇಗುಲ ಪುಷ್ಪಗಳಿಂದ ಅತ್ಯಾಕರ್ಷಕವಾಗಿ ಮೂಡಿ ಬಂದಿದ್ದರೆ, ಈ ಬಾರಿ ಕಾವೇರಿಯ ತ್ರಿವೇಣಿ ಸಂಗಮ ಕ್ಷೇತ್ರವಾದ ಭಾಗಮಂಡಲದ 'ಶ್ರೀ ಭಗಂಡೇಶ್ವರ ದೇವಸ್ಥಾನ' ಪುಷ್ಪಗಳಿಂದ ಮೈದಳೆದು ನೋಡುಗರನ್ನು ಮೂಕ ವಿಸ್ಮಯಗೊಳಿಸುತ್ತಿದೆ. ಶ್ರೀ ಭಗಂಡೇಶ್ವರ ದೇಗುಲದ ಕಲಾಕೃತಿಯನ್ನು ವಿವಿಧ ವರ್ಣಗಳ ಗುಲಾಬಿ, ಸೇವಂತಿಗೆ, ಆಸ್ಟರ್ ತಳಿಯ ಹೂಗಳಿಂದ ಅತ್ಯಾಕರ್ಷಕವಾಗಿ ಸಜ್ಜುಗೊಳಿಸಲಾಗಿದೆ.

ಕಲ್ಲಂಗಡಿಯಲ್ಲಿ ಕಲಾಕೃತಿ: ಚಿತ್ರ ರಚನೆಕಾರ ಮತ್ತು ಹಣ್ಣಿನ ಕೆತ್ತನೆಗಾರ ಮೂಡುಬಿದಿರೆಯ ಭತರ್ ಅವರ ಕೈ ಚಳಕದಲ್ಲಿ ಕಲ್ಲಂಗಡಿ ಹಣ್ಣಿನಲ್ಲಿ ಕೆತ್ತಲಾಗಿರುವ ಕಲಾಕೃತಿಗಳು ನೋಡುಗರನ್ನು ತನ್ನೆಡೆಗೆ ಸೆಳೆಯುತ್ತಿದೆ. ಕಲ್ಲಂಗಡಿ ಹಣ್ಣಿನಲ್ಲಿ ಮಹಾನ್ ಸಾಧಕರು, ಸ್ಯಾಂಡಲ್‌ವುಡ್ ನಟರು, ಸ್ವಾತಂತ್ರ್ಯ ಹೋರಾಟಗಾರರು, ಜ್ಞಾನಪೀಠ ಪ್ರಶಸ್ತಿ ವಿಜೇತರ ಕಲಾಕೃತಿಗಳು ಪ್ರದರ್ಶನಕ್ಕೆ ಮೆರುಗು ತಂದಿವೆ. ಮೊಸಳೆ, ನವಿಲು ಮತ್ತಿತರ ಕಲಾಕೃತಿಗಳು ವಿವಿಧ ಬಗೆಯ ತರಕಾರಿಗಳಲ್ಲಿ ಮೂಡಿ ಬಂದಿವೆ.

ಕನ್ನಡ ಅಕ್ಷರ ಮಾಲೆ ಸೊಬಗು: ಪುಷ್ಪ ಪ್ರದರ್ಶನದಲ್ಲಿ ಕನ್ನಡ ಭಾಷೆಯ ಸುಂದರವಾದ ಅಕ್ಷರಗಳನ್ನು ಹೂವಿನಿಂದ ರಚಿಸಲಾಗಿದ್ದು, ಪುಷ್ಪಗಳಿಂದ ರಚಿತಗೊಂಡಿರುವ ಸ್ವರಾಕ್ಷರಗಳು ಕನ್ನಡಾಭಿಮಾನವನ್ನು ಪ್ರೇರೇಪಿಸುತ್ತಿದೆ. ಸಂಗೀತ ಕಲಾಕೃತಿಗಳಾದ ತಬಲಾ, ಮೃದಂಗ, ಪಿಯಾನೊ, ಗಿಟಾರ್‌ಗಳು ವಿವಿಧ ಬಣ್ಣಗಳ ಗುಲಾಬಿ, ಸೇವಂತಿಗೆ, ಆಸ್ಟರ್ ಹೂವುಗಳಿಂದ ರೂಪು ತಳೆದು ನೋಡುಗರನ್ನು ಮನಸೂರೆಗೊಳಿಸುತ್ತಿವೆ. ಗಣರಾಜ್ಯೋತ್ಸವದ ಅಂಗವಾಗಿ ಅಮರ್ ಜವಾನ್ ಕಲಾಕೃತಿ, ಹಾರುವ ಹಕ್ಕಿ, ಮೀನಿನ ಕಲಾಕೃತಿ, ಮಕ್ಕಳನ್ನು ರಂಜಿಸುವ ಸ್ಪೈಡರ್ ಮ್ಯಾನ್, ಮಿಕ್ಕಿ ಮೌಸ್, ಡೋರೇಮಾನ್‌ನ ಪುಷ್ಪ ಕಲಾಕೃತಿಗಳು ಪುಷ್ಪ ಪ್ರದರ್ಶನದ ಆಕರ್ಷಣೆಯನ್ನು ಇಮ್ಮಡಿಗೊಳಿಸಿದ್ದು, ಮಕ್ಕಳನ್ನು ರಂಜಿಸುತ್ತಿವೆ. ಫಲಪುಷ್ಪ ಪ್ರದರ್ಶನದ ಪ್ರಯುಕ್ತ ರಾಜಾಸೀಟಿನ ಪಕ್ಕದ ಗಾಂಧಿ ಮೈದಾನದಲ್ಲಿ ವಿವಿಧ ಇಲಾಖೆಗಳು, ಸಂಸ್ಥೆಗಳ ಮಳಿಗೆಗಳಲ್ಲಿ ನರ್ಸರಿ ಗಿಡಗಳು, ಹೂ ಗಿಡಗಳ ಮಾರಾಟ, ಕೃಷಿ ಪರಿಕರಗಳ ಪ್ರದರ್ಶನದ ಪ್ರಯೋಜನವನ್ನು ಸಾರ್ವಜನಿಕರು ಪಡೆಯುತ್ತಿದ್ದಾರೆ.

ಕೊಡಗು ಗೌಡ ಸಮಾಜ ಸಂಘದ ಅಧ್ಯಕ್ಷರಾಗಿ ದಂಬೆಕೋಡಿ ಎಸ್.ಆನಂದ

ಸಂಘಕ್ಕೆ 6 ಎಕರೆ ಜಾಗ ಮಂಜೂರು

ಮಡಿಕೇರಿ, ಜ.24–ಅರೆಭಾಷಿಕ ಗೌಡ ಜನಾಂಗದ ಶ್ರೇಯೋಭಿವೃದ್ಧಿಗೆ 4 ದಶಕಗಳ ಹಿಂದೆ ನಗರದಲ್ಲಿ ಸ್ಥಾಪಿತವಾದ ಕೊಡಗು ಗೌಡ ಸಮಾಜದ ನೂತನ ಆಡಳಿತ ಮಂಡಳಿ ಅಧ್ಯಕ್ಷರಾಗಿ ದಂಬೆಕೋಡಿ ಎಸ್.ಆನಂದ ಆಯ್ಕೆಯಾಗಿದ್ದಾರೆ.

ನೂತನ ಅಧ್ಯಕ್ಷ ದಂಬೆಕೋಡಿ ಎಸ್. ಆನಂದ ನೂತನ ಆಡಳಿತ ಮಂಡಳಿಯನ್ನು ಅವಿರೋಧವಾಗಿ ಆಯ್ಕೆಮಾಡಿರುವುದಾಗಿ ಪತ್ರಿಕಾಗೋಷ್ಠಿ ಯಲ್ಲಿ ತಿಳಿಸಿದರು. ಉಪಾಧ್ಯಕ್ಷರಾಗಿ ಸೂರ್ತಲೆ ಆರ್.ಸೋಮಣ್ಣ, ಕಾರ್ಯ ದರ್ಶಿಯಾಗಿ ಪೂಳಕಂಡ ಎಂ.ಸಂದೀಪ್, ಖಜಾಂಚಿಯಾಗಿ ಕಾಳೇರಮ್ಮನ ನಂದ ಕುಮಾರ್, ನಿರ್ದೇಶಕರುಗಳಾಗಿ ಅಮೆ ಸೀತಾರಾಮ್, ಪೊನ್ನಚನ ಮಧುಸೂದನ್, ಕೊಲ್ಯದ ಗಿರೀಶ್, ಹುದೇರಿ ರಾಜೇಂದ್ರ, ಪೈಕೆರ ಮನೋಹರ, ಪೇರಿಯನ ಘನ ಶ್ಯಾಮ್, ತೋಟಂಬೈಲು ಅನಂತ ಕುಮಾರ್, ಮಂದ್ರಿರ ತೇಜಸ್, ಕೊಂಬನ ಪ್ರವೀಣ್, ಚೊಕ್ಕಾಡಿ ಪ್ರೇಮಾ ರಾಘವಯ್ಯ, ಮೂಲೆಮಜಲು ಅಮಿತ ಆಯ್ಕೆಯಾಗಿರುವುದಾಗಿ ಮಾಹಿತಿ ನೀಡಿದರು. ಸಮಾಜದ ಹಿಂದಿನ ಅಧ್ಯಕ್ಷ ಪೇರಿಯನ ಜಯಾನಂದ 10 ವರ್ಷಗಳ ಕಾಲ ಅಧ್ಯಕ್ಷರಾಗಿ ಉತ್ತಮ ಆಡಳಿತವನ್ನು ನೀಡಿದ್ದಾರೆ. ಇವರ ಅವಧಿಯಲ್ಲಿ ಸಮಾಜದ ಎಲ್ಲರಿಗೂ ಅನುಕೂಲವಾಗುವಂಥ ಸುಸಜ್ಜಿತ ಕಲ್ಯಾಣ ಮಂಟಪ ನಿರ್ಮಿಸಿರುವ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

6 ಎಕರೆ ಜಾಗ ಮಂಜೂರು: ಸಮಾಜದ ಉಪಾಧ್ಯಕ್ಷ ಸೂರ್ತಲೆ ಆರ್.ಸೋಮಣ್ಣ ಮಾತನಾಡಿ, ಸಮಾಜದ ಕಾರ್ಯ ಚಟುವಟಿಕೆಗಳಿಗೆ ಜಾಗದ ಕೊರತೆಯನ್ನು ಮನಗಂಡು ಬಿಜೆಪಿ ಸರ್ಕಾರದ ಅವಧಿಯಲ್ಲಿ ಮದೆ ಗ್ರಾಮದಲ್ಲಿ 8 ಎಕರೆ ಜಾಗವನ್ನು ಮಂಜೂರು ಮಾಡುವಂತೆ ಪ್ರಸ್ತಾವನೆಯನ್ನು ಸಲ್ಲಿಸಿತ್ತಾದರೂ, ಸರ್ಕಾರ ಬದಲಾದ ಕಾರಣ ಮಂಜೂರಾತಿ ಸಾಧ್ಯವಾಗಿರಲಿಲ್ಲ. ಈಗ ಶಾಸಕ ಎ.ಎಸ್.ಪೊನ್ನಣ್ಣ ಅವರ ಸಹಕಾರದಿಂದ ಸಮಾಜಕ್ಕೆ ಸೂಚಿತ ಪ್ರದೇಶದಲ್ಲಿ 6 ಏಕರೆ ಜಾಗ ಮಂಜೂರಾಗಿದೆ ಈ ಜಾಗದಲ್ಲಿ ಕ್ರೀಡಾ ತರಬೇತಿ ಕೇಂದ್ರ, ಕೌಶಲ್ಯಾಭಿವೃದ್ಧಿ ಕೇಂದ್ರಗಳನ್ನು ಆರಂಭಿ ಸುವ ಚಿಂತನೆ ಸಮಾಜಕ್ಕೆ ಇದೆ ಎಂದರು.

ಸಮಾಜದ ನೂತನ ಕಾರ್ಯದರ್ಶಿ ಪೂಳಕಂಡ ಎಂ. ಸಂದೀಪ್, ನಿರ್ದೇಶಕರಾದ ಕೊಲ್ಯದ ಗಿರೀಶ್, ಹುದೇರಿ ರಾಜೇಂದ್ರ ಉಪಸ್ಥಿತರಿದ್ದರು.

ಖಾಸಗಿ ಶಾಲೆಗೆ ಸರಿಸಾಟಿಯಾಗಿ ಸರ್ಕಾರಿ ಶಾಲಾ ವಿದ್ಯಾರ್ಥಿಗಳ ಸಾಧನೆಗೆ ಮೆಚ್ಚುಗೆ

ವಿರಾಜಪೇಟೆ, ಜ.24–ಶತಮಾನದತ್ತ ಸಾಗುತ್ತಿರುವ ಹೆಗ್ಗಳ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದು ಖಾಸಗಿ ಶಾಲೆಗಿಂತ ಸಾಧನೆಯಲ್ಲಿ ಏನೂ ಕಡಿಮೆಯಿಲ್ಲ ಎಂಬುದನ್ನು ಸಾಬೀತು ಪಡಿಸಿದ್ದಾರೆ ಎಂದು ಜಿ. ಪಂ ಮಾಜಿ ಸದಸ್ಯ ಅಚ್ಚಪಂಡ ಮಹೇಶ್ ಗಣಪತಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.



ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದಿರುವ ಹಳೆ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಪಟ್ಟಣಕ್ಕೆ ಸಮೀಪದ ಬೋಟೋಳಿ ಗ್ರಾಪಂ ವ್ಯಾಪ್ತಿಯ ಹೆಗ್ಗಳ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ವಾರ್ಷಿಕೋತ್ಸವ ಸಮಾರಂಭದಲ್ಲಿ ಮಾತನಾಡಿ ಹಿಂದಿನ ದಿನದಲ್ಲಿ ಶಾಲೆಗೆ ಬರಲು ಯಾವುದೇ ಸೌಲಭ್ಯಗಳಿರಲಿಲ್ಲ ಶಾಲಾ ಬ್ಯಾಗ್ ಹೊತ್ತು 5 ಕಿ.ಮಿ. ನಡೆದು ಬಂದು ಕಲಿಯಬೇಕಾಗಿತ್ತು ಎಂದು ತಮ್ಮ ಶಾಲಾ ದಿನಗಳನ್ನು ಮೆಲುಕು ಹಾಕಿ, ಇಂದು ಶಿಕ್ಷಣಕ್ಕಾಗಿ ಎಲ್ಲಾ ಸೌಲಭ್ಯಗಳಿದ್ದು ವಿದ್ಯಾರ್ಥಿಗಳು ಶಿಸ್ತು ಮತ್ತು ಛಲದಿಂದ ಗುರಿ ಮುಟ್ಟುವಂತಾಗಬೇಕು. ಎಂದರು.

ಕ್ರೀಡಾ ಉದ್ಘಾಟನೆಯನ್ನು ಬೇಟೋಳಿ ಗ್ರಾಪಂ ಅಧ್ಯಕ್ಷ ಅಚ್ಚಪಂಡ ಬೋಪಣ್ಣ ನೆರವೇರಿಸಿ, ಗ್ರಾಮೀಣ ಪ್ರದೇಶದಲ್ಲಿ ಎಲೆ ಮರೆ ಕಾಯಿಯಂತಿರುವ ವಿದ್ಯಾರ್ಥಿಗಳು ಗ್ರಾಮ ತಾಲೂಕು ಜಿಲ್ಲೆ ಮತ್ತು ರಾಜ್ಯ ಮಟ್ಟದ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ಪೋಷಕರಿಗೆ ಮತ್ತು ಶಾಲೆಗೂ ಕೀರ್ತಿ ತರುವಂತಾಗಬೇಕು ಎಂದರು.

ಕಾಫಿ ಬೆಳೆಗಾರರು ಮಾಜಿ ಯೋಧರುಗಳಾದ ಕ್ಯಾಪ್ಟನ್ ಬಿ.ಎ.ಭವಾನಿ ಶಂಕರ್ ಮತ್ತು ರಾಮಮೂರ್ತಿ ಮಾತನಾಡಿ ನಾವುಗಳು ಇದೇ ಶಾಲೆಯ ವಿದ್ಯಾರ್ಥಿಗಳಾಗಿದ್ದು, ವಿವಿಧ ಹುದ್ದೆ ಗಳಲ್ಲಿ ಸೇವೆ ಸಲ್ಲಿಸಿ ಈಗ ನಿವೃತ್ತರಾಗಿದ್ದೇವೆ ಎಂದು ಸ್ಮರಿಸಿ ವಿದ್ಯಾರ್ಥಿಗಳಿಗೆ ಶಾಲೆ ಎಂದರೆ ಜ್ಞಾನ ದೇಗುಲ. ಪ್ರತಿ ನಿತ್ಯವು ನಮಸ್ಕರಿಸಬೇಕು ವಿದ್ಯೆ ನೀಡಿದ ಗುರುಗಳಿಗೂ ಮತ್ತು ಹಿರಿಯರಿಗೂ ಗೌರವ ನೀಡುವ ಮೂಲಕ ದೇಶದ ಉತ್ತಮ ಪ್ರಜೆಗಳಾಗುವಂತೆ ಕಿವಿಮಾತು ಹೇಳಿದರು.

ಸಮಾರಂಭದ ಅಧ್ಯಕ್ಷತೆಯನ್ನು ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಕೆ.ಆರ್.ರಾಜೇಶ್ ವಹಿಸಿದ್ದರು, ಬೇಟೋಳಿ ಗ್ರಾಪಂ ಅಭಿವೃದ್ಧಿ ಅಧಿಕಾರಿ ಮಣಿ, ಲಿಟಲ್ ಸ್ಕಾಲರ್ಸ್ ಅಕಾಡೆಮಿ ವ್ಯವಸ್ಥಾಪಕ ಪೂಜ ರವೀಂದ್ರ, ಎಸ್‌ಡಿಎಂಸಿ ನಾಮ ನಿರ್ದೇಶಿತ ಸದಸ್ಯ ಸುಧೀಶ್, ಕೃಷಿಕ ಸೋಮಶೇಖರ್, ಮುಖ್ಯ ಶಿಕ್ಷಕ ಸುನೀತ ಮಾತನಾಡಿದರು. ಮಾಯಿಲ ಮಕ್ಕಿಗಣಪತಿ ಸೇವಾ ಸಮಿತಿ ಅಧ್ಯಕ್ಷ ರಮೇಶ್ ಅಪ್ಪಚ್ಚು ಹಳೆ ವಿದ್ಯಾರ್ಥಿ ಚರಿಷ್ಮ ಸಿಂಚನ, ಸದಾನಂದ, ಸುನಿಲ್ ಉಪಸ್ಥಿತರಿದ್ದರು.

ಆರ್ಯನ ವರ್ಷದ ಹುಟ್ಟು ಹಬ್ಬ ಆಚರಣೆ

ಕುಶಾಲನಗರ, ಜ.24–ಸಮೀಪದ ನಂಜರಾಯಪಟ್ಟಣ ಬಳಿಯ ದುಬಾರೆ ಸಾಕಾನೆ ಶಿಬಿರದಲ್ಲಿ ಶನಿವಾರ ತಬ್ಬಲಿ ಆರ್ಯ ಮರಿಆನೆಯ ಪ್ರಥಮ ವರ್ಷದ ಹುಟ್ಟು ಹಬ್ಬವನ್ನು ಕೇಕ್ ಕತ್ತರಿಸುವ ಮೂಲಕ ಆಚರಿಸಲಾಯಿತು.



ದುಬಾರೆ ಸಾಕಾನೆ ಶಿಬಿರದಲ್ಲಿ ಶನಿವಾರ ತಬ್ಬಲಿ ಆರ್ಯ ಮರಿ ಆನೆಯ ಪ್ರಥಮ ವರ್ಷದ ಹುಟ್ಟು ಹಬ್ಬವನ್ನು ಆಚರಿಸಲಾಯಿತು.

ಕಳೆದ ವರ್ಷ ಜ.24 ರಂದು ಚಿಕ್ಲಿಹೊಳೆ ಮೀಸಲು ಅರಣ್ಯದಲ್ಲಿ ಜನ್ಮದಾತೆಯಿಂದ ಬೇರ್ಪಟ್ಟಿದ್ದ ಮರಿಯಾನೆಯನ್ನು ಅರಣ್ಯ ಸಿಬ್ಬಂದಿಗಳು ರಕ್ಷಣೆ ಮಾಡಿ ಈ ಶಿಬಿರಕ್ಕೆ ತಂದಿದ್ದರು. ಸಾಕಾನೆ ಶಿಬಿರದಲ್ಲಿಯೇ ಮರಿಯಾನೆಗೆ ಆರೈಕೆ ಮಾಡಿ ಸಾಕಲಾಗುತ್ತಿದೆ. ಈ ಮರಿಯಾನೆ ಸಿಕ್ಕಿ ಇಂದು ವರ್ಷವಾದ ಕಾರಣ ದುಬಾರೆ ಸಾಕಾನೆ ಶಿಬಿರದಲ್ಲಿ ಮಾವುತರು, ಕಾವಾಡಿಗರು ಹಾಗೂ ಅರಣ್ಯಾಧಿಕಾರಿಗಳು, ಸಿಬ್ಬಂದಿ ಕೇಕು ಕತ್ತರಿಸಿ ಎಲ್ಲರಿಗೂ ಸಿಹಿ ವಿತರಿಸುವ ಮೂಲಕ ಆರ್ಯ ಮನೆ ಆನೆ ಹುಟ್ಟು ಹಬ್ಬವನ್ನು ಸಂಭ್ರಮ ಸಡಗರದಿಂದ ಆಚರಿಸಿದರು

ಮಡಿಕೇರಿ ವಿಭಾಗದ ಅರಣ್ಯ ಸಂರಕ್ಷಣಾಧಿಕಾರಿ ವಿ.ಅಭಿಷೇಕ್, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಎ.ಎ. ಗೋಪಾಲ್, ಕಾರ್ಯಪ್ಪ ಹಾಗೂ ಆರ್‌ಎಫ್‌ಒ ಆರ್.ರಕ್ಷಿತ್, ದುಬಾರೆ ಉಪ ವಲಯದ ಅರಣ್ಯಾಧಿಕಾರಿ ರಂಜನ್, ವೆಂಕಟೇಶ್ ಸಿಬ್ಬಂದಿಗಳಿದ್ದರು.

ವಾತ್ಸಲ್ಯ ಮನೆಗೆ ಭೂಮಿ ಪೂಜೆ



ನಾಪೋಕ್ಲು: ಧರ್ಮಸ್ಥಳ ಸಂಘದಿಂದ ವಾತ್ಸಲ್ಯ ಮನೆ ನಿರ್ಮಾಣ ಕಾಮಗಾರಿ ಭೂಮಿ ಪೂಜೆಯನ್ನು ಕೋಕೇರಿ ಗ್ರಾಮದಲ್ಲಿ ನೆರವೇರಿಸಲಾಯಿತು. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಬಿಸಿ ಟ್ರಸ್ಟ್ ನರಿಯಂದಡ ಗಾಪಂ ವ್ಯಾಪ್ತಿಯ ಕೋಕೇರಿ ಗ್ರಾಮದಲ್ಲಿ ವಾಸವಿರುವ ಜಾಜಿ ಎಂಬವರಿಗೆ ವಾಸಿಸಲು ಯೋಗ್ಯವಾದ ಮನೆ ಇಲ್ಲದ ಕಾರಣ ಧರ್ಮಸ್ಥಳ ಸಂಘದಿಂದ ಮನೆ ನಿರ್ಮಾಣಕ್ಕೆ ಭೂಮಿಪೂಜೆಯನ್ನು ನೆರವೇರಿಸಲಾಯಿತು.

ರಾಜ್ಯಪಾಲರಿಗೆ ಅವಮಾನ ಖಂಡಿಸಿ

ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಬಿಜೆಪಿ ಪ್ರತಿಭಟನೆ

ಚಾಮರಾಜನಗರ, ಜ.24– ರಾಜ್ಯಪಾಲರಿಗೆ ಆದ ಅವಮಾನ ಖಂಡಿಸಿ ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಜಿಲ್ಲಾ ಬಿಜೆಪಿ ವತಿಯಿಂದ ನಗರದಲ್ಲಿ ಪ್ರತಿ ಭಟನೆ ನಡೆಸಲಾಯಿತು.



ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ನಗರದ ಶ್ರೀಚಾಮರಾಜೇಶ್ವರ ಉದ್ಯಾನವನ ಮುಂಭಾಗ ಜಮಾಯಿಸಿದ ಬಿಜೆಪಿ ಮುಖಂಡರು, ಕಾರ್ಯಕರ್ತರು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತಕ್ಕೆ ತೆರಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಕೆಲಕಾಲ ಪ್ರತಿಭಟನೆ ನಡೆಸಿ, ಕಾಂಗ್ರೆಸ್ ಸರ್ಕಾರ, ಬಿ.ಕೆ.ಹರಿಪ್ರಸಾದ್ ವಿರುದ್ಧ ಘೋಷಣೆ ಕೂಗಿ ಭಾವಚಿತ್ರ ಹರಿದು ಹಾಕಿ ಆಕ್ರೋಶ ವ್ಯಕ್ತಪಡಿಸಿದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ವೃಷಭೇಂದ್ರಪ್ಪ ಮಾತನಾಡಿ, ಕಾಂಗ್ರೆಸ್ ಸರ್ಕಾರ ವಿಧಾನಸಭೆ ವಿಶೇಷ ಅಧಿವೇಶನ ಕರೆದು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರಿಗೆ ಅವಮಾನಿಸಿರು ವುದು ಅತ್ಯಂತ ಖಂಡನೀಯ. ಹಿಂದಿ ನಿಂದಲೂ ಕಾಂಗ್ರೆಸ್ ಸರ್ಕಾರ ದಲಿತ ವಿರೋಧಿ ನೀತಿ ಅನುಸರಿಸುತ್ತಾ ಬಂದಿದೆ. ರಾಜ್ಯಪಾಲರ ಹುದ್ದೆಗೆ ಅಗೌರವ ತೋರುವ ಮೂಲಕ ಅಂಬೇಡ್ಕರ್ ಪರ ಎನ್ನುವ ಕಾಂಗ್ರೆಸ್ ಸಂವಿಧಾನ ವಿರೋಧಿಯಾಗಿ ನಡೆದುಕೊಂಡಿದೆ.

ವಿಧಾನಪರಿಷತ್ ಸದಸ್ಯ ಬಿ.ಕೆ.ಹರೀಶ್ ಪ್ರಸಾದ್ ಅವರ ದುಂಡಾವರ್ತನೆಯನ್ನು ಜಿಲ್ಲಾ ಬಿಜೆಪಿ ಖಂಡಿಸುತ್ತದೆ. ಇದರ ವಿರುದ್ಧ ಬಿಜೆಪಿ ಉಗ್ರ ಹೋರಾಟ ಮಾಡುತ್ತದೆ ಎಂದು ಎಚ್ಚರಿಸಿದರು.

ಸಂವಿಧಾನ ಕಗ್ಗೊಲೆ: ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೂಡ್ನಾಕೂಡು ಪ್ರಕಾಶ್ ಮಾತನಾಡಿ, ಸಂವಿಧಾನ ಪರ ಎನ್ನುವ ಕಾಂಗ್ರೆಸ್‌ನವರು ಸಂವಿಧಾನ ಕಗ್ಗೊಲೆ ಮಾಡಲು ಹೊರಟಿದ್ದಾರೆ ಎಂದು ಆರೋಪಿಸಿದರು.

ಕಾಂಗ್ರೆಸ್ ಶಾಸಕರು ಸದನದೊಳಗೆ ಸಂವಿಧಾನದ ರಕ್ಷಕರಾದ ರಾಜ್ಯಪಾಲರನ್ನು ಅವಮಾನಿಸಿರುವುದು ರಾಜ್ಯದ ಇತಿಹಾಸದಲ್ಲಿ ದೊಡ್ಡ ಕಪ್ಪು ಚುಕ್ಕೆಯಾಗಿದೆ. ಕಾಂಗ್ರೆಸ್ ಜನಪ್ರತಿನಿಧಿಗಳು ಬಾಯಿಯಲ್ಲಿ ಸಂವಿಧಾನ, ಮೈಯಲ್ಲಿ ವಿಷ ತುಂಬಿಕೊಂಡಿದ್ದಾರೆ. ಅವರು ಇಂದು ಆತ್ಮವಿಮರ್ಶೆ ಮಾಡಿಕೊಳ್ಳಬೇಕು. ಸಂವಿಧಾನಕ್ಕೆ ಗೌರವ ಕೊಡುವುದನ್ನು ಮೊದಲು ಕಲಿಯಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಚೂಡಾ ಮಾಜಿ ಅಧ್ಯಕ್ಷರಾದ ಆರ್.ಸುಂದರ್, ಕುಲಗಾಣ ಶಾಂತಮೂರ್ತಿ, ಜಿಲ್ಲಾ ಕಾರ್ಯದರ್ಶಿ ಮಹದೇವಸ್ವಾಮಿ, ನಗರ ಮಂಡಲ ಅಧ್ಯಕ್ಷ ಶಿವರಾಜ್, ಗ್ರಾಮಾಂತರ ಅಧ್ಯಕ್ಷ ಕುಮಾರ್, ಯುವ ಮೋರ್ಚಾ ಜಿಲ್ಲಾಧ್ಯಕ್ಷ ಸೂರ್ಯಕುಮಾರ್, ಆನಂದ್, ಎಸ್‌ಟಿ ಮೋರ್ಚಾ ಜಿಲ್ಲಾಧ್ಯಕ್ಷ ಚಂದ್ರಶೇಖರ್, ಜಿಲ್ಲಾಧ್ಯಕ್ಷ ಚಂದ್ರು, ಎಸ್‌ಸಿ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಿವಣ್ಣ, ಮುಖಂಡರಾದ ಚಂದ್ರಶೇಖರ್, ಮಹೇಶ್, ಚಾಮುಲ್ ಮಾಜಿ ಅಧ್ಯಕ್ಷ ನಾಗೇಂದ್ರ, ಜಿಲ್ಲಾ ಕಾರ್ಯದರ್ಶಿ ರವೀಶ್, ರೈತ ಮೋರ್ಚಾ ಜಿಲ್ಲಾಧ್ಯಕ್ಷ ಬಸವಣ್ಣ, ಪುರುಷೋತ್ತಮ್, ಪರಮೇಶ್, ಮಂಡಲ ಪ್ರಧಾನ ಕಾರ್ಯದರ್ಶಿಗಳಾದ ಕೂಸಣ್ಣ, ರವಿ, ಮಾಧ್ಯಮ ಸಹ ವಕ್ತಾರ ಮಂಜುನಾಥ್, ವೀರೇಂದ್ರ, ಮುಖಂಡರಾದ ವೀರಭದ್ರಸ್ವಾಮಿ, ಚಂದ್ರಶೇಖರ್, ಗುರುಪ್ರಸಾದ್, ಭಾಸ್ಕರ್ ಇತರರಿದ್ದರು.

ಕ್ಷುಲ್ಲಕ ಕಾರಣಕ್ಕೆ ಕಂಬಕ್ಕೆ ಕಟ್ಟಿ ವೃದ್ಧೆ ಮೇಲೆ ಹಲ್ಲೆ

ರಾಮಾಪುರ ಠಾಣೆಯಲ್ಲಿ ಪ್ರಕರಣ ದಾಖಲು: ಇಬ್ಬರ ಬಂಧನ

ಹನೂರು, ಜ.24– ಕ್ಷುಲ್ಲಕ ಕಾರಣಕ್ಕೆ ವೃದ್ಧೆಯೊಬ್ಬರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ, ಕಂಬಕ್ಕೆ ಕಟ್ಟಿ ಹಾಕಿ ಹಲ್ಲೆ ನಡೆಸಿರುವ ಘಟನೆ ತಾಲೂಕಿನ ದೊಮ್ಮನಗದ್ದೆ ಸಮೀಪದ ಜಿ.ಆರ್. ಗ್ರಾಮದಲ್ಲಿ ನಡೆದಿದೆ.



ಜಿ.ಆರ್.ಗ್ರಾಮಕ್ಕೆ ಎಸ್ಪಿ ಮುತ್ತುರಾಜ್ ಭೇಟಿ ನೀಡಿ ಕಣ್ಣಮ್ಮ ಅವರಿಂದ ಮಾಹಿತಿ ಪಡೆದರು.

ಜಿ.ಆರ್.ಗ್ರಾಮದ ನಿವಾಸಿ ಕಣ್ಣಮ್ಮ (58) ಹಲ್ಲೆಗೊಳಗಾದವರು. ದಲಿತ ಸಮುದಾಯಕ್ಕೆ ಸೇರಿದ ಕಣ್ಣಮ್ಮ ಅವರು ತಮ್ಮ ಜಮೀನಿನಲ್ಲಿ ಹುರುಳಿ ಬೆಳೆದಿದ್ದು, ಕಟಾವಿಗೆ ಬಂದಿತ್ತು ಆದರೆ ಗ್ರಾಮದ ತೋಟದ ಮನೆಯ ಸೆಲ್ವಿ ಎಂಬುವರ ಜಾನುವಾರುಗಳು ಹುರುಳಿ ಹೊಲಕ್ಕೆ ನುಗ್ಗಿ ಮೇಯ್ದು ತುಳಿದು ಹಾಳು ಮಾಡಿದ್ದವು. ಈ ಸಂಬಂಧ ಕಣ್ಣಮ್ಮ ತನ್ನ ಜಮೀನಿನಲ್ಲಿ ಬೆಳೆದಿದ್ದ ಹುರುಳಿ ಫಸಲನ್ನು ಸೆಲ್ವಿ ಎಂಬುವರ ಹಸುಗಳು ನಾಶ ಮಾಡಿವೆ ಎಂದು ರಾಮಪುರ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಪೊಲೀಸರು ಠಾಣೆಗೆ ಆಗಮಿಸಿ ಪ್ರಕರಣ ಇತ್ಯರ್ಥಪಡಿಸಿಕೊಳ್ಳುವಂತೆ ಸೆಲ್ವಿಗೆ ಫೋನ್ ಮಾಡಿ ತಿಳಿಸಿದ್ದರು.

ಇದರಿಂದ ಆಕ್ರೋಶಗೊಂಡ ಸೆಲ್ವಿ ಹಾಗೂ ಇತರರು ಕಣ್ಣಮ್ಮ ಅವರನ್ನು ಕಂಬಕ್ಕೆ ಕಟ್ಟಿ ಹಾಕಿ ಅವಾಚ್ಯ ಶಬ್ದಗಳಿಂದ ನಿಂದಿಸಿ ಆಕೆ ಮೇಲೆ ಹಲ್ಲೆ ನಡೆಸುತ್ತಿರುವ ಫೋಟೋ ಹಾಗೂ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿತ್ತು. ಅಲ್ಲದೇ ಕಣ್ಣಮ್ಮ ಹಾಗೂ ಆತನ ಮಗ ಪೆರುಮಾಳ್ ರಾಮಾಪುರ ಪೊಲೀಸ್ ಠಾಣೆಗೆ ಆಗಮಿಸಿ ಸೆಲ್ವಿ ಹಾಗೂ ಇತರರು ನಮ್ಮ ಮನೆಗೆ ನುಗ್ಗಿ ಎಳೆದಾಡಿ ನನ್ನನ್ನು ಕಂಬಕ್ಕೆ ಕಟ್ಟಿ ಹಾಕಿ ಹಲ್ಲೆ ನಡೆಸಿ ಜಾತಿ ನಿಂದನೆ ಮಾಡಿದ್ದಾರೆ ಎಂದು ದೂರು ನೀಡಿದ್ದರು.

ಈ ಸಂಬಂಧ ಪ್ರಕರಣ ದಾಖಲಿಸಿಕೊಂಡ ರಾಮಾಪುರ ಠಾಣೆ ಪೊಲೀಸರು ತನಿಖೆ ಕೈಗೊಂಡು ಜಿ.ಆರ್. ಗ್ರಾಮದ ನಿವಾಸಿಗಳಾದ ಮಂಜು ಹಾಗೂ ಅಂಗ ಮುತ್ತು ಅವರನ್ನು ವಶಕ್ಕೆ ಪಡೆದಿದ್ದಾರೆ. ಅಲ್ಲದೇ ತಲೆಮರೆಸಿಕೊಂಡಿರುವ ಪ್ರಮುಖ ಆರೋಪಿ ಸೆಲ್ವಿಗಾಗಿ ಹುಡುಕಾಟ ಆರಂಭಿಸಿದ್ದಾರೆ.

ಎಸ್ಪಿ ಭೇಟಿ: ವಿಷಯ ತಿಳಿದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮುತ್ತು ರಾಜ್ ರಾಮಪುರ ಪೊಲೀಸ್ ಠಾಣೆ ಮತ್ತು ಜಿ.ಆರ್.ನಗರ ಗ್ರಾಮಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿ ಕಣ್ಣಮ್ಮ ಅವರಿಗೆ ಮಾಹಿತಿ ಪಡೆದು ಸೂಕ್ತ ಕಾನೂನು ಕ್ರಮ ಕೈಗೊಳ್ಳುವ ಭರವಸೆ ನೀಡಿದರು.

ಕರುಳಕುಡಿಯನ್ನೇ ಮಾರಿದ ದಂಪತಿ

● ಚಾ.ನಗರದಲ್ಲಿ ಅಮಾನವೀಯ ಘಟನೆ ● ತಂದೆ–ತಾಯಿ, ಬಾಡಿಗೆ ತಂದೆ, ತಾಯಿ, ನರ್ಸ್ ಬಂಧನ ● ಮಗುವನ್ನು ರಕ್ಷಿಸಿ ಶಿಶು ಅಭಿವೃದ್ಧಿ ಇಲಾಖೆಗೆ ಒಪ್ಪಿಸಿದ ಪೊಲೀಸರು

ಚಾಮರಾಜನಗರ, ಜ.24– ಮಗುವಿನ ಪಾಲನೆ ಮಾಡಲು ಇಚ್ಛೆ ಇಲ್ಲದ ತಂದೆ–ತಾಯಿ ಹೆಣ್ಣು ಮಗುವನ್ನು 50 ಸಾವಿರ ರೂ.ಗಳಿಗೆ ಮಾರಾಟ ಮಾಡಿರುವ ಅಮಾನವೀಯ ಘಟನೆ ಜಿಲ್ಲಾ ಕೇಂದ್ರ ಚಾಮರಾಜನಗರದಲ್ಲಿ ನಡೆದಿದೆ.

ಪ್ರಕರಣ ಸಂಬಂಧ ಮಗು ಮಾರಾಟ ಮಾಡಿದ್ದ ತಂದೆ–ತಾಯಿ, ಬಾಡಿಗೆ ತಂದೆ–ತಾಯಿ, ಮಧ್ಯವರ್ತಿ ನರ್ಸ್ ಸೇರಿದಂತೆ ಐವರನ್ನು ಚಾಮರಾಜನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಪಟ್ಟಣದ ರಾಮಸಮುದ್ರ ಬಡಾವಣೆಯ ಮಂಜುನಾಯಕ ಹಾಗೂ ಸಿಂಧು ದಂಪತಿ 50 ಸಾವಿರ ರೂ.ಗಳಿಗೆ ಮೈಸೂರಿನ ಚೆಲುವಾಂಬ ಆಸ್ಪತ್ರೆಯ 'ಡಿ' ಗ್ರೂಪ್ ನೌಕರೆ ಶಾಂತ ಅವರ ಮೂಲಕ ಹಾಸನ ಜಿಲ್ಲೆ ಕೋಣನೂರು ಗ್ರಾಮದ ಜವರಯ್ಯ ಹಾಗೂ ನೇತ್ರಾ ದಂಪತಿಗೆ 6 ತಿಂಗಳ ಹಿಂದೆ ನವಜಾತ ಹೆಣ್ಣು ಮಗುವನ್ನು ಮಾರಾಟ ಮಾಡಿದ್ದರು.

ಘಟನೆ ವಿವರ: 2025, ಸೆ.15ರಂದು ಪಟ್ಟಣದ ಪೊಲೀಸ್ ಠಾಣೆಗೆ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಅವರು ರಾಮಸಮುದ್ರದ ಕುರುಬರ ಬೀದಿ ನಿವಾಸಿ ಸಿಂಧು ಮತ್ತು ಮಂಜುನಾಯಕ ದಂಪತಿಗೆ 2025ರ ಜು.26 ರಂದು ನಗರದ ಜಿಲ್ಲಾಸ್ಪತ್ರೆಯಲ್ಲಿ ಹೆಣ್ಣು ಮಗು ಜನಿಸಿದೆ. ಆದರೆ, ಪ್ರಸ್ತುತ ಅವರ ಬಳಿ ಮಗು ಇಲ್ಲ ಎಂದು ದೂರು ನೀಡಿದ್ದರು.

ಈ ಪ್ರಕರಣ ಸಂಬಂಧ ತಲೆಮರೆಸಿಕೊಂಡಿದ್ದ ದಂಪತಿಯನ್ನು ಜ.23ರಂದು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಿದಾಗ ಮೈಸೂರಿನ ಚೆಲುವಾಂಬ ಆಸ್ಪತ್ರೆಯಲ್ಲಿ 'ಡಿ' ಗ್ರೂಪ್ ನೌಕರೆ ಶಾಂತ ಎಂಬುವರ ಮೂಲಕ ಹಾಸನ ಜಿಲ್ಲೆಯ ಕೋಣನೂರು ಗ್ರಾಮದ ಜವರಯ್ಯ ಹಾಗೂ ನೇತ್ರಾ ಎಂಬ ದಂಪತಿಗೆ 50 ಸಾವಿರ ರೂ.ಗೆ ಮಾರಾಟ ಮಾಡಿರುವುದು ತಿಳಿದು ಬಂದಿದೆ.

ಬಳಿಕ ಜವರಯ್ಯ ಹಾಗೂ ನೇತ್ರಾ ಅವರ ಆಶ್ರಯದಲ್ಲಿದ್ದ 6 ತಿಂಗಳ ಮಗುವನ್ನು ರಕ್ಷಿಸಿ, ಶಿಶು ಅಭಿವೃದ್ಧಿ ಇಲಾಖೆ ವಶಕ್ಕೆ ನೀಡಿದ್ದು, ಮಗು ಆರೋಗ್ಯವಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಕಾರ್ಯಾಚರಣೆಯಲ್ಲಿ ಪಟ್ಟಣ ಠಾಣೆ ಇನ್‌ಸ್ಪೆಕ್ಟರ್ ಎಂ.ಜಗದೀಶ್, ಎಸ್‌ಐ ಮಂಜುನಾಥ ಹಾಗೂ ಸಿಬ್ಬಂದಿ ಪಾಲ್ಗೊಂಡಿದ್ದರು.

ಬೆಟ್ಟಕ್ಕೆ ಪಾದಯಾತ್ರೆ, ದ್ವಿಚಕ್ರ ವಾಹನದಲ್ಲಿ ತೆರಳಲು ಬೆಳಗ್ಗೆ 7 ರಿಂದ ಸಂಜೆ 4 ರವರೆಗೆ ಮಾತ್ರ ಅವಕಾಶ: ಡಿಸಿ

ಚಾಮರಾಜನಗರ, ಜ.24– ಜಿಲ್ಲೆಯ ಪ್ರಸಿದ್ಧ ಧಾರ್ಮಿಕ ಕ್ಷೇತ್ರ ಮಲೆ ಮಹದೇಶ್ವರ ಬೆಟ್ಟಕ್ಕೆ ಪಾದಯಾತ್ರೆ, ಕಾಲ್ನಡಿಗೆ ಹಾಗೂ ದ್ವಿಚಕ್ರ ವಾಹನ ಸಂಚಾರವನ್ನು ಬೆಳಗ್ಗೆ 7 ರಿಂದ ಸಂಜೆ 4ರವರೆಗೆ ಮಾತ್ರ ಅನುಮತಿಸಿದೆ. ನಂತರದ ಅವಧಿಯಲ್ಲಿ ಪಾದಯಾತ್ರೆ, ಕಾಲ್ನಡಿಗೆ, ದ್ವಿಚಕ್ರ ವಾಹನಗಳಲ್ಲಿ ಮಲೆ ಮಹದೇಶ್ವರ ಬೆಟ್ಟಕ್ಕೆ ತೆರಳುವುದನ್ನು ನಿರ್ಬಂಧಿಸಲಾಗಿದೆ. ಈ ನಿರ್ಬಂಧ ಆದೇಶವು ಜ.25ರಿಂದ ಮುಂದುವರೆಯಲಿದೆ. ಭಕ್ತರು ಹಾಗೂ ಸಾರ್ವಜನಿಕರು ಜಿಲ್ಲಾಡಳಿತದೊಂದಿಗೆ ಸಹಕರಿಸಿ, ನಿರ್ಬಂಧಿತ ಅವಧಿಯಲ್ಲಿ ಕಾಲ್ನಡಿಗೆ, ಪಾದಯಾತ್ರೆ, ದ್ವಿಚಕ್ರ ವಾಹನಗಳಲ್ಲಿ ಪ್ರಯಾಣಿಸಬಾರದೆಂದು ಜಿಲ್ಲಾಧಿಕಾರಿ ಶ್ರೀರೂಪ ಮನವಿ ಮಾಡಿದ್ದಾರೆ.

ಪತ್ರಕರ್ತರ ಭವನ ನಿರ್ಮಾಣಕ್ಕೆ ಶೀಘ್ರ ಅನುದಾನ

ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಭರವಸೆ

ಗುಂಡ್ಲುಪೇಟೆ, ಜ.24(ಸೋಮ್.ಜಿ)– ಪತ್ರಕರ್ತರ ಭವನ ನಿರ್ಮಾಣಕ್ಕೆ ಶೀಘ್ರ ಅನುದಾನ ನೀಡುವುದಾಗಿ ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಭರವಸೆ ನೀಡಿದರು.



ಸಮಾರಂಭವನ್ನು ಶಾಸಕ ಗಣೇಶ್ ಪ್ರಸಾದ್ ಉದ್ಘಾಟಿಸಿದರು.

ಪಟ್ಟಣದ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿ ಆವರಣದ ಜ್ಞಾನ ಭವನದಲ್ಲಿ ನಡೆದ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ನೂತನ 'ಪದಾಧಿಕಾರಿಗಳ ಪದಗ್ರಹಣ' ಹಾಗೂ 'ಕ್ಯಾಲೆಂಡರ್ ಬಿಡುಗಡೆ' ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಪತ್ರಕರ್ತರು ಒಗ್ಗಟ್ಟಿನಿಂದ ಕೆಲಸ ಮಾಡಬೇಕು. ಇದರಿಂದ ಒಳ್ಳೆಯ ಹೆಸರು ಬರುತ್ತದೆ ಎಂದು ತಿಳಿಸಿದರು.

ಸ್ಥಳೀಯ ಸಂಸ್ಥೆ ಚುನಾವಣೆಯಂತೆ ಸಾಕಷ್ಟು ಕಾವು ಪಡೆದು ಜಿಲ್ಲಾ ಮತ್ತು ತಾಲೂಕು ಪತ್ರಕರ್ತರ ಸಂಘದ ಚುನಾವಣೆ ನಡೆದಿದೆ. ಜಿಲ್ಲಾ ಸಂಘ ಮನವಿ ಮೇರೆಗೆ ಪತ್ರ ಕರ್ತರ ಕ್ಷೇಮಾಭಿವೃದ್ಧಿ ಮತ್ತು ದತ್ತಿ ನಿಧಿ ಸ್ಥಾಪನೆಗೆ ಈಗಾಗಲೇ ವೈಯಕ್ತಿಕವಾಗಿ ಒಂದು ಲಕ್ಷ ರೂ. ನೀಡಿದ್ದು, ತಾಲೂಕಿನ ಹಿತಕಾಯಲು ಬದ್ಧನಾಗಿದ್ದೇನೆ ಎಂದರು.

ಮಾಜಿ ಶಾಸಕ ಸಿ.ಎಸ್.ನಿರಂಜನಕುಮಾರ್ ಮಾತನಾಡಿ, ಪತ್ರಿಕೋದ್ಯಮ ಸವಾಲಿನ ಕೆಲಸ. ಪತ್ರಕರ್ತರನ್ನು ಪರ–ವಿರೋಧವಾಗಿ ಬರೆಯುತ್ತಾರೆ ಎಂದು ರಾಜಕಾರಣಿಗಳು, ಮುಖಂಡರು ಹೊಗಳಿಕೆ–ತೆಗಳಿಕೆ ಮಾತುಗಳನ್ನಾಡುತ್ತಾರೆ. ಇದನ್ನು ಮೀರಿ ಘಟನಾವಳಿಗಳಿಗೆ ಅನುಗುಣವಾಗಿ ವಿಶ್ಲೇಷಣೆ ಮಾಡಿ ಬರೆಯುವ ಕೆಲಸ ಉತ್ತಮವಾಗಿದೆ. ರಾಜಕೀಯವಷ್ಟೇ ಅಲ್ಲದೆ ಎಲ್ಲಾ ರಂಗದಲ್ಲಿಯೂ ನೈಜತೆಯಿಂದ ಸುದ್ದಿಗಳನ್ನು ಜನರಿಗೆ ತಿಳಿಸುವ ಕೆಲಸಗಳನ್ನು ಪತ್ರಕರ್ತರು ಮಾಡುತ್ತಿದ್ದಾರೆ ಎಂದು ಶ್ಲಾಘಿಸಿದರು.

ಕಷ್ಟದಲಿದ್ದವರಿಗೆ ಸಹಾಯ ಮಾಡುವ ಜೊತೆಗೆ ಬಡವರು, ನೊಂದವರಿಗೆ ನ್ಯಾಯ ಕೊಡಿಸುವ ಪ್ರಯತ್ನವನ್ನು ಪತ್ರಕರ್ತರು ಮಾಡಬೇಕು. ತಾಲೂಕು ಸಂಘ ಅವಿರೋಧವಾಗಿ ಆಯ್ಕೆಯಾಗಿರುವುದು ಖುಷಿಯ ವಿಚಾರ. ಉತ್ತಮ ಭವನ ನಿರ್ಮಾಣದ ಜೊತೆ ನಿಮ್ಮ ಅವಧಿಯಲ್ಲಿ ಪದಾಧಿಕಾರಿಗಳು ಒಳ್ಳೆಯ ಕೆಲಸ ಮಾಡುವ ಮೂಲಕ ಶಾಶ್ವತವಾಗಿ ಹೆಸರು ಉಳಿಯುವಂತೆ ಮಾಡಬೇಕು. ಜನರಿಗೆ ಉತ್ತಮ ಮಾಹಿತಿಗಳನ್ನು ತಿಳಿಸುವ ನಿಟ್ಟಿನಲ್ಲಿ ಹೆಚ್ಚಿನ ಒತ್ತು ನೀಡಬೇಕು ಎಂದು ಸಲಹೆ ನೀಡಿದರು.

ಚಾ.ನಗರ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಆರ್.ಎನ್.ಸಿದ್ದಲಿಂಗಸ್ವಾಮಿ ಮಾತನಾ ಡಿದರು. ನೂತನ ಪದಾಧಿಕಾರಿಗಳಿಗೆ ಚಾ.ನಗರ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಪ್ರಸಾದ್ ಲಕ್ಕೂರು ಪ್ರಮಾಣ ವಚನ ಬೋಧಿಸಿದರು.

ಈ ವೇಳೆ ಪುರಸಭೆ ಮಾಜಿ ಅಧ್ಯಕ್ಷ ಶಶಿಧರ್ ಪಿ.ದೀಪು, ಬಿಜೆಪಿ ಎಸ್ಸಿ ಮೋರ್ಚಾ ಜಿಲ್ಲಾ ಅಧ್ಯಕ್ಷ ಡಾ.ನವೀನ್ ಮೌರ್ಯ ಹಾಗೂ ಕ್ಯಾಲೆಂಡರ್ ಪ್ರಾಯೋಜಕರಾದ ಹಿಂದೂಸ್ಥಾನ್ ಎಂಟರ್ ಪ್ರೈಸಸ್ ಮಾಲೀಕ ಅಬ್ದುಲ್ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಎಂ.ಎಸ್.ತನ್ಮಯ್, ರಾಜ್ಯ ಸಮಿತಿ ಸದಸ್ಯ ಸಿ.ಮಹೇಂದ್ರ, ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕು ಅಧ್ಯಕ್ಷ ಬಸವರಾಜು, ಪ್ರಧಾನ ಕಾರ್ಯದರ್ಶಿ ಚಂದ್ರು, ಎಪಿಎಂಸಿ ಅಧ್ಯಕ್ಷ ನಾಗರಾಜು, ಚಾಮುಲ್ ನಿರ್ದೇಶಕ ನಂಜುಂಡ ಪ್ರಸಾದ್, ಜಿಪಂ ಮಾಜಿ ಉಪಾಧ್ಯಕ್ಷ ಮಹೇಶ್, ಜಿಲ್ಲಾ ನಿರ್ದೇಶಕರಾದ ಮಹೇಶ್, ಎಂ.ಮಲ್ಲೇಶ್, ತಾಲೂಕು ಉಪಾಧ್ಯಕ್ಷ ಕೃಷ್ಣ, ಗೋಪಾಲ್, ರಾಜೇಶ ಕಾರ್ಯದರ್ಶಿ ಜನಾರ್ಧನ್, ಶೇಖರ್ ಖಜಾಂಚಿ ಮಣಿಕಂಠ, ನಿರ್ದೇಶಕರಾದ ವೆಂಕಟೇಶ್.ಜಿ, ಮಂಜುನಾಥ್, ಚಂದ್ರಶೇಖರ, ಕಾಂತರಾಜು, ಮಲ್ಲೇಶ್, ಸದಸ್ಯರಾದ ಸೋಮಶೇಖರ್, ರಾಜಗೋಪಾಲ್, ಮಹೇಂದ್ರ ಶಿವಕುಮಾರ್ ನಿಂಗಪ್ಪ ಸೇರಿದಂತೆ ವಿವಿಧ ಸಂಘಟನೆ ಮುಖಂಡರು ಹಾಜರಿದ್ದರು.


ವಾರದ ಮಿತ್ರ
ಸಾಪ್ತಾಹಿಕ ಪುರವಣಿ
ಮೈಸೂರು ಮಿತ್ರ
ಭಾನುವಾರ 25-01-2026

ಗಣ ರಾಜ್ಯೋತ್ಸವ ನಿಮಿತ್ತ ಈ ಲೇಖನ

ಭಾರತೀಯರಾದ ನಾವೆಲ್ಲರೂ...



ಬನ್ನೂರು ಕೆ.ರಾಜು
ಸಾಹಿತಿ, ಪತ್ರಕರ್ತ
ಮೊ: 94815 33167



ಭಾಷೆ, ವೇಷಭೂಷಣ, ಆಚಾರಗಳು ಮತ್ತು ವರ್ಗಗಳ ಸಂಬಂಧವಾದ ಎಲ್ಲಾ ವಿಷಯಗಳನ್ನೂ ಮೀರಿದಂತಹುದು'. ಇದಕ್ಕೆ ಮೂಲ ಕಾರಣವೇ ಭಾರತದ ಶ್ರೇಷ್ಠ ಸಂವಿಧಾನ. ನಮ್ಮ ಸಂವಿಧಾನ ಒಂದು ರೀತಿ 'ಭಾರತದ ಧರ್ಮ ಗ್ರಂಥ' ವಿದ್ದಂತೆ. ಪ್ರತಿಯೊಬ್ಬ ಪ್ರಜೆಯೂ ಇದಕ್ಕೆ ತಲೆ ಬಾಗಲೇಬೇಕು. ಇದು ಸಾಮಾಜಿಕ ನ್ಯಾಯಕ್ಕಾಗಿ ಹಿಡಿದ ತಾತ್ವಿಕ ತಕ್ಕಡಿ. ಅಷ್ಟೇ ಅಲ್ಲ ದೇಶವನ್ನು ಮುನ್ನಡೆಸುವ ದೇದೀಪ್ಯಮಾನ ದಾರಿ ದೀಪವೂ ಹೌದು. ಹಾಗೆಯೇ ಪ್ರತಿಯೊಬ್ಬ ಪ್ರಜೆಯ ಬದುಕಿಗೆ ರಕ್ಷಾಕವಚವೂ ನಿಜ!

ನಮ್ಮ ಭಾರತ ಒಂದು ರೀತಿ ಹಬ್ಬಗಳ ದೇಶ. ಇಲ್ಲಿ ಬೇಕಾದಷ್ಟು ಹಬ್ಬಗಳಿವೆ ನಿಜ. ಆದರೆ ಆಗಸ್ಟ್ 15ರ 'ಸ್ವಾತಂತ್ರ್ಯೋತ್ಸವ' ಹಾಗೂ ಜನವರಿ 26ರ 'ಗಣರಾಜ್ಯೋತ್ಸವ' ನಮ್ಮ ರಾಷ್ಟ್ರೀಯ ಹಬ್ಬಗಳು. ಪ್ರಜೆಗಳಿಂದ ಪ್ರಜೆಗಳಿಗಾಗಿ ಪ್ರಜೆಗಳಿಗೋಸ್ಕರವೆಂಬ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿನ ಹೆಮ್ಮೆಯ ದಿನಗಳಿವು. ಸ್ವಾತಂತ್ರ್ಯೋತ್ಸವವನ್ನು ಆಚರಿಸುವಷ್ಟೇ ಸಂಭ್ರಮದಿಂದ ರಿಪಬ್ಲಿಕ್ ಡೇ ಅರ್ಥಾತ್ ಗಣರಾಜ್ಯೋತ್ಸವವನ್ನು ದೇಶ ಆಚರಿಸುತ್ತದೆ. 'ಭಾರತೀಯರಾದ ನಾವೆಲ್ಲರೂ...' ಪವಿತ್ರ ಪದಪುಂಜದಿಂದ ಆರಂಭಗೊಳ್ಳುವ ಡಾ. ಬಾಬಾ ಸಾಹೇಬ್ ಬಿ.ಆರ್. ಅಂಬೇಡ್ಕರ್ ರಚಿತ, ಸಂವಿಧಾನವನ್ನು ನಮಗೆ ನಾವು ಅರ್ಪಿಸಿಕೊಂಡು, ಆಚರಣೆಗೆ ತಂದ ಮಹಾದಿನವಿದು.

ಇಡಿ ಲೋಕದಲ್ಲೇ ನಮ್ಮ ಭಾರತಕ್ಕೆ ಇಲ್ಲ ಎಣೆ! ಒಂದಲ್ಲ ಎರಡಲ್ಲ ಹತ್ತು-ಹಲವು ವಿಷಯಗಳಲ್ಲಿ ಜಗತ್ತು ಕಂಡ ಅಂಥ ಅದ್ಭುತ ದೇಶ ನಮ್ಮದು. ನಮ್ಮ ಭಾರತ ಹೊಂದಿರುವ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ರಚಿಸಿರುವ ಸಂವಿಧಾನವಂತೂ ಇಡೀ ವಿಶ್ವಕ್ಕೆ ಮಾದರಿಯಾಗಿರುವಂತದ್ದು. ಅಷ್ಟೇ ಮಹತ್ವಪೂರ್ಣವಾದದ್ದು. ಇದು ರಚನೆಗೊಂಡ ಕಥೆ ಕೂಡ ಒಂದು ಯಶೋಗಾಥೆಯೇ. ಹಾಗಾಗಿ ಇದರ ಮಹತ್ತು ಮತ್ತಷ್ಟು ಮಗದಷ್ಟು ಮುಪ್ಪರಿಗೊಂಡಿದೆ. ಗಣರಾಜ್ಯೋತ್ಸವವಾಗಿ ಸಂಭ್ರಮ ಪಡೆದುಕೊಂಡಿದೆ ಸ್ವತಂತ್ರ ಭಾರತದ ಇತಿಹಾಸದಲ್ಲಿ ಅವಿಸ್ಮರಣೀಯವಾಗಿದೆ.

"ರಿಪಬ್ಲಿಕ್ ಸ್ವರೂಪದ ರಾಜ್ಯ ವ್ಯವಸ್ಥೆಯಲ್ಲಿ ರಾಜ ಪ್ರಭುತ್ವದಂತೆ ಏಕ ವ್ಯಕ್ತಿಯಲ್ಲಿ ಪರಮಾಧಿಕಾರವಿಲ್ಲದೆ, ಬಹುಸಂಖ್ಯಾತರು ಇಲ್ಲವೆ ಸಮುದಾಯ ಅಧಿಕಾರ ಹೊಂದಿರುತ್ತಾರೆ." ಇದು ರಾಜ್ಯಶಾಸ್ತ್ರದ ಆಧಾರ ಗ್ರಂಥಗಳಲ್ಲಿ 'ರಿಪಬ್ಲಿಕ್'ಗೆ ನೀಡಲಾಗಿರುವ ವ್ಯಾಖ್ಯೆಯ ಸಾರ. ಸಕಲ ಜನ ಕಲ್ಯಾಣವೇ ಇದರ ಮೂಲಾಧಾರ. ಸರ್ವೇ ಜನೋ ಸುಖಿನೋ ಭವಂತು ಆಶಯದ ಪ್ರಜೆಗಳ ಉದ್ಧಾರ.

ಭಾರತ ಜಗತ್ತಿನ ಹಳೆಯ ರಾಷ್ಟ್ರಗಳಲ್ಲಿ ಒಂದು. ಇದು 'ರಾಷ್ಟ್ರ' ಎಂಬ ಕಲ್ಪನೆ ಋಗ್ವೇದದಲ್ಲಿಯೇ ಇದೆ. ಹಾಗೆಯೇ ಇದು 'ಗಣರಾಜ್ಯ' ಎಂಬ ಕಲ್ಪನೆ ವೈದಿಕ ಹಾಗೂ ಬೌದ್ಧ ಸಾಹಿತ್ಯದಲ್ಲಿ ಸಾಕಷ್ಟು ಸಿಗುತ್ತದೆ. ಇಲ್ಲಿ ಹೆಚ್ಚಿನ ಸಂಖ್ಯೆಯ ಗಣರಾಜ್ಯಗಳ ಉಲ್ಲೇಖವಿದೆ. ಬುದ್ಧ ಜನಿಸಿದ ಶಾಖ್ಯವು ಅಂಥದೊಂದು ಗಣರಾಜ್ಯ. ವೇದಕಾಲದಲ್ಲಿ ರಿಪಬ್ಲಿಕನ್ ರಾಜ್ಯಗಳಿದ್ದ ಬಗ್ಗೆ ಪ್ರಬಲವಾದ ಆಧಾರಗಳು ದೊರೆತಿಲ್ಲವಾದರೂ ಆ ನಂತರದ ಕಾಲದಲ್ಲಿ ರಾಜ ರಹಿತ, ರಾಜ್ಯಗಳಿದ್ದ ಬಗ್ಗೆ ಮಾಹಿತಿಗಳಿವೆ. ಗ್ರೀಕ್ ಇತಿಹಾಸ ತಜ್ಞರುಗಳು ಅನೇಕ ಗಣರಾಜ್ಯಗಳ ಅಸ್ತಿತ್ವವನ್ನು ಉಲ್ಲೇಖಿಸುತ್ತಾರೆ. ಪ್ರಾಚೀನ ಭಾರತದ ಮಹಾನ್ ವೈಯ್ಯಾಕರಣಿ ಪಾಣಿನಿ ರಿಪಬ್ಲಿಕ್ ಕುರಿತಂತೆ ವಿವರಣೆ ನೀಡುತ್ತಾನೆ. ಮಹಾನ್ ಅರ್ಥಶಾಸ್ತ್ರಜ್ಞ ಕೌಟಿಲ್ಯನು ತಮ್ಮ ಅರ್ಥಶಾಸ್ತ್ರದಲ್ಲಿ ಕೆಲವೊಂದು ಗಣರಾಜ್ಯಗಳನ್ನು ದಾಖಲಿಸುತ್ತಾನೆ. ಹೀಗೆ ಗಣರಾಜ್ಯದ ಪರಿಕಲ್ಪನೆಗೆ ಬಹಳಷ್ಟು ಪ್ರಾಚೀನತೆಯಿದೆ.

ರಸಋಷಿ ಮಹಾಕವಿ ಕುವೆಂಪು ಅವರು ಹೇಳುವಂತೆ ಸರ್ವ ಜನಾಂಗದ ಶಾಂತಿಯ ತೋಟವಾಗಿರುವ ನಮ್ಮ ಭವ್ಯ ಭಾರತ ದೇಶವು ಮಹಾತ್ಮಾ ಗಾಂಧೀಜಿಯವರ ಮುಂದಾಳತ್ವದಲ್ಲಿ ಅಸಂಖ್ಯಾತ ಜನರ ಬೆಂಬಲ, ದೇಶ ಭಕ್ತರ ಹೋರಾಟ, ತ್ಯಾಗ-ಬಲಿದಾನಗಳಿಂದ ಇಸವಿ 1947 ಆಗಸ್ಟ್ 15ರಂದು ಸ್ವಾತಂತ್ರ್ಯ ಪಡೆಯಿತು. ಹೀಗೆ ಬ್ರಿಟಿಷ್ ಆಳ್ವಿಕೆಯಿಂದ ಸ್ವತಂತ್ರವಾದ ಭಾರತವು ನಂತರ ಎಲ್ಲರಿಗೂ ಮೂಲಭೂತ ಸ್ವಾತಂತ್ರ್ಯ, ಎಲ್ಲ ಮಕ್ಕಳಿಗೂ ಶಿಕ್ಷಣ, ಉದ್ಯೋಗಾವಕಾಶ, ತಾರತಮ್ಯಗಳ ನಿವಾರಣೆ, ಸಂಪತ್ತಿನ ವಿಕೇಂದ್ರಿಕರಣ, ಏಕಸ್ವಾಮ್ಯದ ನಿವಾರಣೆ, ಜೀವನ ಮಟ್ಟದ ಉತ್ತಮಿಕೆ....... ಹೀಗೆ ನಾನಾ ಆಶೋತ್ತರಗಳಿಂದ ಕೂಡಿದ ಆಧುನಿಕ ಸಂಸದೀಯ ಪ್ರಜಾತಂತ್ರವನ್ನು ಬಾಬಾ ಸಾಹೇಬ್ ಅಂಬೇಡ್ಕರ್ ರಚಿತ ನೂತನ ಸಂವಿಧಾನ ರೂಪದಲ್ಲಿ ಅಳವಡಿಸಿಕೊಂಡಿತು.

1950ರ ಜನವರಿ 26ರಂದು ಪ್ರಾತಃಕಾಲ 10 ಗಂಟೆ 18 ನಿಮಿಷಕ್ಕೆ ನಮ್ಮ ಭಾರತ ಸಂವಿಧಾನ ಅನುಷ್ಠಾನಗೊಂಡಿತು. ಅಂದು ಭಾರತ ಸಂವಿಧಾನವನ್ನು ಭಾರತದ ಪ್ರಜಾಪ್ರಭುತ್ವದ ಬುನಾದಿಯಾಗಿ ಅಂಗೀಕರಿಸಿದ ದಾಖಲೆಗೆ ಅಂದಿನ ರಾಷ್ಟ್ರಪತಿ ಬಾಬು ರಾಜೇಂದ್ರ ಪ್ರಸಾದರು, 'ನಮ್ಮ ಸ್ವತಂತ್ರ ಗಣರಾಜ್ಯದ ಹೊಸ ಬದುಕಿಗೆ ಸತ್ಯ-ಅಹಿಂಸೆಯೇ ಉಸಿರಾಗಿರಲಿ' ಎಂದು ಆಶಿಸುತ್ತಾ ಸಹಿ ಹಾಕಿದರು. ಅಂದಿನಿಂದ ಆಧುನಿಕ ಅರ್ಥದಲ್ಲಿ ಭಾರತ 'ಗಣರಾಜ್ಯ'ವಾಯಿತು. ನೂರಾರು ವರ್ಷಗಳ ನಂತರ ಭಾರತೀಯರೆಲ್ಲರೂ ಶಾಸನಾತ್ಮಕವಾಗಿ ಮತ್ತೆ ಒಂದೇ ಸರ್ಕಾರದ ಅಡಿಯಲ್ಲಿ ಇರುವಂತಾಯಿತು. ಇದಕ್ಕೆ ನಾಂದಿಯಾಡಿದ ಇಂಥ ಭವ್ಯ ದಿನದ ದಿವ್ಯ ಶುಭಗಳಿಗೆಯ ಸವಿ ನೆನಪೇ ನಮ್ಮ ಗಣರಾಜ್ಯದ ಉತ್ಸವವಾಗಿ ರೂಪುಗೊಂಡಿತು. ಹಾಗಾಗಿ ಈ ಚಾರಿತ್ರಿಕ ದಿನವನ್ನು ಭಾರತವು ತನ್ನ ರಾಷ್ಟ್ರೀಯ ಹಬ್ಬವಾಗಿ ಪ್ರತೀ ವರ್ಷ ಬಹಳ ಸಡಗರ-ಸಂಭ್ರಮಗಳಿಂದ ದೇಶಾದ್ಯಂತ ಆಚರಿಸುತ್ತದೆ. ಇದಕ್ಕೆ ಮತ್ತೂ ಒಂದು ಮುಖ್ಯ ಘಟನೆ ಕಾರಣವಾಗಿದ್ದು, ಅದೆಂದರೆ 1929ರಲ್ಲಿ ಲಾಹೋರ್‌ನಲ್ಲಿ ನಡೆದ ಕಾಂಗ್ರೆಸ್ ವಾರ್ಷಿಕ ಅಧಿವೇಶನ ಪೂರ್ಣ ಸ್ವರಾಜ್ಯದ ಘೋಷಣೆ ಮಾಡಿತ್ತು. ಅದನ್ನು ಸಾಧಿಸಲು ಬೇಕಾದ ಕ್ರಮ ಕೈಗೊಳ್ಳಲು ಗಾಂಧೀಜಿಯವರಿಗೆ ಒಪ್ಪಿಸಿತ್ತು. ಈ ಐತಿಹಾಸಕ ದಿನವನ್ನೂ ಗಮನದಲ್ಲಿಟ್ಟುಕೊಂಡು ಭಾರತ ಗಣರಾಜ್ಯೋತ್ಸವ ಆಚರಿಸುತ್ತದೆ. ಇದು ಸಂವಿಧಾನ ದಿನಾಚರಣೆಯೂ ಹೌದು.



ನಮ್ಮ ಭಾರತದ ಸಂವಿಧಾನ ನಮ್ಮದು ಲೌಕಿಕ ರಾಷ್ಟ್ರವೆಂದು ಸಾರುವುದರೊಂದಿಗೆ ಜೊತೆಜೊತೆಗೆ ಯಾವುದೇ ಪಕ್ಷ ಪಾತವಿಲ್ಲದೆ ಎಲ್ಲ ಪ್ರಜೆಗಳಿಗೂ ಸ್ವಾತಂತ್ರ್ಯ, ಸಮಾನತೆಗಳನ್ನು ನೀಡಿದೆ. ಸರ್ವರಿಗೂ ಸಮಬಾಳು, ಸರ್ವರಿಗೂ ಸಮಪಾಲು, ಸರ್ವಧರ್ಮ ಸಮನ್ವಯ ನಮ್ಮ ಜೀವನ ರೀತಿಯೆಂದು ಮಾರ್ಗದರ್ಶಿಯಾಗಿದೆ. ವೈವಿಧ್ಯತೆಯಲ್ಲಿ ಏಕತೆಗೆ ಒತ್ತು ಕೊಟ್ಟಿರುವ ನಮ್ಮ ಸಂವಿಧಾನ ಭೂತ, ವರ್ತಮಾನ, ಭವಿಷ್ಯ-ಹೀಗೆ ತ್ರಿಕಾಲ ಪ್ರಜ್ಞೆಯನ್ನು, ವೈಚಾರಿಕ ಜ್ಞಾನವನ್ನು ಸಂಗಮಿಸಿಕೊಂಡಿದೆ. ಭಾರತೀಯ ಸಂಸ್ಕೃತಿಗೆ ಭದ್ರವಾದ ತಳಪಾಯ ನಿರ್ಮಿಸಿದೆ. ಅದಕ್ಕೇನೆ ಭಾರತವು ಸಾಧಿಸಿರುವ ಸಾಂಸ್ಕೃತಿಕ ಒಮ್ಮತವನ್ನು ಕುರಿತಂತೆ ವಿನ್ಸೆಂಟ್ ಸ್ಮಿತ್ ಅವರು ಈ ರೀತಿ ಉದ್ಗರಿಸಿದ್ದಾರೆ.

'ಭಾರತ ದೇಶವು ಸಂದೇಹವಿಲ್ಲದೆ ಭೌಗೋಳಿಕ ಪ್ರತ್ಯೇಕತೆಗಿಂತಲೂ ಅಥವಾ ರಾಜಕೀಯ ಉನ್ನತಿಗಿಂತಲೂ ಆಳವಾದ ಮೂಲಭೂತ ಏಕತೆಯನ್ನು ಹೊಂದಿದೆ. ಈ ಏಕತೆಯು ವಿವಿಧ ರೀತಿಯ ರಕ್ತ ಸಂಬಂಧವಾದ, ವರ್ಣ ಸಂಬಂಧವಾದ, ಭಾಷೆ, ವೇಷಭೂಷಣ, ಆಚಾರಗಳು ಮತ್ತು ವರ್ಗಗಳ ಸಂಬಂಧವಾದ ಎಲ್ಲ ವಿಷಯಗಳನ್ನೂ ಮೀರಿದಂತಹುದು'. ಇದಕ್ಕೆ ಮೂಲ ಕಾರಣವೇ ಭಾರತದ ಶ್ರೇಷ್ಠ ಸಂವಿಧಾನ. ನಮ್ಮ ಸಂವಿಧಾನ ಒಂದು ರೀತಿ 'ಭಾರತದ ಧರ್ಮ ಗ್ರಂಥ' ವಿದ್ದಂತೆ. ಪ್ರತಿಯೊಬ್ಬ ಪ್ರಜೆಯೂ ಇದಕ್ಕೆ ತಲೆ ಬಾಗಲೇಬೇಕು. ಇದು ಸಾಮಾಜಿಕ ನ್ಯಾಯಕ್ಕಾಗಿ ಹಿಡಿದ ತಾತ್ವಿಕ ತಕ್ಕಡಿ. ಅಷ್ಟೇ ಅಲ್ಲ ದೇಶವನ್ನು ಮುನ್ನಡೆಸುವ ದೇದೀಪ್ಯಮಾನ ದಾರಿ ದೀಪವೂ ಹೌದು. ಹಾಗೆಯೇ ಪ್ರತಿಯೊಬ್ಬ ಪ್ರಜೆಯ ಬದುಕಿಗೆ ರಕ್ಷಾಕವಚವೂ ನಿಜ!

ಹಾಗೆಯೇ ಪ್ರತಿಯೊಬ್ಬ ಪ್ರಜೆಯೂ ಸಂವಿಧಾನದ ಆಶಯವನ್ನು ಉಳಿಸುವುದರತ್ತ ಪ್ರಾಮಾಣಿಕವಾಗಿ ನಡೆಯಬೇಕಾಗಿದೆ. ಜಗತ್ತೇ ಮೆಚ್ಚುವಂಥ ಇಂಥ ಅಮೂಲ್ಯ ಸಂವಿಧಾನವನ್ನು ಭಾರತಕ್ಕೆ ನೀಡಿದ ಕೀರ್ತಿಗೆ ಭಾಜನರಾದ ಭಾರತರತ್ನ ಡಾ. ಬಿ.ಆರ್. ಅಂಬೇಡ್ಕರ್ ಅವರು ಈ ರೀತಿಯ ಅಪೂರ್ವ ಸಾಧನೆಯಿಂದ 'ಸಂವಿಧಾನ ಶಿಲ್ಪಿ' ಎಂದೇ ಲೋಕ ಪ್ರಸಿದ್ಧರಾದದ್ದು ಈಗ ಇತಿಹಾಸ. ಹಾಗೆಯೇ ಇಂಥ ಇತಿಹಾಸ ಪುರುಷನನ್ನು ಸ್ಮರಿಸಿ ಗೌರವಿಸುವುದು ಕೂಡ ಪ್ರತಿಯೊಬ್ಬ ಭಾರತೀಯರ ಕರ್ತವ್ಯ. ಹಾಗೆಯೇ ಇಂದು ಸಂವಿಧಾನವನ್ನೇ ಬುಡಮೇಲು ಮಾಡುವಂತಹ ವ್ಯವಸ್ಥೆ ದೇಶದಲ್ಲಿ ನಡೆಯುತ್ತಿರುವುದರಿಂದ ಸಂವಿಧಾನ ರಕ್ಷಣೆಗಾಗಿ ಪ್ರತಿಯೊಬ್ಬರೂ ಪ್ರಾಮಾಣಿಕವಾಗಿ ಸಂಕಲ್ಪ ತೊಡಬೇಕಾಗಿದೆ.

**'ಇಡೀ ಲೋಕದಲ್ಲೇ ನಮ್ಮ ಭಾರತಕ್ಕೆ ಇಲ್ಲ ಎಣೆಯು
ಆ ರಮ್ಯ ಪುಷ್ಪವನದ ಕೋಗಿಲೆಗಳಂತೆ ನಾವು
ನಾವಿರೆ ವಿದೇಶದಲ್ಲಿ, ತಾಯ್ನಾಡೊಳಿಹುದು ಮನಸು
ಮನವೆಲ್ಲಿ ವಿಹರಿಸಿಹುದೊ ಅದೆ ನಮ್ಮ ನಿಜದ ನೆಲಸು
ಉತ್ತುಂಗ ಪರ್ವತಕ್ಕೆ ನೆರೆವಾಸಿ ನಭದ ಸ್ವರ್ಗ
ಆ ಅದ್ರಿ ಕಾವಲೆಮಗೆ, ರಕ್ಷಿಸುವ ಭದ್ರ ದುರ್ಗ
ಗಿರಿ ಮಡಿಲೊಳಾಡುತಿಹವು ನದಿ ಜೀವ ಸಾವಿರಾರು
ಈ ನಾಡ ಬನವ ಮಾಡಿ ನಂದನದ ಹೂವ ತೇರು
ಜಲ ಶೋಭನಾಂಗೆ ಗಂಗೆ, ನೆನಪಿರುವುದೇನು ನಿನಗೆ
ನಮ್ಮಿರವ ಕಾರವಾನು ಇಳಿದದ್ದು ನಿನ್ನ ಬದಿಗೆ
ಬೋಧಿಸುವುದಿಲ್ಲ ಧರ್ಮ ಮಾನವರ ಮೇಲೆ ದ್ವೇಷ
ಭಾರತಿಯ ಸುತರು ನಾವು, ಭಾರತವು ನಮ್ಮ ದೇಶ'**

ಇದು ಕವಿ ಕೆ.ಎಸ್. ನಿಸಾರ್ ಅಹಮದ್ ಅವರು ಉರ್ದು ಮಹಾಕವಿ ಸರ್. ಮಹಮ್ಮದ್ ಇಕ್ಬಾಲ್ ಅವರ 'ಸಾರೆ ಜಹಾಂಸೆ ಅಚ್ಚಾ ಹಿಂದೂಸ್ತಾನ್ ಹಮಾರ.........' ದೇಶ ಗೀತೆಯನ್ನು ಭಾವಾನುವಾದಿಸಿ ಹೇಳಿರುವ ಸುಂದರ ಸಾಲುಗಳು. ನಿಜ, ಇಡಿ ಲೋಕದಲ್ಲೇ ನಮ್ಮ ಭಾರತಕ್ಕೆ ಇಲ್ಲ ಎಣೆ! ಒಂದಲ್ಲ ಎರಡಲ್ಲ ಹತ್ತು-ಹಲವು ನೂರಾರು ವಿಷಯಗಳಲ್ಲಿ ಜಗತ್ತು ಕಂಡ ಅಂಥ ಅದ್ಭುತ ದೇಶ ನಮ್ಮದು. ನಮ್ಮ ಭಾರತ ಹೊಂದಿರುವ ಸಂವಿಧಾನವಂತೂ ಇಡಿ ವಿಶ್ವಕ್ಕೆ ಮಾದರಿಯಾಗಿರುವಂತಾದ್ದು. ಅಷ್ಟೇ ಮಹತ್ವ ಪೂರ್ಣವಾದದ್ದು. ಇದು ರಚನೆಗೊಂಡ ಕಥೆ ಕೂಡ ಒಂದು ಯಶೋಗಾಥೆಯೇ. ಹಾಗಾಗಿ ಇದರ ಮಹತ್ತು ಮತ್ತಷ್ಟು ಮಗದಷ್ಟು ಮುಪ್ಪರಿಗೊಂಡಿದೆ. ಗಣರಾಜ್ಯೋತ್ಸವವಾಗಿ ಸಂಭ್ರಮ ಪಡೆದುಕೊಂಡಿದೆ ಸ್ವತಂತ್ರ ಭಾರತದ ಇತಿಹಾಸದಲ್ಲಿ ಅವಿಸ್ಮರಣೀಯವಾಗಿದೆ.

ಮಕ್ಕಳ ಚಿತ್ರಕಥೆ 'ಕೋತಿ ಮತ್ತು ಮೊಸಳೆ'

■ ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199




① ಒಂದು ಕಾಡಿನಲ್ಲಿ ದೊಡ್ಡದಾದ ಕೊಳವಿತ್ತು. ಅಲ್ಲಿಯೇ ವಾಸವಿದ್ದ ಒಂದು ಕೋತಿ ಹಾಗೂ ಮೊಸಳೆ, ಒಳ್ಳೆಯ ಸ್ನೇಹಿತರಾಗಿದ್ದವು.




② ಅವೆರಡೂ ಪ್ರತಿ ದಿನ ಬೆಳಿಗ್ಗೆ-ಸಾಯಂಕಾಲ ಭೇಟಿಯಾಗಿ ಮಾತಾಡಿಕೊಳ್ಳುತ್ತಿದ್ದವು. ಕೆಲವೊಮ್ಮೆ ಆ ಮೊಸಳೆಯು ಕೋತಿಯನ್ನು ತನ್ನ ಬೆನ್ನ ಮೇಲೆ ಕೂರಿಸಿಕೊಂಡು ನೀರಿನಲ್ಲಿ ವಿಹಾರ ಮಾಡಿಸುತ್ತಿತ್ತು




③ ಆ ಸಮಯದಲ್ಲಿ ಕೋತಿ ಕೂಡ ಕಾಡಿನ ಎಲ್ಲಾ ಸಂತಸದ ಕ್ಷಣಗಳನ್ನು ಹಂಚಿಕೊಂಡು ಮನೋರಂಜನೆ ನೀಡುತ್ತಿತ್ತು. ಹೀಗೆಯೇ ಕೆಲವು ದಿನಗಳು ಕಳೆದವು.



④ ಒಮ್ಮೆ ಆ ಮೊಸಳೆಗೆ ತನ್ನ ಸ್ನೇಹಿತನ ಭೇಟಿಯಾಯಿತು. ಆ ಸ್ನೇಹಿತ, ಮೊಸಳೆಗೆ ಹೇಳಿದ 'ನಿನ್ನ, ಆ ಕೋತಿಯ ಜೊತೆಗಿನ ಸ್ನೇಹ ಬಹಳ ವಿಚಿತ್ರವಾದುದು. ನಿನಗೆ ಅದರೊಂದಿಗೆ ಹೇಗೆ ಸ್ನೇಹವಾಯಿತು...?'



⑤ ಅದಕ್ಕೆ ಆ ಮೊಸಳೆಯು 'ನಾನು ಸಣ್ಣವನಿದ್ದಾಗ ಕೆಸರಿನಲ್ಲಿ ಸಿಕ್ಕಿಹಾಕಿಕೊಂಡಿದ್ದೆ. ಆ ಸಮಯದಲ್ಲಿ ಈ ಕೋತಿಯು ಒಂದು ಸಣ್ಣ ಮರದ ರೆಂಬೆಯನ್ನು ನನ್ನ ಬಳಿ ಬಿಸಾಡಿ ನನ್ನ ಜೀವ ಉಳಿಸಿತ್ತು. ಆ ದಿನದಿಂದ ನಾನು ಮತ್ತು ಆ ಕೋತಿ ಒಳ್ಳೆಯ ಸ್ನೇಹಿತರಾದೆವು.



⑥ ಸ್ನೇಹಿತ ಮೊಸಳೆಯು, 'ಅದೆಲ್ಲಾ ಸರಿಯಪ್ಪಾ... ನಿನಗೆ ಗೊತ್ತೇ... ಕೋತಿಯ ಹೃದಯವು ತಿನ್ನಲು ಬಹಳ ಸ್ವಾದಿಷ್ಟವಾದುದು ಎಂದು..?'

(ಮುಂದುವರೆಯುವುದು)



ವಾರಭವಿಷ್ಯ

25.01.2026ರಿಂದ 30.01.2026

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಮಕರ, ಚಂದ್ರ-ಮೀನ, ಮೇಷ, ವೃಷಭ, ಮಿಥುನ, ಕುಜ-ಮಕರ, ಬುಧ-ಮಕರ, ಗುರು-ಮಿಥುನ, ಶುಕ್ರ-ಮಕರ, ಶನಿ-ಮೀನ, ರಾಹು-ಕುಂಭ ಮತ್ತು ಕೇತು-ಸಿಂಹ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ: 9740973224, 9739548720



ಮೇಷ (ಚು,ಚೆ,ಲ,ಲಿ,ಲು,ಲೆ,ಲೂ,ಅ)
ದುಡುಕು ನಿಮ್ಮ ರಾಶಿಜನ್ಯ ಸ್ವಭಾವ, ಅದಕ್ಕೆ ನೀರೆರೆಯಲು ವ್ಯಯಸ್ಥಾನದಲ್ಲಿ ಶನಿದೇವನಿದ್ದಾನೆ. ಕಾರಣ ಸಂಯಮವೇ ನಿಮ್ಮ ಮೂಲಮಂತ್ರವಾಗಿರಲಿ. ಗೃಹೀಯ ಸಮಸ್ಯೆಗಳು ಗೃಹದಲ್ಲೇ ಇತ್ಯರ್ಥವಾದರೆ ಒಳಿತು. ಚಂದ್ರಗ್ರಹ ಪ್ರಭಾವದಿಂದ ವಾರದ ಅಂತ್ಯ ಭಾಗಕ್ಕೆ ಹಣಕಾಸಿನ ವಿಷಯಗಳು ಸುಗಮವಾಗುವುದು. ನೂತನ ವ್ಯವಹಾರಗಳನ್ನು ಪ್ರಾರಂಭಿಸಬಹುದು.
ಶ್ರೀ ಗಣೇಶ ಸೇವೆ. ಶುಭ ಸಂಖ್ಯೆ-1

ವೃಷಭ (ಇ,ಉ,ಎ,ಒ,ವ,ವಿ,ವು,ವೆ,ವೊ)
ಚತುರ ಗುಣವುಳ್ಳ ನೀವು ಸಂಸಾರದಲ್ಲಿ ಬರುವ ಏಳು ಬೀಳುಗಳನ್ನು ಸ್ವಸಾಮರ್ಥ್ಯದಿಂದ ಪರಿಹರಿಸಿಕೊಳ್ಳುವಿರಿ. ಸೋದರರಲ್ಲಿ ತಾಳ್ಮೆಯಿಂದ ವರ್ತಿಸಿ, ಆರ್ಥಿಕ ಪರಿಸ್ಥಿತಿ ಸುಧಾರಣೆ ಆಗಲಿದೆ. ಮಹಿಳಾ ಮಣಿಯರು ಅಲಂಕಾರಿಕ ವಸ್ತುಗಳಿಗೆ ಧಾರಾಳ ಹಣ ವ್ಯಯಿಸುವರು. ಆಧ್ಯಾತ್ಮ ವಿಷಯದಲ್ಲಿ ಆಸಕ್ತಿ ಮೂಡುವುದು. ನಿಮ್ಮ ಶತ್ರುಗಳಿಗೆ ಹಿನ್ನಡೆ ಆಗುವುದು.
ಶ್ರೀ ದೇವೀ ಚರಣ ಸೇವೆಯಿಂದ ಜಯ. ಶುಭ ಸಂಖ್ಯೆ-2

ಮಿಥುನ (ಕ,ಕಿ,ಕು,ಘ,ಙ,ಛ,ಕೆ,ಕೊ,ಹ)
ವಾರದಾರಂಭಕ್ಕೆ ಮನಸ್ಸಿಗೆ ಆವರಿಸಿದ್ದ ದುಗುಡತೆ ನಿವಾರಣೆಗೆ ಮನೋಕಾರಕ ಚಂದ್ರನ ಶುಭ ಸಂಚಾರವೇ ಕಾರಣ. ಹೆಚ್ಚಿನ ಆದಾಯವಿದ್ದಾಗ್ಯೂ ಮಿತಿ ಮೀರಿದ ಖರ್ಚುಗಳಿಂದ ಕೈ ಮಾತ್ರ ಖಾಲಿ. ವಾರ ಮುನ್ನಡೆದಂತೆ ಹಿತೈಷಿಗಳ ಸಹಕಾರದಿಂದ ನಿಂತು ಹೋಗಿದ್ದ ಕೆಲಸಗಳು ಚಲನೆಯನ್ನು ಪಡೆಯಲಿವೆ. ರಾಜಕೀಯ ರಂಗದವರಿಗೆ ಸಂಕಷ್ಟಗಳು ಎದುರಾಗಲಿದೆ.
ಶ್ರೀ ವಿಷ್ಣು ಸಹಸ್ರನಾಮ ಪಠಿಸಿ. ಶುಭ ಸಂಖ್ಯೆ-6

ಕಟಕ (ಹೊ,ಹು,ಹೆ,ಡ,ಡಿ,ಡು)
ವೈಯಕ್ತಿಕ ಕೆಲಸಗಳನ್ನು, ಆಫೀಸ್ ಜವಾಬ್ದಾರಿಗಳನ್ನು ಅಪ್‌ಡೇಟ್ ಮಾಡಿಕೊಳ್ಳಲು ನಿಮಗೆ ಗ್ರಹಗಳ ಬೆಂಬಲವಿದೆ. ಕೋರ್ಟು, ಕಚೇರಿ ಕೆಲಸಗಳಲ್ಲಿ ಇರುಸು-ಮುರಿಸಿನ ಪ್ರಸಂಗ ಘಟಿಸಬಹುದು. ನಿಮ್ಮ ರಾಶ್ಯಾಧಿಪತಿ ಚಂದ್ರನ ದೆಸೆಯಿಂದ ಧನ-ಕನಕ ಪ್ರಾಪ್ತಿ. ಹಳೆ ವಾಹನ ಮಾರಾಟ, ಹೊಸ ವಾಹನ ಖರೀದಿಗೆ ಪ್ರೇರಣೆ. ವಾರಾಂತ್ಯಕ್ಕೆ ಅನ್ನ-ಪ್ರಸಾದಗಳಲ್ಲಿ ಲೋಪ ಉಂಟಾಗಬಹುದು. ಸ್ವಚ್ಛತೆಗೆ ಆದ್ಯತೆ ನೀಡಿ.
ಶ್ರೀ ರಾಜರಾಜೇಶ್ವರಿ ಅಷ್ಟಕ ಪಠಿಸಿ. ಶುಭ ಸಂಖ್ಯೆ-3

ಸಿಂಹ (ಮ,ಮಿ,ಮು,ಮೊ,ಮೆ,ಟ,ಟಿ,ಟು,ಟೆ)
ಸಪ್ತಾಹದ ಆದಿಗೆ ಪ್ರೀತಿ-ಪ್ರಣಯ ವಿಷಯಗಳಲ್ಲಿ ನಿಮ್ಮ ಪರ ಸಾಕಷ್ಟು ಪ್ರಗತಿಗಳು ಉಂಟಾಗಲಿವೆ. ವೃತ್ತಿ ಸ್ಥಳದಲ್ಲಿ ನಿಮ್ಮ ಪೂರ್ವ ಅನುಭವ ನಿಮ್ಮ ನೆರವಿಗೆ ಬರಲಿದೆ. ಹಣಕಾಸಿನ ವಿಷಯದಲ್ಲಿ ಶಿಸ್ತು ಇರಲಿ, ಅನ್ಯಥಾ ತೊಂದರೆಗೆ ಗುರಿಯಾಗುವಿರಿ. ವಾರಾಂತ್ಯಕ್ಕೆ ಆರೋಗ್ಯದಲ್ಲಿ ಸುಧಾರಣೆ, ಆಸ್ಪತ್ರೆಯಿಂದ ಬಿಡುಗಡೆ. ಪುಣ್ಯ ಕ್ಷೇತ್ರ ಪ್ರವಾಸಗಳು ಉಂಟಾಗಲಿವೆ.
ಶ್ರೀ ಮನ್ನರಾಯಣ ಸ್ತುತಿ. ಶುಭ ಸಂಖ್ಯೆ-8

ಕನ್ಯಾ (ಟೊ,ಪ,ಪಿ,ಪು,ಷ,ಣ,ಠ,ಪೆ,ಪೊ)
ಈ ವಾರದಲ್ಲಿ ಕೆಲವು ಚೇತೋಹಾರಿ ಪ್ರಸಂಗಗಳು ಸಂಭವಿಸುವ ಯೋಗವಿದೆ. ಬಂಧು-ಬಳಗದವರ ಮಿಲನ. ಅವರ ಆದರಾತಿಥ್ಯಕ್ಕೆ ಹಣ ವಿನಿಯೋಗ, ನೂತನ ವಸ್ತ್ರಾಭರಣ ಖರೀದಿಯಿಂದ ಶ್ರೀಮತಿಗೆ ಸಂತೋಷ. ದೂರ ಪ್ರಯಾಣಗಳನ್ನು ತಳ್ಳಿ ಹಾಕಲಾಗದು. ತಾಳ್ಮೆಯ ಡ್ರೈವಿಂಗ್ ಒಳ್ಳೆಯದು. ಪಾಲುದಾರಿಕೆ ಹೂಡಿಕೆಗಳಲ್ಲಿ ಹಿನ್ನಡೆ ಉಂಟಾಗುವುದು. ನಿಮ್ಮ ಸ್ವಾಸ್ಥ್ಯದ ಬಗ್ಗೆ ಉದಾಸೀನ ಬೇಡ.
ಶ್ರೀ ರಾಮತಾರಕ ನಾಮ ಜಪ. ಶುಭ ಸಂಖ್ಯೆ-4

ತುಲಾ (ರ,ರಿ,ರು,ರೆ,ರೊ,ತ,ತಿ,ತು,ತೆ)
ನವಮ ಭಾಗ್ಯ ಸ್ಥಾನದಲ್ಲಿರುವ ಗುರು ಬಲದ ಸುಫಲಗಳು ಕಾರ್ಯಗತವಾಗಬೇಕಾದರೆ ನಿಮ್ಮ ಪರಿಶ್ರಮದ ಅಗತ್ಯವೂ ಉಂಟು. ಹಲವರಿಗೆ ಕಂಕಣಬಲ ಯೋಗವಿದೆ. ಕನ್ಯೆಯರು ತುಳಸೀ ವ್ರತವನ್ನು ಮಾಡಿದರೆ ನಿಶ್ಚಿತ ಫಲ ದೊರೆಯುವುದು. ಷಷ್ಠ ಭಾವದ ಶನಿಯಿಂದ ರೋಗ, ಋಣ, ಶತ್ರುಬಾಧೆ ಕಾಡದು. ನಿಮಗಾಗದವರು ನಿಮ್ಮ ಮೇಲೆ ಅಭಿಚಾರ ಮಾಡುವ ಸಾಧ್ಯತೆ ಇರುತ್ತದೆ.
ಶ್ರೀ ದೇವೀ ಖಡ್ಗಮಾಲ ಪಠಿಸಿ. ಶುಭ ಸಂಖ್ಯೆ-9

ವೃಶ್ಚಿಕ (ತೊ,ನ,ನಿ,ನು,ನೆ,ನೊ,ಯ,ಯಿ,ಯ)
ಶುಭ ವಾರ್ತೆ, ಪ್ರೀತಿ ಪಾತ್ರರ ಸಮ್ಮಿಲನ, ಕನಕ ವಸ್ತ್ರಾಭರಣ ಖರೀದಿಗಳಿಂದ ವಾರಕ್ಕೆ ಸ್ವಾಗತ. ಸಾರ್ವಜನಿಕ ರಂಗದಲ್ಲಿರುವವರಿಗೆ ಸರ್ಕಾರಿ ಗೌರವ, ಪ್ರಶಸ್ತಿ ದೊರಕುವ ಸಂಭವ. ವಕೀಲಿ ವೃತ್ತಿಯವರಿಗೆ ತಮ್ಮ ಕೇಸ್‌ಗಳಲ್ಲಿ ವಿಜಯ. ಜಾಮೀನು ದಸ್ತಾವೇಜುಗಳಿಗೆ ಕಣ್ಣು ಮುಚ್ಚಿ ಸಹಿ ಮಾಡಬೇಡಿ. ಕುಟುಂಬ ಸಮೇತ ಪುಣ್ಯಕ್ಷೇತ್ರ ಸಂದರ್ಶನದಿಂದ ವಾರಕ್ಕೆ ತೆರೆ.
ಶ್ರೀ ನೃಸಿಂಹ ದರ್ಶನ. ಶುಭ ಸಂಖ್ಯೆ-5

ಧನುಸ್ಸು (ಯೆ,ಯೊ,ಬ,ಬಿ,ಬು,ಧ,ಭ,ಢ,ಬೆ)
ವಾರದ ಆದಿಗೆ ಕೆಲಸ ಕಾರ್ಯಗಳು ಸುಗಮವಾಗಿ ಸಾಗುವುದು. ಆರ್ಥಿಕ ಪರಿಸ್ಥಿತಿಯಲ್ಲಿ ಸುಧಾರಣೆಯನ್ನು ಕಾಣುವಿರಿ. ಬ್ಯಾಂಕ್ ಸಾಲಕ್ಕಾಗಿ ಪ್ರಯತ್ನ ಪಟ್ಟರೆ ಧನಾತ್ಮಕ ಫಲಿತಾಂಶ ದೊರೆಯಲಿದೆ. ಶತ್ರುಗಳು ಮಿತ್ರರಾಗುವರು. ವಿವೇಚನೆಯಿಂದ ನಡೆದುಕೊಂಡಲ್ಲಿ ಬಿರುಕುಗಳು ಉಂಟಾಗದು, ವಿವಾದದ ಪರಿಸ್ಥಿತಿಯಲ್ಲಿ ಸಿಲುಕಿಕೊಳ್ಳುವುದನ್ನು ನೀವು ತಪ್ಪಿಸಿಕೊಳ್ಳಿ. ನಿತ್ಯ ಯೋಗ, ಧ್ಯಾನದಲ್ಲಿ ತೊಡಗಿಸಿಕೊಳ್ಳಿ.
ಶ್ರೀ ಶಿರಡಿ ಬಾಬಾ ಪ್ರಾರ್ಥನೆ. ಶುಭ ಸಂಖ್ಯೆ-7

ಮಕರ (ಬೊ,ಜ,ಜಿ,ಶಿ,ಶು,ಶೆ,ಶೊ,ಗ,ಗಿ)
ಈ ವಾರ ಕೆಲವೊಂದು ಕೆಲಸಗಳು ಮರಳಿ ಯತ್ನ ಮಾಡುವುದರಿಂದ ಯಶಸ್ಸು. ನಿಮ್ಮ ಮಾತಾ-ಪಿತೃಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡಲ್ಲಿ ಮಹತ್ವದ ಕಾರ್ಯದಲ್ಲಿ ವಿಜಯವನ್ನು ಹೊಂದುವಿರಿ. ನಿಮ್ಮ ಪ್ರಗತಿಗೆ ನಿಮ್ಮ ಮನೋಭಾವವೇ ಅಡ್ಡವಾಗಿದೆ. ವ್ಯಾಪಾರ-ವ್ಯವಹಾರಗಳು ಮಂದಗತಿಯಲ್ಲಿ ಸಾಗುವುದು ಹಾಗೂ ಸಾಲ ಕೊಟ್ಟು ಕಳೆದುಕೊಳ್ಳುವಿರಿ. ಸರ್ಕಾರಿ ನೌಕರರಿಗೆ ಹಿರಿಯ ಅಧಿಕಾರಿಗಳ ಕಾಕದೃಷ್ಟಿ,
ಶ್ರೀ ಮನೆ ದೇವರ ದರ್ಶನ. ಶುಭ ಸಂಖ್ಯೆ-6

ಕುಂಭ (ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ)
ನಿಮ್ಮ ಶ್ರೇಯಸ್ಸಿಗೆ ಪಂಚಮ ಗುರುವಿನ ಕೃಪೆ ಇದೆ. ಹೊಸ ಯೋಜನೆಗಳಿಗೆ ಪ್ರೇರಣೆ ಆಗುವುದು. ಸದಾಚಾರ ಸಂಪನ್ನರೆನಿಸಿ ಜನಾನುರಾಗ ಗಳಿಸುವಿರಿ. ವಿದ್ಯಾ ಪ್ರಸಂಗಗಳಲ್ಲಿ ಸಾಧನೆಯ ಗರಿ ನಿಮ್ಮದಾಗಲಿದೆ. ದಾನ-ಧರ್ಮಗಳಿಂದ ಸಾಮಾಜಿಕ ಗೌರವಕ್ಕೆ ಪಾತ್ರರಾಗುವಿರಿ. ಭೂಮಿ ವ್ಯವಹಾರಗಳಲ್ಲಿ ಧನಲಾಭ ಉಂಟು. ರಾಹು-ಕೇತುಗಳ ಅವಕೃಪೆ
ಶ್ರೀ ವೆಂಕಟೇಶ್ವರ ದರ್ಶನ. ಶುಭ ಸಂಖ್ಯೆ-3

ಮೀನ (ದಿ,ದು,ಖ,ಝ,ಥ,ತೆ,ದೊ,ಚ,ಚಿ)
ವಾರದ ಆದಿಗೆ ನಿಮ್ಮ ರಾಶಿಯಲ್ಲಿ ಗೋಚರಿಸುವ ಚಂದ್ರನಿಂದ ಯತ್ನ ಕಾರ್ಯಗಳಲ್ಲಿ ಜಯ, ಧನಪ್ರಾಪ್ತಿ, ಲಲನೆಯರ ಸಂಪರ್ಕಗಳಂತಹ ಮನೋಲ್ಲಾಸಗಳನ್ನು ಅನುಭವಿಸುವಿರಿ. ಸಾಡೇಸಾತಿಯ ಪರಿಣಾಮ ಮನಸ್ಸಿಗೆ ಸ್ಥಿರತೆ ಇರದೆ ನಾನಾ ವಿಧವಾದ ಚಿಂತೆಗಳು ಆವರಿಸಿರುತ್ತೆ. ಎಲ್ಲರಲ್ಲಿಯೂ ವಿರೋಧ ಎದುರಾಗುವುದು. ಸದ್ಯಕ್ಕೆ ಹೊಸ ಹೂಡಿಕೆಗಳನ್ನು ಮಾಡಬೇಡಿ.
ಶ್ರೀ ಹರಿನಾಮ ಸ್ಮರಣೆ. ಶುಭ ಸಂಖ್ಯೆ-8

ಅಭಿಮಾನಿಗಳ ಪ್ರೀತಿ ಇರುವವರೆಗೂ ಅಂಬರೀಷ್ ಅಮರ

ಬನ್ನೂರಲ್ಲಿ ಅಂಬಿ ಕಂಚಿನ ಪುತ್ಥಳಿ ಅನಾವರಣಗೊಳಿಸಿದ ಮಾಜಿ ಸಂಸದೆ ಸುಮಲತಾ



ಬನ್ನೂರಿನಲ್ಲಿ ಡಾ.ಅಂಬರೀಶ್ ಅಭಿಮಾನಿ ಬಳಗ, ಅಭಿಷೇಕ್ ಅಂಬರೀಶ್ ಅಭಿಮಾನಿ ಬಳಗ ನಿರ್ಮಿಸಿರುವ ಡಾ.ಅಂಬರೀಶ್ ಅವರ ಕಂಚಿನ ಪುತ್ಥಳಿ ಅನಾವರಣ ಸಮಾರಂಭದ ಸಭಾ ಕಾರ್ಯಕ್ರಮವನ್ನು ಮಾಜಿ ಸಂಸದೆ ಸುಮಲತಾ ಉದ್ಘಾಟಿಸಿದರು.

ತಿ.ನರಸೀಪುರ, ಜ.24– ಅಭಿಮಾನಿಗಳ ಪ್ರೀತಿ ಎಲ್ಲಿಯವರೆಗೆ ನಿರಂತರವಾಗಿರುತ್ತದೋ ಅಲ್ಲಿಯವರೆಗೂ ಅಂಬರೀಷ್ ಅಮರರಾಗಿರುತ್ತಾರೆ ಎಂದು ಮಾಜಿ ಸಂಸದೆ ಹಾಗೂ ಖ್ಯಾತ ಚಲನಚಿತ್ರ ನಟಿ ಸುಮಲತಾ ಅಂಬರೀಷ್ ಭಾವುಕರಾಗಿ ನುಡಿದಿದ್ದಾರೆ.

ತಾಲೂಕಿನ ಬನ್ನೂರು ಪಟ್ಟಣದ ಹಾಲಿನ ಡೈರಿ ಮುಂಭಾಗ ಮೈಸೂರು ಜಿಲ್ಲಾ ಕನ್ನಡ ಕುಲದೈವ ಡಾ.ಅಂಬರೀಶ್ ಹಾಗೂ ಅಭಿಷೇಕ್ ಅಂಬರೀಶ್ ಅಭಿಮಾನಿ ಬಳಗದ ವತಿಯಿಂದ ನಿರ್ಮಿಸಲಾಗಿರುವ ಡಾ.ಅಂಬರೀಶ್ ಅವರ ಕಂಚಿನ ಪುತ್ಥಳಿ ಅನಾವರಣ ಕಾರ್ಯಕ್ರಮದಲ್ಲಿ ಪುತ್ಥಳಿ ಅನಾವರಣಗೊಳಿಸಿ ವೇದಿಕೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಅಂಬರೀಶ್ ಅವರ ಅಭಿಮಾನಿಗಳಾದ ನೀವು ಅವರ ಕಾಲವಾದ ನಂತರವೂ ತೋರುತ್ತಿರುವ ಪ್ರೀತಿಗೆ ಯಾವ ರೀತಿ ಕೃತಜ್ಞತೆ ಹೇಳಬೇಕು ಎಂಬುದೇ ತಿಳಿಯುತ್ತಿಲ್ಲ. ಅಂಬಿ ಅಭಿಮಾನಿಗಳ ಪಾಲಿಗೆ ಆರಾಧ್ಯ ದೈವವಾಗಿದ್ದರು. ಅಭಿಮಾನಿಗಳು ಅವರಿಗೆ ತೋರುತ್ತಿದ್ದ ಪ್ರೀತಿ, ಅಭಿಮಾನ ನಿಜಕ್ಕೂ ಶ್ಲಾಘನೀಯವಾಗಿದ್ದು, ನಿಮ್ಮ ಪ್ರೀತಿ ಎಲ್ಲಿಯವರೆಗೆ ಇರುತ್ತದೋ ಅಂಬಿ ಸಹ ಅಲ್ಲಿಯವರೆಗೂ ಅಮರರಾಗಿರುತ್ತಾರೆ. ಈ ಪ್ರೀತಿ ಅಭಿಮಾನ ಹೀಗೆ ಮುಂದುವರೆಸುತ್ತೀರೆಂದು ನಾನು ಭಾವಿಸಿದ್ದೇನೆ ಎಂದರು.

> ಬನ್ನೂರಿಗೂ ಅಂಬರೀಶ್‌ಗೂ ಅವಿನಾಭಾವ ಸಂಬಂಧವಿದೆ. ಈ ಹಿಂದೆ ಇದೇ ಮೈದಾನದಲ್ಲಿ ಅಂಬರೀಶ್ ಕಾರ್ಯಕ್ರಮ ಮಾಡಿದ್ದೆವು. ಅಲ್ಲಿ ಸೇರಿದ್ದ ಜನಸಾಗರ ಎಂದಿಗೂ ಮರೆಯುವಂತಿಲ್ಲ. ಅಂಬರೀಶ್ ರವರು ತಮ್ಮ ರಾಜಕೀಯ ಜೀವನದಲ್ಲಿ ರೈತರ ಪರವಾಗಿ, ಬಡವರ ಪರವಾಗಿ, ಧೀನ ದಲಿತರ ಪರವಾಗಿ ಸಾಮಾಜಿಕ ಕಳಕಳಿ ಇಟ್ಟುಕೊಂಡು ಕೆಲಸ ಮಾಡಿದ ಧೀಮಂತ ರಾಜಕಾರಣಿಯಾಗಿದ್ದು, ಅವರ ಪುತ್ಥಳಿ ಅನಾವರಣ ಮಾಡಿರುವುದು ಉತ್ತಮ ಕಾರ್ಯವಾಗಿದೆ.ಅಂಬರೀಶ್ ರವರ ಚಿತ್ರದ ಹೆಸರು "ಮಮತೆಯ ಮಡಿಲು" ಗೋಶಾಲೆ ತೆರೆಯಲು ಹೊರಟಿರುವ ಅಭಿಮಾನಿ ಬಳಗಕ್ಕೆ ಒಳ್ಳೆಯದಾಗಲಿ.
> – ಆರ್.ಚೆಲುವರಾಜು, ಮೈಮುಲ್ ಮಾಜಿ ಅಧ್ಯಕ್ಷ

ಅಂಬಿ ಬರೀ ಮಂಡ್ಯದ ಗಂಡಲ್ಲ: ಅಂಬರೀಶ್ ಅವರನ್ನು ಅಭಿಮಾನಿಗಳು ಪ್ರೀತಿಯಿಂದ ಮಂಡ್ಯದ ಗಂಡು ಎಂದು ಕರೆಯುತ್ತಾರೆ. ಆದರೆ ಅವರು ಬರೀ ಮಂಡ್ಯಕ್ಕಷ್ಟೇ ಸೀಮಿತರಾಗಿಲ್ಲ. ಅವರು ರಾಜ್ಯದ ಯಾವುದೇ ಮೂಲೆಯಲ್ಲಿ ಹೋದರು ಅಲ್ಲಿ ಅಭಿಮಾನಿಗಳ ಪ್ರೀತಿ ವಿಶ್ವಾಸ ಸಿಗುತ್ತಿತ್ತು.ಅಭಿಮಾನ ಎಂಬುದು ಅವರು ಇದ್ದಾಗ ಯಾವ ರೀತಿ ಇತ್ತೋ ಈಗಲೂ ಅದೇ ರೀತಿ ಮುಂದುವರೆದಿದೆ. ಅಂತಹ ಪ್ರೀತಿಯನ್ನು ಅಭಿಮಾನಿಗಳು ನೀಡುತ್ತಾ ಬಂದಿದ್ದು ಈ ಅಭಿಮಾನಕ್ಕೆ ಮಾತುಗಳೇ ಬರುತ್ತಿಲ್ಲ ಎಂದು ಭಾವುಕರಾದರು.

ಅಭಿಮಾನಿ ಬಳಗಕ್ಕೆ ಥ್ಯಾಂಕ್ಸ್: ಅಂಬಿ ಕಂಚಿನ ಪುತ್ಥಳಿ ಕಾರ್ಯಕ್ರಮಕ್ಕೆ ವರ್ಷದಿಂದಲೇ ಯೋಜನೆ ಹಾಕಿ ಸಂಘದ ಅಧ್ಯಕ್ಷ ನಂದೀಶ್ ಸೇರಿದಂತೆ ಕಾರ್ಯಕಾರಿ ಸಮಿತಿ ಸದಸ್ಯರು ತುಂಬಾ ಶ್ರಮವಹಿಸಿದ್ದಾರೆ. ಪುತ್ಥಳಿ ನಿರ್ಮಾಣ ಸುಲಭದ ಕೆಲಸವಲ್ಲ. ಅದಕ್ಕೆ ಅದರದ್ದೇ ಕಾನೂನಾತ್ಮಕ ಕೆಲಸಗಳಿರುತ್ತೆ. ಎಲ್ಲರ ಸಹಕಾರಬೇಕಾಗುತ್ತೆ. ಇದೆಲ್ಲವನ್ನೂ ಸವಾಲಾಗಿ ಸ್ವೀಕರಿಸಿ ಯಾವುದೇ ಪ್ರತಿ ಫಲಾಪೇಕ್ಷೆ ಇಲ್ಲದೇ ಅದ್ದೂರಿ ಕಾರ್ಯಕ್ರಮ ಮಾಡುವ ಮೂಲಕ ಬಳಗ ತನ್ನ ಅಭಿಮಾನ ಪ್ರದರ್ಶನ ಮಾಡಿದ್ದು ಅವರಿಗೆ ಧನ್ಯವಾದ ಸಲ್ಲಿಸುತ್ತೇನೆ ಎಂದರು.

ಕಾರ್ಯಕ್ರಮದ ಸಾನಿಧ್ಯ ವಹಿಸಿದ್ದ ಎಂಎಲ್ ಹುಂಡಿ ಶೂನ್ಯ ಪೀಠದ ಶ್ರೀ ಗೌರಿ ಶಂಕರ ಸ್ವಾಮಿ ಮಾತನಾಡಿ, ಬನ್ನೂರು ಪಟ್ಟಣದಲ್ಲಿ ಅಂಬಿ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಅವರ ಪುತ್ಥಳಿ ನಿರ್ಮಾಣವಾಗಿರುವುದು ಈ ಭಾಗದ ಜನತೆಯ ಭಾಗ್ಯ ಎಂದೇ ಭಾವಿಸಿದ್ದೇನೆ. ಅಂಬರೀಶ್ ಅವರು ಶಿಸ್ತಿನ ಸಿಪಾಯಿಯಾಗಿದ್ದರು. ಅವರ ಕೊಡುಗೆ ಕನ್ನಡ ಚಿತ್ರರಂಗಕ್ಕೆ ಅಪಾರವಾಗಿದೆ.


> ಜೀವನದಲ್ಲಿ ಸಿನಿಮಾ ಇರಬಹುದು, ಹೆಸರಿರಬಹುದು, ಹಣ ಇರಬಹುದು. ಹಾಗೆಯೇ ರಾಜಕಾರಣದಲ್ಲಿ ಅಧಿಕಾರ, ಯಶಸ್ಸು ಇರಬಹುದು. ಇವು ಒಲಿದಾಗ ಮಾತ್ರವೇ ಚೆನ್ನಾಗಿರುತ್ತದೆ. ಆದರೆ ಯಾವುದೂ ಶಾಶ್ವತವಲ್ಲ. ಇಲ್ಲಿ ಶಾಸ್ವತವಾಗಿರುವುದು ಅಭಿಮಾನಿಗಳ ಪ್ರೀತಿ ಒಂದೇ. ಇಂದು ಅದನ್ನು ಅಂಬಿ ಪುತ್ಥಳಿ ನಿರ್ಮಿಸುವ ಮೂಲಕ ಸಾಬೀತು ಮಾಡಿದ್ದೀರಾ. –ಸುಮಲತಾ

ಚಿತ್ರನಟಿ ಮಾಲಾಶ್ರೀ ಅಭಿಷೇಕ್ ಅಂಬರೀಶ್, ವಿನೋದ್ ಪ್ರಭಾಕರ್, ಹಾಸ್ಯನಟ ಚಿಕ್ಕಣ್ಣ, ನಟಿ ಆರಾಧನ ರಾಮ್, ಕಾಮಿಡಿ ಕಿಲಾಡಿಗಳು ಖ್ಯಾತಿಯ ಶಿವರಾಜು, ಬೇಲೂರು ಸೋಮಶೇಖರ್ ಮಾತನಾಡಿದರು.

ಅಭಿಮಾನಿ ಬಳಗದ ಅಧ್ಯಕ್ಷ ಬಿ.ಸಿ. ನಂದೀಶ್, ಉಪಾಧ್ಯಕ್ಷ ಅಂಬರೀಷ, ಪುರಸಭಾ ಮಾಜಿ ಅಧ್ಯಕ್ಷ ಕೃಷ್ಣೆಗೌಡ, ಒಕ್ಕಲಿಗರ ಸಂಘದ ಉಪಾಧ್ಯಕ್ಷ ಗಂಗಾಧರ್, ಬೆಂಗಳೂರು ಮಂಜೇಗೌಡ್ರು, ಹೋಟೆಲ್ ರಾಮಸ್ವಾಮಿ, ಸಮಾಜಸೇವಕ ಮಹೇಂದ್ರ ಸಿಂಗ್ ಕಾಳಪ್ಪ, ದಿವ್ಯ ಆಲೂರ್, ಆನಂದ್, ಬಾಬು, ವೆಂಕಟೇಶ್, ಸಂತೋಷ್, ಅಂಬರೀಶ್, ಪ್ರಸನ್ನ, ಮಹೇಂದ್ರ, ಜಗದೀಶ್, ಸುರೇಶ್ ಸೇರಿದಂತೆ ಅಭಿಮಾನಿ ಬಳಗದ ಸದಸ್ಯರು, ನೂರಾರು ಅಭಿಮಾನಿಗಳಿದ್ದರು.

ಕಂಪಲಾಪುರದಲ್ಲಿ ವಿಜೃಂಭಣೆಯ ಚೌಡೇಶ್ವರಿ ಉತ್ಸವ





ಕಂಪಲಾಪುರ: ಗ್ರಾಮದ ಶ್ರೀರಾಮಲಿಂಗ ಚೌಡೇಶ್ವರಿ ದೇವಾಲಯದ 18ನೇ ವರ್ಷದ ಜಯಂತಿ ಮಹೋತ್ಸವ ಅಪಾರ ಜನಸ್ತೋಮದ ನಡುವೆ ವಿಜೃಂಭಣೆಯಿಂದ ನೆರವೇರಿತು.

ಶುಕ್ರವಾರ ಪ್ರಾತಃಕಾಲದಿಂದ ಅರ್ಚಕ ಗಣಪತಿ ಭಟ್ ಮತ್ತು ತಂಡದವರಿಂದ ಪೂಜಾ ವಿಧಿ ವಿಧಾನಗಳು ನೆರವೇರಿದವು. ಬಗೆ ಬಗೆಯ ಪುಷ್ಪಾಲಂಕಾರದಿಂದ ದೇವಸ್ಥಾನ ಹಾಗೂ ಚೌಡೇಶ್ವರಿ ಅಮ್ಮನ ವರ ಮೂರ್ತಿ ಆಕರ್ಷಣೀಯವಾಗಿತ್ತು. ಭಕ್ತರು ದೇವಸ್ಥಾನದ ಬಳಿ ಜಮಾಯಿಸಿ ಪೂಜೆ ನೆರವೇರಿಸಿ ದೇವಿಯನ್ನು ಕಣ್ತುಂಬಿಕೊಂಡರು.

ಮಧ್ಯಾಹ್ನ 12 ಗಂಟೆಗೆ ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ ನಡೆಯಿತು. 1 ಗಂಟೆಯಿಂದ ಶ್ರೀನಾಗ ವಿದ್ಯಾ ಸಂಸ್ಥೆ ಆವರಣದಲ್ಲಿ ಸುಮಾರು ನಾಲ್ಕರಿಂದ ಐದು ಸಾವಿರ ಮಂದಿಗೆ ಭೋಜನದ ವ್ಯವಸ್ಥೆ ಮಾಡಲಾಗಿತ್ತು. ರಾಷ್ಟ್ರೀಯ ಹೆದ್ದಾರಿ 275 ಮೈಸೂರು ಬಂಟ್ವಾಳ ರಸ್ತೆ ಹಾಗೂ ಗ್ರಾಮದ ಪ್ರಮುಖ ಬೀದಿಗಳು, ವಿನಾಯಕ ಸರ್ಕಲ್‌ಗೆ ಮಂಡ್ಯ ಜಿಲ್ಲೆ ಪಾಲಹಳ್ಳಿ ಗೋಕುಲ ಲೈಟಿಂಗ್ಸ್‌ನವರಿಂದ ದೀಪಾಲಂಕಾರ ವ್ಯವಸ್ಥೆ ಮಾಡಲಾಗಿತ್ತು. ದೀಪಾಲಂಕಾರ ಮೈಸೂರು ದಸರಾ ವೈಭವವನ್ನು ನೆನಪಿಸುವಂತಿತ್ತು.

ಸಂಜೆ 6 ಗಂಟೆಯಿಂದ ವಿದ್ಯುತ್ ದೀಪಾಲಂಕಾರದ ಭವ್ಯ ಮಂಟಪದಲ್ಲಿ ಚೌಡೇಶ್ವರಿ ಅಮ್ಮನವರ ಉತ್ಸವ ಮೂರ್ತಿಯನ್ನು ಇಟ್ಟು, ಚೇತನ್ ಹಾಗೂ ತಂಡದವರಿಂದ ಮಂಗಳವಾದ್ಯ, ಕೇರಳದ ಚಂಡೆ ಹಾಗೂ ಕರಡಿ ವಾದ್ಯಗಳೊಂದಿಗೆ ಗ್ರಾಮದ ಪ್ರಮುಖ ರಾಜಬೀದಿಗಳಲ್ಲಿ ಉತ್ಸವ ನೆರವೇರಿತು.

ಚಂಡೆಯ ನಾದಕ್ಕೆ ದೇವಾಂಗ ಸಮುದಾಯದ ಯುವಕ–ಯುವತಿಯರು, ಮಹಿಳೆಯರು ಸೇರಿದಂತೆ ಎಲ್ಲರೂ ಸಹ ಹೆಜ್ಜೆ ಹಾಕಿ ಕುಣಿದು ಕುಪ್ಪಳಿಸಿ ಸಂಭ್ರಮಿಸಿದರು. ಮುನ್ನೆಚ್ಚರಿಕೆ ಕ್ರಮವಾಗಿ ಪಿರಿಯಾಪಟ್ಟಣ ಪೊಲೀಸರು ಸೂಕ್ತ ಬಂದೋಬಸ್ತ್ ಮಾಡಿದ್ದರು

ಇಸ್ಪಿಟ್ ಅಡ್ಡೆ ಮೇಲೆ ದಾಳಿ: 10 ಜನರ ಬಂಧನ

ಪಣಕ್ಕಿಟ್ಟಿದ್ದ 24,350 ರೂ. ವಶಕ್ಕೆ

ಹುಣಸೂರು, ಜ.24– ಇಸ್ಪೀಟ್ ಅಡ್ಡೆಯೊಂದರ ಮೇಲೆ ದಾಳಿ ನಡೆಸಿದ ಡಿವೈಎಸ್‌ಪಿ ರವಿ ನೇತೃತ್ವದ ಪೊಲೀಸರು ಅಂದರ್ ಬಾಹರ್ ಆಡುತ್ತಿದ್ದ 10 ಮಂದಿಯನ್ನು ಬಂಧಿಸಿ ಪಣಕ್ಕಿಟ್ಟಿದ್ದ 24,350ರೂ. ವಶಪಡಿಸಿಕೊಂಡಿದ್ದಾರೆ.

ತಾಲೂಕಿನ ನಲ್ಲೂರುಪಾಲ ಗ್ರಾಮದ ರಾಜು ಅವರಿಗೆ ಸೇರಿದ ವಾಸದ ಮನೆ ಹಿಂಭಾಗದ ಹಿತ್ತಲಿನಲ್ಲಿ ಇಸ್ಪೀಟ್ ಆಡುತ್ತಿರುವ ಬಗ್ಗೆ ಬಂದ ಖಚಿತ ಮಾಹಿತಿ ಮೇರೆಗೆ ಇಸ್ಪೀಟ್ ಅಡ್ಡೆ ಮೇಲೆ ದಾಳಿ ನಡೆಸಲಾಗಿದೆ.

ಅಂದರ್ ಬಾಹರ್ ಆಡುತ್ತಿದ್ದ ಗುರುಪುರದ ರಿಜ್ವಾನ್ ಶರೀಫ್, ಅಕ್ರಂ ಪಾಷಾ, ಬಲ್ಲೇನಹಳ್ಳಿಯ ಮಹದೇವ್, ಹೊಸೂರು ಗೇಟ್ ಚಂದ್ರಶೇಖರ್, ಮೂರೂರಮ್ಮ ಬಡಾವಣೆಯ ಹೆಳವನಾಯಕ, ಪಿ.ಕೆ. ಕಾಲೋನಿ ಬಳಿಯ ರಹಮತ್ತುಲ್ಲಾ, ಲಾಲ್‌ಬಂದ್ ಬೀದಿಯ ವಜೀರ್‌ಖಾನ್ ಮತ್ತು ಮಹಮದ್ ಶರೀಫ್, ಹೊಸವಾರಂಚಿ ರಾಮೇಗೌಡ, ಕುಶಾಲನಗರದ ರಘು ಎಂಬವರನ್ನು ಬಂಧಿಸಿ, ಸ್ಥಳದಲ್ಲಿದ್ದ ಹಣ ಮತ್ತಿತರ ಪರಿಕರ ವಶಕ್ಕೆ ಪಡೆದು ಪ್ರಕರಣ ದಾಖಲಿಸಿದ್ದಾರೆ.

ಮಾಹಿತಿ ನೀಡಿ: ಅಕ್ರಮ ಇಸ್ಪೀಟ್, ಮದ್ಯ ಮಾರಾಟ, ಗಾಂಜಾ ಕಂಡು ಬಂದಲ್ಲಿ 9480805022ಗೆ ಮಾಹಿತಿ ನೀಡುವಂತೆ ಡಿವೈಎಸ್‌ಪಿ ರವಿ ಮನವಿ ಮಾಡಿದ್ದಾರೆ.

ಪಿಎಸ್‌ಐ ರಾಧಾ, ಎಎಸ್‌ಐ ಬಸಪ್ಪ, ಅಶೋಕ್, ರವಿ, ಜಗದೀಶ್, ಮಲ್ಲೇಶ್, ನಂದೀಶ್, ದಿನೇಶ್, ಪ್ರೇಮಕುಮಾರ್, ವಿಜಯರಘು, ಚಾಲಕ ಚರಣ್ ರಾಜ್ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ರೋಟರಿ ಕ್ಲಬ್‌ನಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರ



ಕೆ.ಆರ್.ನಗರ ರೋಟರಿ ಕ್ಲಬ್ ವತಿಯಿಂದ ಪಟ್ಟಣದ ರೋಟರಿ ಭವನದಲ್ಲಿ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ರೋಟರಿ ಕ್ಲಬ್ ಅಧ್ಯಕ್ಷ ಟಿ.ಎನ್.ದಯಾನಂದ್, ಡಾ.ಸೌಮ್ಯ ಶರತ್, ಡಾ.ಕಲೆಂಜಲಿ ಉದ್ಘಾಟಿಸಿದರು.

ಕೆ.ಆರ್.ನಗರ: ಇತ್ತೀಚಿನ ದಿನಗಳಲ್ಲಿ ವೃದ್ಧರು ಹಾಗೂ ಮಕ್ಕಳು ಆರೋಗ್ಯದ ಕಡೆ ಹೆಚ್ಚು ಗಮನ ಹರಿಸುವುದು ಸೂಕ್ತ ಎಂದು ಪಟ್ಟಣದ ರೋಟರಿ ಕ್ಲಬ್ ಅಧ್ಯಕ್ಷ ಟಿ.ಎನ್.ದಯಾನಂದ್ ಹೇಳಿದರು.

ಕೆಆರ್.ನಗರ ರೋಟರಿ ಕ್ಲಬ್ ವತಿಯಿಂದ ಪಟ್ಟಣದ ರೋಟರಿ ಭವನದಲ್ಲಿ ಆಯೋಜಿಸಲಾಗಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು.

ಗ್ರಾಮೀಣ ಭಾಗದ ಜನರು, ವೃದ್ಧರು, ಮಕ್ಕಳು ಸೇರಿದಂತೆ ಕೆಲಸದ ಒತ್ತಡಕ್ಕೆ ಮಣಿದು ಆರೋಗ್ಯದ ಮೇಲೆ ಬೀರುವ ದುಷ್ಪರಿಣಾಮ ತಡೆಗಟ್ಟುವಲ್ಲಿ ನಿರ್ಲಕ್ಷ್ಯ ವಹಿಸದೆ ವೈದ್ಯರ ಸಲಹೆ ಸೂಚನೆ ತಪ್ಪದೆ ಪಾಲಿಸಬೇಕು. ಆರೋಗ್ಯ ಕಾಪಾಡಿಕೊಂಡರೆ ನಿಮ್ಮ ಜೀವನದಲ್ಲಿ ಏನು ಬೇಕಾದರೂ ಸಾಧಿಸಬಹುದು ಎಂದರು.

ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಕಣ್ಣು, ಕಿವಿ, ಮೂಗು, ಗಂಟಲು, ಎಲುಬು, ಹಲ್ಲು, ಸ್ತ್ರೀ ರೋಗ, ಮಕ್ಕಳ ರೋ ದಜಗ, ಸಾಮಾನ್ಯ ರೋಗ ಸೇರಿದಂತೆ ವೈದ್ಯರು ನೂರಕ್ಕೂ ಹೆಚ್ಚು ಜನರಿಗೆ ತಪಾಸಣೆ ಮಾಡಿದರು. ರೋಗಿಗಳ ಇಸಿಜಿ, ಟೂಡಿ, ರಕ್ತದೊತ್ತಡ, ಮಧುಮೇಹ, ರಕ್ತ ಪರೀಕ್ಷೆ ನಡೆಸಿ, ಉಚಿತ ಔಷಧಿ ವಿತರಣೆ ಮಾಡಲಾಯಿತು. ಪಟ್ಟಣದ ಹೆಸರಾಂತ ಸಮೃದ್ಧಿ ಆಸ್ಪತ್ರೆ, ಶರತ್ ಕಣ್ಣಿನ ಆಸ್ಪತ್ರೆ ಹಾಗೂ ಚಿನ್ಮಯ್ ಮಲ್ಟಿ ಸ್ಪೆಷಾಲಿಟಿ ಡೆಂಟಲ್ ಕ್ಲಿನಿಕ್ ಉಚಿತ ಆರೋಗ್ಯ ತಪಾಸಣೆ ಶಿಬಿರದಲ್ಲಿ ಭಾಗವಹಿಸಿದ್ದವು.

ಕಾರ್ಯಕ್ರಮದಲ್ಲಿ ರೋಟರಿ ಕ್ಲಬ್ ಉಪಾಧ್ಯಕ್ಷ ಅರುಣ್ ಬಿ ನರಗುಂದ, ಕಾರ್ಯದರ್ಶಿ ರೊ.ಕೆ.ಆರ್.ಪುರುಷೋತ್ತಮ, ಖಜಾಂಚಿ ಅಶೋಕ ಕುಮಾರ್, ನಿರ್ಗಮಿತ ಅಧ್ಯಕ್ಷ ಅರುಣ್ ಕುಮಾರ್ ಎಸ್., ಕ್ಲಬ್ ಸೇವಾ ನಿರ್ದೇಶಕ ರೊ. ಸಿ.ವಿ ಮೋಹನ್ ಕುಮಾರ್, ವೃತ್ತಿಪರ ಸೇವಾ ನಿರ್ದೇಶಕರಾದ ವೈ.ಬಿ. ಶಶಿಭೂಷಣ್, ರಾಘವೇಂದ್ರ, ಸದಸ್ಯರಾದ ವರದಯ್ಯ, ಸದಾನಂದಮೂರ್ತಿ, ಚಂದ್ರಶೇಖರ ರಾವ್ ಪಟಾಲಕರ್, ಸಮೃದ್ಧಿ ಆಸ್ಪತ್ರೆಯ ವೈದ್ಯರಾದ ಡಾಕ್ಟರ್ ಸೌಮ್ಯ, ಶರತ್ ಕಣ್ಣಿನ ಆಸ್ಪತ್ರೆಯ ವೈದ್ಯರಾದ ಡಾ.ಕಲೆಂಜಲಿ ಮತ್ತು ಚಿನ್ಮಯ್ ಮಲ್ಟಿ ಸ್ಪೆಷಾಲಿಟಿ ಡೆಂಟಲ್ ಕ್ಲಿನಿಕ್ ನ ವೈದ್ಯರಾದ ಡಾಕ್ಟರ್ ಚಿನ್ಮಯ್ ಹಾಗೂ ಆಸ್ಪತ್ರೆಯ ಸಿಬ್ಬಂದಿಗಳು ಹಾಗೂ ಸಾರ್ವಜನಿಕರು ಹಾಜರಿದ್ದರು.

ಬನ್ನೂರಿನ ಶಂಕರೇಗೌಡ ದಂಪತಿಗೆ ದೆಹಲಿಯ ಗಣರಾಜ್ಯೋತ್ಸವಕ್ಕೆ ಆಹ್ವಾನ



ಬನ್ನೂರು, ಜ.24– ಪಟ್ಟಣದ ಸಮೀಪದ ಯಾಚೇನಹಳ್ಳಿ ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘದ ಅಧ್ಯಕ್ಷರು, 'ಸಹಕಾರಿ ರತ್ನ' ಪುರಸ್ಕೃತ ವೈ.ಎನ್. ಶಂಕರೇಗೌಡ ದಂಪತಿಯನ್ನು ದೆಹಲಿಯಲ್ಲಿ ನಡೆಯುವ ಗಣರಾಜ್ಯೋತ್ಸವ ಕಾರ್ಯಕ್ರಮಕ್ಕೆ ಆಹ್ವಾನಿಸಲಾಗಿದೆ.

ಗ್ರಾಮದ ಅಭಿವೃದ್ಧಿಯ ದೂರದೃಷ್ಟಿತ್ವವನ್ನು ಹೊಂದಿರುವ ವೈ.ಎನ್. ಶಂಕರೇಗೌಡರನ್ನು ನಬಾರ್ಡ್ ವತಿಯಿಂದ ಜನವರಿ 26 ರಂದು ದೆಹಲಿಯಲ್ಲಿ ನಡೆಯುವ ಗಣರಾಜ್ಯೋತ್ಸವ ಕಾರ್ಯಕ್ರಮಕ್ಕೆ ಆಹ್ವಾನಿಸಿರುವುದು ಯಾಚೇನಹಳ್ಳಿ ಗ್ರಾಮವನ್ನು ರಾಷ್ಟ್ರಮಟ್ಟಕ್ಕೆ ಕೊಂಡೊಯ್ದ ಕೀರ್ತಿಯನ್ನು ಉಂಟು ಮಾಡಿದ್ದಾರೆಂದು ಗ್ರಾಮದ ಮುಖಂಡರು, ವಿವಿಧ ಸಂಘ ಸಂಸ್ಥೆಯ ಪದಾಧಿಕಾರಿಗಳು ಮತ್ತು ಅಧ್ಯಕ್ಷ, ಉಪಾಧ್ಯಕ್ಷರುಗಳು, ಮುಖಂಡರು ಶಂಕರೇಗೌಡರನ್ನು ಅಭಿನಂದಿಸಿದ್ದಾರೆ.

ನಂಜನಗೂಡಲ್ಲಿ ಕುವೆಂಪು ಜನ್ಮದಿನ ಆಚರಣೆ

ಸದಾ ಜನಮಾನಸದಲ್ಲಿ ಉಳಿದಿರುವ ರಾಷ್ಟ್ರಕವಿ ಕುವೆಂಪು



ರಾಷ್ಟ್ರಕವಿ ಕುವೆಂಪು ಜನ್ಮ ದಿನೋತ್ಸವ ಸಮಾರಂಭವನ್ನು ಶಾಸಕ ದರ್ಶನ್ ಧ್ರುವನಾರಾಯಣ ಉದ್ಘಾಟಿಸಿದರು.

ನಂಜನಗೂಡು: ರಾಷ್ಟ್ರಕವಿ ಕುವೆಂಪು ಅವರು ಭೌತಿಕವಾಗಿ ಮರೆಯಾಗಿದ್ದರೂ ಅವರು ತಮ್ಮ ಸಾಹಿತ್ಯದ ಮೂಲಕ ಸಮಾಜಕ್ಕೆ ನೀಡಿರುವ ಮಹತ್ವದ ಕೊಡುಗೆಗಳಿಂದಾಗಿ ಸದಾ ಕಾಲಕ್ಕೂ ಜನಮಾನಸದಲ್ಲುಳಿದಿದ್ದಾರೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ ತಿಳಿಸಿದರು.

ಶನಿವಾರ ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಆಯೋಜಿಸಿದ್ದ ರಾಷ್ಟ್ರಕವಿ ಕುವೆಂಪು ಅವರ 122ನೇ ಜನ್ಮ ದಿನೋತ್ಸವ ಸಮಾರಂಭದ ಉದ್ಘಾಟನೆ ನೆರವೇರಿಸಿ ಮಾತನಾಡಿದರು.

ಜಾತಿ, ಮತ ಹಾಗೂ ಧರ್ಮಗಳ ಬೇಧವನ್ನು ಬದಿಗೊತ್ತಿ ಮನುಷ್ಯ ಜಾತಿ ಎಲ್ಲರೂ ಒಂದೇ ಎಂಬ ಸಂದೇಶವನ್ನು ನೀಡಿದ ಕುವೆಂಪು ಅವರ ಮಾನವತ್ವದ ಸಂದೇಶವನ್ನು ಸಮಾಜಕ್ಕೆ ತಿಳಿಸಬೇಕಿದ್ದು ಜೊತೆಗೆ ಸರಳ ಬದುಕಿಗೆ ಪ್ರೇರಣೆಯಾಗುವ ಮಂತ್ರಮಾಂಗಲ್ಯದಂತಹ ಕಾರ್ಯಕ್ರಮಗಳು ನಮ್ಮ ನಡುವೆ ಹೆಚ್ಚಾಗಬೇಕಿದೆ. ಪ್ರಸ್ತುತ ಸಮಾಜದಲ್ಲಿ ಕಂಡುಬರುವ ಅವ್ಯವಸ್ಥೆಗಳನ್ನು ಸರಿಪಡಿಸಲು ಹಾಗೂ ಜನರೆಲ್ಲರನ್ನೂ ಒಟ್ಟಾಗಿ ಕರೆದೊಯ್ಯಲು ಕುವೆಂಪು ಅವರ ವಿಚಾರಧಾರೆಗಳು ಹಾಗೂ ಚಿಂತನೆಗಳನ್ನು ಯುವ ಜನತೆಗೆ ಮುಟ್ಟಿಸಬೇಕಿದ್ದು ಈ ನಿಟ್ಟಿನಲ್ಲಿ ಕಸಾಪ ತಾಲೂಕು ಘಟಕದವರು ಉತ್ತಮ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು ಜೊತೆಗೆ ಸ್ಥಳೀಯರ ಬೇಡಿಕೆಯಂತೆ ಮುಂಬರುವ ದಿನಗಳಲ್ಲಿ ಕಸಾಪ ಚಟುವಟಿಕೆಗಳಿಗೆ ನೆರವಾಗುವಂತೆ ನಗರ ವ್ಯಾಪ್ತಿಯಲ್ಲಿ ಸಿಎ ನಿವೇಶನ ಒದಗಿಸಿಕೊಡುವುದಾಗಿ ಭರವಸೆ ನೀಡಿದರು.

ಇದೇ ಸಂದರ್ಭ ಕುವೆಂಪು ಜನ್ಮ ದಿನೋತ್ಸವದ ಪ್ರಯುಕ್ತ ಪ್ರೌಢಶಾಲೆ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಕುವೆಂಪು ಗೀತ ಗಾಯನ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಸಮಾರಂಭದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಘಟಕದ ಅಧ್ಯಕ್ಷೆ ಲತಾ ಮುದ್ದುಮೋಹನ್,ಮಾಜಿ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ, ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಮಹೇಶ್, ಕಸಾಪ ಗೌರವಾಧ್ಯಕ್ಷ ಸಿ. ಚಿಕ್ಕರಂಗನಾಯಕ, ಪುರಸಭೆ ಮಾಜಿ ಅಧ್ಯಕ್ಷ ಶ್ರೀಧರ್, ನಿವೃತ್ತ ಉಪ ತಹಸೀಲ್ದಾರ್ ಎಸ್‌ಎಲ್‌ಎಸ್ ಮೂರ್ತಿ, ಮಂಜುನಾಥ್, ರಂಗಸ್ವಾಮಿ,ಸತೀಶ್ ದಳವಾಯಿ ಮತ್ತಿತರರು ಭಾಗವಹಿಸಿದ್ದರು.

ಕೊತ್ತೇಗಾಲ ಡೇರಿ ಕಟ್ಟಡ, ಬಿಎಂಸಿ ಕೇಂದ್ರ ಉದ್ಘಾಟನೆ

ಹೈನುಗಾರಿಕೆ ಗ್ರಾಮೀಣ ಭಾಗದ ಆರ್ಥಿಕತೆಗೆ ಬಲ ತುಂಬಲಿದೆ



ಕೊತ್ತೇಗಾಲ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಕಟ್ಟಡ ಹಾಗೂ ಬಿಎಂಸಿ ಕೇಂದ್ರವನ್ನು ಶಾಸಕ ಅನಿಲ್ ಚಿಕ್ಕಮಾದು ಉದ್ಘಾಟಿಸಿದರು.

ಸರಗೂರು: ತಾಲೂಕಿನ ಕೊತ್ತೇಗಾಲ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಕಟ್ಟಡ ಹಾಗೂ ಬಿಎಂಸಿ ಕೇಂದ್ರವನ್ನು ಶಾಸಕ ಅನಿಲ್ ಚಿಕ್ಕಮಾದು ಉದ್ಘಾಟಿಸಿದರು.

ಈ ವೇಳೆ ಮಾತನಾಡಿದ ಅವರು, ಕೊತ್ತೇಗಾಲ ಗ್ರಾಮದ ಅಭಿವೃದ್ಧಿಗಾಗಿ ಹೆಚ್ಚು ಅನುದಾನ ನೀಡಲಾಗಿದೆ. ಹಾಗೆ ಗ್ರಾಮದಲ್ಲಿ ಬಿಎಂಸಿ ಕೇಂದ್ರ ಸ್ಥಾಪನೆಯಿಂದ ಹಾಲನ್ನು ಸಂಗ್ರಹಿಸಿ, ಶೀಥಲೀಕರಣಗೊಳಿಸಿ ಗುಣಮಟ್ಟ ಕಾಯ್ದುಕೊಂಡು ಉತ್ತಮ ಬೆಲೆಗೆ ಮಾರಾಟ ಮಾಡಲು ಸಹಕಾರಿಯಾಗಲಿದೆ, ಹೈನುಗಾರಿಕೆಯಿಂದ ಉತ್ತೇಜಿಸಿ ಗ್ರಾಮೀಣ ಭಾಗದ ಆರ್ಥಿಕತೆಗೆ ಬಲ ತುಂಬಲಿದೆ. ಕುಟುಂಬ ನಿರ್ವಹಣೆಗೆ ಅನುಕೂಲವಾಗಲಿದೆ. ಸಹಕಾರ ಸಂಘಗಳಿಂದ ಸಿಗುವ ಸೌಲಭ್ಯಗಳನ್ನು ಹಾಲು ಉತ್ಪಾದಕರು ಸದುಪಯೋಗಿಸಿಕೊಂಡು ಸಂಘದ ಅಭಿವೃದ್ಧಿಗೆ ಶ್ರಮಿಸಬೇಕು ಎಂದು ತಿಳಿಸಿದರು.

ಜಿಲ್ಲಾ ಹಾಲು ಒಕ್ಕೂಟದ ಅಧ್ಯಕ್ಷ ಕೆ. ಈರೇಗೌಡ ಮಾತನಾಡಿ ಗ್ರಾಮೀಣ ಭಾಗದ ಹಾಲು ಉತ್ಪಾದಕರು ಗುಣಮಟ್ಟದ ಹಾಲಿನ ಉತ್ಪಾದನೆಗೆ ಹೆಚ್ಚಿನ ಒತ್ತು ನೀಡಬೇಕು. ಹಾಲಿಗೆ ರಾಜಕೀಯ, ಜಾತಿ, ನೀರು, ಇವುಗಳನ್ನು ಬೆರಸಬಾರದು. ಈ ನಿಟ್ಟಿನಲ್ಲಿ ಹಾಲು ಉತ್ಪಾದಕರು ಸಂಘದ ಸೌಲಭ್ಯಗಳನ್ನು ಬಳಸಿಕೊಂಡು ಆರ್ಥಿಕವಾಗಿ ಮುಂದೆ ಬರಬೇಕು ಎಂದರು. ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಕಟ್ಟಡ ಹಾಗೂ ಬಿಎಂಸಿ ಕೇಂದ್ರದ ಉದ್ಘಾಟನೆ ಕಾರ್ಯಕ್ರಮದಲ್ಲಿ ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ ತಾಲೂಕು ಅಧ್ಯಕ್ಷ ಕಾಟವಾಳು ವೀರಭದ್ರಪ್ಪ, ಹಿಂದುಳಿದ ವರ್ಗದ ಬ್ಲಾಕ್ ಅಧ್ಯಕ್ಷ ಬೀರ್ವಾಳ್ ಚಿಕ್ಕಣ್ಣ, ಹಾಲು ಒಕ್ಕೂಟ ನಿರ್ದೇಶಕರಾದ ದ್ರಾಕ್ಷಾಯಿಣಿ ಬಸವರಾಜಪ್ಪ ಕೊತ್ತೇಗಾಲ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಎಂ.ಮಂಜುನಾಥ್, ಉಪಾಧ್ಯಕ್ಷೆ ಗಂಗಮ್ಮ ಮಹದೇವನಾಯಕ, ಜಿಲ್ಲಾ ಹಾಲು ಒಕ್ಕೂಟದ ವ್ಯವಸ್ಥಾಪಕರಾದ ಎಲ್.ಆರ್.ಕರಿಬಸವರಾಜು, ಜಿ.ಎನ್.ಸಂತೋಷ್, ವಿಸ್ತರಣಾಧಿಕಾರಿ ರಾಮಪ್ಪ ಬಾರ್ಕಿ, ಆರೀಫ್ ಇಕ್ಬಲ್, ಕೆ.ಆರ್.ಜಯಂತ್ ಕುಮಾರ್, ಪಿ.ಯೋಗೀಶ್, ಎಂ.ವೈ.ಜಗದಾಂಬ, ನರಸಿಂಹಮೂರ್ತಿ, ಸಂಘದ ನಿರ್ದೇಶಕರಾದ ಡಿ.ರತ್ನಯ್ಯ, ಕೆ.ಎಂ.ಪುಟ್ಟೇಗೌಡ, ಕೆಂಡಗಣ್ಣಸ್ವಾಮಿ, ಕೆ.ಎಸ್.ಮಹದೇವಪ್ಪ ಇದ್ದರು.

ಪೊಲೀಸ್ ಮುಖ್ಯ ಪೇದೆಗೆ ಪಿಹೆಚ್.ಡಿ ಪದವಿ



ಮೂಗೂರು: ದಾವಣಗೆರೆ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಶೋಧನಾ ವಿಭಾಗದ ಡಾ.ಶಾಂತರಾಜು ಹೆಚ್.ವಿ. ಅವರ ಮಾರ್ಗದರ್ಶನದಲ್ಲಿ ಮೂಗೂರು ಪೊಲೀಸ್ ಉಪಠಾಣೆಯಲ್ಲಿ ಮುಖ್ಯ ಪೇದೆಯಾಗಿರುವ ಟಿ.ಎಚ್.ಸುರೇಶ್ ಅವರು ಪ್ರೊ.ಪದ್ಮಶೇಖರ್ ಬದುಕು–ಬರಹ ಒಂದು ಅಧ್ಯಯನ ಎಂಬ ವಿಷಯದ ಕುರಿತು ಸಾದರಪಡಿಸಿದ ಮಹಾ ಪ್ರಬಂಧವನ್ನು ಪಿಎಚ್.ಡಿ ಪದವಿಗೆ ದಾವಣಗೆರೆ ವಿಶ್ವವಿದ್ಯಾಲಯ ಅಂಗೀಕರಿಸಲಾಗಿದೆ.

ಅಖಿಲ ಕರ್ನಾಟಕ ಡಾ.ಹೆಚ್.ಸಿ.ಮಹದೇವಪ್ಪ ಅಭಿಮಾನಿ ಬಳಗ 8ನೇ ವಾರ್ಷಿಕೋತ್ಸವದ ಪೂರ್ವಭಾವಿ ಸಭೆ



ತಿ.ನರಸೀಪುರ, ಜ.24– ಫೆಬ್ರವರಿ 6ರಂದು ನಡೆಯಲಿರುವ ಅಖಿಲ ಕರ್ನಾಟಕ ಡಾ.ಹೆಚ್.ಸಿ.ಮಹದೇವಪ್ಪ ಅವರ ಅಭಿಮಾನಿ ಬಳಗ ರಾಜ್ಯ ಸಮಿತಿಯ 8ನೇ ವರ್ಷದ ವಾರ್ಷಿಕೋತ್ಸವ ಹಾಗೂ ಜಿಲ್ಲಾ ಮತ್ತು ತಾಲೂಕು ಅಧ್ಯಕ್ಷರುಗಳ ಪದಗ್ರಹಣ ಮತ್ತು ವಿವಿಧ ಕ್ಷೇತ್ರದ ಸಾಧಕರಿಗೆ ಸನ್ಮಾನ ಸಮಾರಂಭದ ಪೂರ್ವಭಾವಿ ಸಭೆಯನ್ನು ರಾಜ್ಯ ಅಧ್ಯಕ್ಷರಾದ ಹಿನಕಲ್ ನಂಜುಂಡ ಅವರ ನೇತೃತ್ವದಲ್ಲಿ ನಡೆಸಲಾಯಿತು.

ಈ ಸಂದರ್ಭದಲ್ಲಿ ಕಾರ್ಯಧ್ಯಕ್ಷರಾದ ಡಾ.ಕೆ.ಎನ್.ಬಸವರಾಜು, ಉಪಾಧ್ಯಕ್ಷ ಕಡಕೋಳ ಭರತ್, ಪ್ರಧಾನ ಕಾರ್ಯದರ್ಶಿ ಬೆನಕನಹಳ್ಳಿ ನಾಗರಾಜು, ಮಾಧ್ಯಮ ಸಲಹೆಗಾರರಾದ ಮಂಜುನಾಥ್ ಕೋಟೆ, ಕಾರ್ಯದರ್ಶಿ ಮಹೇಶ್, ನಿರ್ದೇಶಕರಾದ ಮಾವಿನಹಳ್ಳಿ ನಾಗೇಶ್, ಬೆನಕನಹಳ್ಳಿ ಹರೀಶ್, ಹುಲ್ಲಹಳ್ಳಿ ಬಾಬು, ಮೈಸೂರು ಜಿಲ್ಲಾ ಅಧ್ಯಕ್ಷ ಕಗ್ಗಲಿಪುರ ಮಧುಕುಮಾರ್ ಹಾಗೂ ಜಿಲ್ಲಾ ಮತ್ತು ತಾಲೂಕು ಅಧ್ಯಕ್ಷರುಗಳು ಉಪಸ್ಥಿತರಿದ್ದರು.

ಅನ್ನಸಂತರ್ಪಣೆಗೆ ದೇಣಿಗೆ



ಮೈಸೂರು ತಾಲೂಕು ಜಯಪುರ ಗ್ರಾಮದ ಶ್ರೀ ಸಿದ್ದಪ್ಪಾಜಿ ರಸ್ತೆಯ ಬಡಾವಣೆಯಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಆದಿಶಕ್ತಿ ದೇವಾಲಯ ಜ.30ರಂದು ಉದ್ಘಾಟನೆಯಾಗಲಿರುವ ಹಿನ್ನೆಲೆಯಲ್ಲಿ ಅನ್ನಸಂತರ್ಪಣೆಗೆ ಉದ್ಯಮಿ ಜಯಪುರ ಮೋಹಿಯುದ್ದಿನ್ ಅವರು ವೈಯುಕ್ತಿಕವಾಗಿ 25 ಸಾವಿರ ರೂ. ದೇಣಿಗೆ ನೀಡಿದರು. ಗ್ರಾಮದ ಮುಖಂಡರಾದ ಎಂ.ಮಾದೇವಯ್ಯ, ಚಿಕ್ಕಸಿದ್ದಯ್ಯ, ನಂಜುಂಡಸ್ವಾಮಿ, ಯಜಮಾನ್ ರಾಜಣ್ಣ, ಆಟೋ ಸ್ವಾಮಿ,ರಂಗಣ್ಣ, ಶಿವಸ್ವಾಮಿ ಉಪಸ್ಥಿತರಿದ್ದರು.

ಜ.27, ಹೆಚ್.ಡಿ.ಕೋಟೆಯಲ್ಲಿ ಹಿಂದೂ ಸಮಾಜೋತ್ಸವ



ಸಮಾಜೋತ್ಸವ ಸಂಯೋಜಕ ಜೆ.ಬಿ.ಶಿವಸ್ವಾಮಿ ಮಾತನಾಡಿದರು.

ಹೆಚ್.ಡಿ.ಕೋಟೆ: ಹೆಚ್.ಡಿ.ಕೋಟೆಯಲ್ಲಿ ಜ.27ರಂದು ಹಿಂದೂ ಸಮಾಜೋತ್ಸವ ಕಾರ್ಯಕ್ರಮ ನಡೆಯಲಿದ್ದು, ಈ ಕಾರ್ಯಕ್ರಮವು ಹಿಂದೂ ಸಮಾಜದ ಒಗ್ಗೂಡುವಿಕೆಗಾಗಿ ಆಯೋಜಿಸಲಾಗಿದೆ ಎಂದು ಹಿಂದೂ ಸಮಾಜೋತ್ಸವ ಕಾರ್ಯಕ್ರಮದ ಸಂಯೋಜಕ ಜೆ.ಬಿ.ಶಿವಸ್ವಾಮಿ ತಿಳಿಸಿದರು.

ಪಟ್ಟಣದ ಪತ್ರಿಕಾ ಕಚೇರಿಯಲ್ಲಿ ನಡೆದ ಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು ಅಂದು ಚಾಮುಂಡೇಶ್ವರಿ ದೇವಾಲಯದಿಂದ ಮೆರವಣಿಗೆಯು ಮಧ್ಯಾಹ್ನ 2 ಗಂಟೆಗೆ ಹೊರಟು ಪ್ರಮುಖ ಬೀದಿಗಳಲ್ಲಿ ಸಾಗಿ ಬಾಪೂಜಿ ವೃತ್ತದ ಹಳೇ ಆಸ್ಪತ್ರೆ ಆವರಣಕ್ಕೆ ಬಂದು ಸೇರಲಿದೆ ಮೆರವಣಿಗೆಯು ಗೋಪೂಜೆಯೊಂದಿಗೆ ಆರಂಭವಾಗಲಿದ್ದು, ನಂದಿ ಕಂಭ, ವೀರ ಗಾಸೆ, ಮಂಗಳವಾದ್ಯ ಮೆರವಣಿಗೆಗೆ ಮೆರಗು ತುಂಬಲಿದೆ. ಮೆರವಣಿಗೆಯಲ್ಲಿ ನೂರಕ್ಕೂ ಹೆಚ್ಚು ಮಹಿಳೆಯರು ಕಳಶಗಳನ್ನು ಹೊತ್ತು ಸಾಗಲಿದ್ದಾರೆ ಎಂದರು.

ಮಧ್ಯಾಹ್ನ 3.30 ಗಂಟೆಗೆ ವೇದಿಕೆ ಕಾರ್ಯಕ್ರಮ ನಡೆಯಲಿದ್ದು ಪಡವಲು ವಿರಕ್ತಮಠದ ಮಹದೇವಸ್ವಾಮಿಜಿ ದಿವ್ಯ ಸಾನಿಧ್ಯವನ್ನು ವಹಿಸಿಕೊಳ್ಳಲಿದ್ದು, ಹಿಂದೂ ಜಾಗರಣಾ ವೇದಿಕೆ ಪ್ರಾಂತ ಪ್ರಮುಖ್ ಉಲ್ಲಾಸ್ ದಿಕ್ಕೂಚಿ ಭಾಷಣ ಮಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಬಸವೇಶ್ವರ ಅಭಿವೃದ್ಧಿ ಸಹಕಾರ ಸಂಘದ ನಿರ್ದೇಶಕ ಸಿ.ಎನ್.ನಾಗಣ್ಣ ಭಾಗವಹಿಸಲಿದ್ದಾರೆ.

ಸಾಮಾಜಿಕ ಸಾಮರಸ್ಯ, ಪರ್ಯಾವರಣ ಸಂರಕ್ಷಣೆ, ಸ್ವದೇಶಿ ಭಾವ ಜಾಗರಣೆ, ಕುಟುಂಬ ಪ್ರಬೋಧನ ಮತ್ತು ನಾಗರಿಕ ಕರ್ತವ್ಯದ ಕುರಿತು ಹಿಂದು ಸಮಾಜೋತ್ಸವವನ್ನು ಆಯೋಜಿಸಲಾಗಿದೆ. ರಾಷ್ಟ್ರೀಯ ಸ್ವಯಂ ಸೇವಾ ಸಂಘಕ್ಕೆ 100 ವರ್ಷ ತುಂಬಿದ ಹಿನ್ನಲೆ ಈ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದರು.

ಜ.18ರಿಂದ ಫೆ.2ರವರಗೆ ದೇಶದಾದ್ಯಂತ ಎಲ್ಲಾ ಪಂಚಾಯಿತಿ ಮಟ್ಟದಲ್ಲಿ ಹಿಂದೂ ಸಮಾಜೋತ್ಸವ ಸಮಾವೇಶ ನಡೆಯಲಿದೆ ಎಂದರು. ಹೆಚ್.ಡಿ.ಕೋಟೆ ತಾಲೂಕಿನಲ್ಲಿ ಜ.25ರಂದು ಟೈಗರ್ ಬ್ಲಾಕ್, ಜ.26 ಹಂಪಾಪುರದಲ್ಲಿ, ಜ.27 ರಂದು ಹೆಚ್.ಡಿ.ಕೋಟೆ ಪಟ್ಟಣದಲ್ಲಿ, ಜ.30 ಬಿ.ಮಟಕೆರೆ, ಜ.31 ರಂದು ಸರಗೂರು, ಫೆ.1 ಮಚ್ಚೂರಿನ ಹೊಸೂರಿನಲ್ಲಿ ಮತ್ತು ಮುಳ್ಳೂರಿನಲ್ಲಿ ಆಯೋಜಿಸಲಾಗಿದೆ ಎಂದು ತಿಳಿಸಿದರು.

ಸಹಸಂಯೋಜಕ ಪೂರ್ಣೇಶ್, ಸಂಘಟನಾ ಕಾರ್ಯದರ್ಶಿ ರಾಜು, ಸುಬ್ರಹ್ಮಣ್ಯ, ಪುಟ್ಟಣ್ಣ, ಮಣಿರಾಜು ಇದ್ದರು.

ಗೌರಿ ಸತ್ಯರ 'ಮೈಸೂರಿನ ಅಸಾಮಾನ್ಯರು' ಕೃತಿ ಒಂದು ಸಂಶೋಧನಾ ಗ್ರಂಥದಂತಿದೆ

ಜೆಎಸ್‌ಎಸ್ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜಿ.ಬೆಟಸೂರ ಮಠ ಶ್ಲಾಘನೆ

ಮೈಸೂರು, ಜ.24(ಎಂಟಿವೈ)– ಮೈಸೂರು ಸಂಸ್ಥಾನದ ಸಮಗ್ರ ಅಭಿವೃದ್ಧಿಗೆ ದಿವಾನರು, ಹವಾಲ್ದಾರರು ಸೇರಿದಂತೆ ಇತರೆ ವರ್ಗದವರ ನಿಸ್ವಾರ್ಥ ಸೇವೆ ಮತ್ತು ಶ್ರಮವೇ ಕಾರಣ. ಹಿರಿಯ ಪತ್ರಕರ್ತರಾದ ಗೌರಿ ಸತ್ಯ ಅವರು 'ಮೈಸೂರು ಮಿತ್ರ'ನ ಅವರ ಅಂಕಣದಲ್ಲಿ ಪ್ರಕಟವಾದ ಲೇಖನಗಳ ಸಂಗ್ರಹ 'ಮೈಸೂರಿನ ಅಸಾಮಾನ್ಯರು' ಕೃತಿಯಲ್ಲಿ ಮೈಸೂರು ಸಂಸ್ಥಾನದ ಇಂತಹ ಅಸಾಮಾನ್ಯರ ಬಗ್ಗೆ ಅತ್ಯುತ್ತಮವಾಗಿ ವಿವರಿಸಿದ್ದಾರೆ ಎಂದು ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ ಮಠ ಶ್ಲಾಘಿಸಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಸಭಾಂಗಣದಲ್ಲಿ ಮೈಸೂರು ಬುಕ್ ಕ್ಲಬ್ಸ್ ಚಾರಿಟಬಲ್ ಟ್ರಸ್ಟ್ ಹಾಗೂ ಕನ್ನಡ ಓದುಗರ ಒಕ್ಕೂಟದ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ, ಲೇಖಕ ಗೌರಿ ಸತ್ಯ ಅವರ 'ಮೈಸೂರಿನ ಅಸಾಮಾನ್ಯರು' ಕೃತಿ ಬಿಡುಗಡೆ ಮಾಡಿ ಮಾತನಾಡಿದ ಅವರು, ಮೈಸೂರು ಸಂಸ್ಥಾನದಲ್ಲಿ ಆಳ್ವಿಕೆ ನಡೆಸಿದ ಹಲವು ಮಹಾರಾಜರ ಕಾಲದಲ್ಲಿ ಮೈಸೂರು ಸಂಸ್ಥಾನದ ಅಭಿವೃದ್ಧಿಗೆ ಅಂದಿನ ದಿವಾನರು, ಹವಾಲ್ದಾರರು, ಇಂಜಿನಿಯರ್ ಸೇರಿದಂತೆ ವಿವಿಧ ವರ್ಗದ ಅಧಿಕಾರಿಗಳು ಕಾರಣರಾಗಿದ್ದಾರೆ. ಇವರೆಲ್ಲರ ಶ್ರಮದ ಫಲವಾಗಿ ಮೈಸೂರು ಸಂಸ್ಥಾನದ ಮಹಾರಾಜರು ಮತ್ತಷ್ಟು ಹೆಸರು ಗಳಿಸುವಂತಾಯಿತು ಎಂದರು.



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಸಭಾಂಗಣದಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ, ಲೇಖಕ ಗೌರಿ ಸತ್ಯ ಅವರ 'ಮೈಸೂರಿನ ಅಸಾಮಾನ್ಯರು' ಕೃತಿಯನ್ನು ಜೆಎಸ್‌ಎಸ್ ವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ ಮಠ ಬಿಡುಗಡೆ ಮಾಡಿದರು

ಮೈಸೂರು ಸಂಸ್ಥಾನದ ಮಹಾರಾಜರು ಹೊರತುಪಡಿಸಿದರೆ ನಮಗೆ ದಿವಾನರಾಗಿದ್ದ ಪೂರ್ಣಯ್ಯ, ಮಿರ್ಜಾ ಇಸ್ಮಾಯಿಲ್, ವಿಶ್ವೇಶ್ವರಯ್ಯ ಅವರಷ್ಟೇ ನಮಗೆ ಗೊತ್ತು. ಆದರೆ ಸಂಸ್ಥಾನದ ಅಭಿವೃದ್ಧಿಗೆ ಅನೇಕ ದಿವಾನರು ಶ್ರಮಿಸಿದ್ದಾರೆ. ಕಂದಾಯ ವಿಭಾಗದಲ್ಲಿ ದಿವಾನ್ ಪೂರ್ಣಯ್ಯ ಅತ್ಯುತ್ತಮವಾಗಿ ಕರ್ತವ್ಯ ನಿರ್ವಹಿಸಿದ್ದರಿಂದ ಅವರ ಹೆಸರು ಎಲ್ಲರಿಗೂ ಗೊತ್ತು ಚಾಮರಾಜನಗರದಲ್ಲಿ ದಿವಾನ್ ಪೂರ್ಣಯ್ಯ ಅವರ ಗ್ರಂಥಾಲಯವೂ ಇದೆ. ಇದರ ನಡುವೆ ಅನೇಕ ದಿವಾನರ ಬಗ್ಗೆ ಜನರಿಗೆ ಮಾಹಿತಿ ಇಲ್ಲ. ಹಾಗೆಯೇ ಸಂಸ್ಥಾನದಲ್ಲಿದ್ದ ಹವಾಲ್ದಾರರು ಹಾಗೂ ಅವರ ಕೈಕೆಳಗೆ ಕೆಲಸ ಮಾಡುತ್ತಿದ್ದ ಅಧಿಕಾರಿ ವರ್ಗದ ಬಗ್ಗೆ ಜನರಿಗೆ ಮಾಹಿತಿಯೇ ಇಲ್ಲ. ಈ ಎಲ್ಲಾ ಅಧಿಕಾರಿ ವರ್ಗದಿಂದ ಮೈಸೂರು ಸಂಸ್ಥಾನ ರಾಮರಾಜ್ಯದಂತಾಗಲು ಸಾಧ್ಯವಾಗಿದೆ ಎಂದು ಅಭಿಪ್ರಾಯಪಟ್ಟರು.

ಎಲೆ ಮರೆ ಕಾಯಿಯಂತೆ ದುಡಿದವರನ್ನು ಜನರಿಗೆ ಪರಿಚಯಿಸುವ ನಿಟ್ಟಿನಲ್ಲಿ ಗೌರಿ ಸತ್ಯ ಅವರು ತಮ್ಮ 'ಮೈಸೂರಿನ ಸಂಸ್ಥಾನದ ಅಸಾಮಾನ್ಯರು' ಕೃತಿಯಲ್ಲಿ ಬೆಳಕು ಚೆಲ್ಲಿದ್ದಾರೆ. ಈ ಹಿಂದೆ 'ಮೈಸೂರು ಮಿತ್ರ'ದಲ್ಲಿ ಸರಣಿ ಲೇಖನ ಬರೆದಿದ್ದು, ಆ ಲೇಖನಗಳ ಸಂಗ್ರಹವನ್ನೇ ಕೃತಿಯಾಗಿ ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ಸಂಸ್ಥಾನದ ಅಭಿವೃದ್ಧಿಗೆ ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ದುಡಿದವರ ಬಗ್ಗೆ, ಅವರ ಹುಟ್ಟಿನಿಂದ ಕೊನೆಯವರೆಗೆ ಮಾಡಿದ ಕಾರ್ಯಗಳ ಬಗ್ಗೆಯೂ ಬರೆದಿದ್ದಾರೆ. ಇದೊಂದು ಸಂಶೋಧನಾ ಗ್ರಂಥದಂತೆ ಇದ್ದು, ಅನೇಕ ಮಹನೀಯರ ಗ್ರಂಥ ಹಾಗೂ ಕೆಲವರಿಂದ ಚಿತ್ರ ಸಹಿತ ಮಾಹಿತಿ ಸಂಗ್ರಹಿಸಿ ಕೃತಿಯಲ್ಲಿ ವಿವರಿಸಿದ್ದಾರೆ ಎಂದು ತಿಳಿಸಿದರು.

ಅಲ್ಲದೆ, ಮಹಿಳಾ ಶಿಕ್ಷಣಕ್ಕೆ ಒತ್ತು ನೀಡಿದ ಮಹನೀಯರು, ಹವಾಲ್ದಾರರ ಅಧಿಕಾರ, ಸಂಸ್ಥಾನದ ಇಂಜಿನಿಯರ್, ವೈದ್ಯರು ಹಾಗೂ ಜೈಲ್ ಸೂಪರಿಂಟೆಂಡೆಂಟ್‌ಗಳ ಬಗ್ಗೆಯೂ ಈ ಕೃತಿಯಲ್ಲಿ ಮಾಹಿತಿ ಇದೆ ಎಂದರು.

ಈ ವೇಳೆ ಮೈಸೂರು ಬುಕ್ ಕ್ಲಬ್ಸ್ ಚಾರಿಟಬಲ್ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಶುಭ ಸಂಜಯ್ ಅರಸ್ ಕೃತಿಯನ್ನು ಸ್ವೀಕರಿಸಿದರು. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಾದ ಡಾ.ಜ್ಯೋತಿ ಶಂಕರ್ ಕೃತಿ ಕುರಿತು ಮಾತನಾಡಿದರು. ಕಾರ್ಯಕ್ರಮದಲ್ಲಿ ಕೃತಿ ಕರ್ತೃ, ಹಿರಿಯ ಪತ್ರಕರ್ತ ಗೌರಿ ಸತ್ಯ ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಬಾರ್ಡರ್–2 (ಹಿ)	3 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಲ್ಯಾಂಡ್‌ಲಾರ್ಡ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಬಾರ್ಡರ್–2 (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
45 ಫೇಸ್ ದಿ ಇಯರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲ್ಯಾಂಡ್ ಲಾರ್ಡ್ (ಕ)	4 ಪ್ರದರ್ಶನಗಳು
ರಾಜಕಮಲ್	
ಜಾಕಿ (ತ) + ಹಾಟ್‌ಸ್ಪಾಟ್ (ತ)	2+2 ಪ್ರದರ್ಶನಗಳು
ಸಂಗಂ	
ಕಲ್ಟ್ (ಕ)	4 ಪ್ರದರ್ಶನಗಳು
ಲಿಡೋ	
ಡೆವಿಲ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
---	---

ಬೃಹತ್ ಮೈಸೂರು ಮಹಾನಗರ ಪಾಲಿಕೆ ರಚನೆ ವೈಖರಿಗೆ ಸಿಎಂ ಸ್ವಕ್ಷೇತ್ರದಲ್ಲೇ ಅಪಸ್ವರ

ವರುಣ ಕ್ಷೇತ್ರ ಕೈಬಿಟ್ಟಿದ್ದಕ್ಕೆ ಸಾರ್ವಜನಿಕರ ಅಸಮಾಧಾನ; ಆಕ್ಷೇಪಣೆ ಸಲ್ಲಿಕೆಗೆ ನಿರ್ಧಾರ; ಹೋರಾಟಕ್ಕೂ ಸಿದ್ಧತೆ



ಬೃಹತ್ ಮೈಸೂರು ಮಹಾನಗರ ಪಾಲಿಕೆ ಅಧಿಸೂಚನೆಯಲ್ಲಿ ವರುಣ ಕೈಬಿಟ್ಟಿರುವ ಸಂಬಂಧ ಕ್ಷೇತ್ರದ ಮುಖಂಡರು ಸಭೆ ನಡೆಸಿ, ಚರ್ಚಿಸಿದರು.

ಮೈಸೂರು, ಜ.24– 'ಬೃಹತ್ ಮೈಸೂರು ಮಹಾನಗರ ಪಾಲಿಕೆ' ರಚನೆ ಅಧಿಸೂಚನೆಗೆ ಆಕ್ಷೇಪಣೆ ಸಲ್ಲಿಸಲು ಮುಖ್ಯಮಂತ್ರಿ ಸ್ವಕ್ಷೇತ್ರ ವರುಣ ಮುಖಂಡರು ನಿರ್ಧರಿಸಿದ್ದಾರೆ.

'ಬೃಹತ್ ಮೈಸೂರು ಮಹಾನಗರ ಪಾಲಿಕೆ' ವ್ಯಾಪ್ತಿಗೆ ವರುಣ ಹೋಬಳಿ ಸೇರಿಸದಿರುವ ಸಂಬಂಧ ಚರ್ಚಿಸಲೆಂದು ಇಂದು ಚಿಕ್ಕಹಳ್ಳಿ ದೊಡ್ಡ ಆಲದ ಮರದ ಬಳಿ ಇರುವ ಖಾಸಗಿ ಇಂಜಿನಿಯರಿಂಗ್ ಕಾಲೇಜು ಸಭಾಂಗಣದಲ್ಲಿ ಮುಖಂಡ ಶರತ್ ಪುಟ್ಟಬುದ್ಧಿ ನೇತೃತ್ವದಲ್ಲಿ ಆಯೋಜಿಸಿದ್ದ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ.

ಸಭೆಯಲ್ಲಿ ಶರತ್ ಪುಟ್ಟಬುದ್ಧಿ ಮಾತನಾಡಿ, ರಾಜ್ಯ ಸರ್ಕಾರವು ಬೃಹತ್ ಮೈಸೂರು ಮಹಾನಗರ ಪಾಲಿಕೆ ರಚನೆ ಸಂಬಂಧ ಜ.೨ರಂದು ಪ್ರಕಟಿಸಿರುವ ಅಧಿಸೂಚನೆಯಲ್ಲಿ ವರುಣ ಹೋಬಳಿ ಪ್ರದೇಶಗಳನ್ನು ಕೈಬಿಟ್ಟಿರುವುದು ಬೇಸರದ ಸಂಗತಿ. ಈ ಅವೈಜ್ಞಾನಿಕ ನಿರ್ಧಾರವನ್ನು ಪರಿಷ್ಕರಿಸಿ, ವರುಣ ಪ್ರದೇಶಗಳನ್ನೂ ಸೇರ್ಪಡೆ ಮಾಡಲೇಬೇಕು ಎಂದು ಆಗ್ರಹಿಸಿದರು.

ಮೈಸೂರಿನ ಪಶ್ಚಿಮ ದಿಕ್ಕಿನಲ್ಲಿ ಸುಮಾರು 20 ಕಿಲೋಮೀಟರ್ ದೂರ ಇರುವ ಇಲವಾಲ, ನಾಗವಾಲ, ಬೀರಿಹುಂಡಿ ಪಂಚಾಯ್ತಿ ವ್ಯಾಪ್ತಿಯ ಗ್ರಾಮಗಳನ್ನು ಬೃಹತ್ ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸೇರಿಸಲಾಗಿದೆ. ಆದರೆ ಪೂರ್ವ ದಿಕ್ಕಿನಲ್ಲಿ ನಗರಕ್ಕೆ ಹತ್ತಿರದಲ್ಲಿರುವ ಮುಖ್ಯಮಂತ್ರಿಗಳ ಸ್ವಕ್ಷೇತ್ರವನ್ನು ಕೈಬಿಡಲಾಗಿದೆ. ವರುಣ ವಿಧಾನಸಭಾ ವ್ಯಾಪ್ತಿಯ ಮೊಸಬಾಯನಹಳ್ಳಿ, ವರುಣ, ವಾಜಮಂಗಲ, ದೇವಲಾಪುರ ಪಂಚಾಯ್ತಿ ವ್ಯಾಪ್ತಿಯ ಗ್ರಾಮಗಳು, ಮುಡಾ ಹಾಗೂ ಖಾಸಗಿ ಬಡಾವಣೆಗಳನ್ನು ಕಡೆಗಾಣಿಸಲಾಗಿದೆ. ಎಲ್ಲಾ ಮಾನದಂಡಗಳನ್ವಯ ಅರ್ಹವಾಗಿದ್ದರೂ ಈ ಪ್ರದೇಶಗಳನ್ನು ಯೋಜನೆಯಿಂದ ಕೈಬಿಟ್ಟಿರುವುದಕ್ಕೆ ಕಾರಣವೇನು ಎಂಬುದೇ ಯಕ್ಷಪ್ರಶ್ನೆಯಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಸಭೆಯಲ್ಲಿ ಭಾಗವಹಿಸಿದ್ದ ವಿವಿಧ ಗ್ರಾಮ ಹಾಗೂ ಬಡಾವಣೆಗಳ ನಿವಾಸಿಗಳು, ವರುಣ ಹೋಬಳಿ ಪ್ರದೇಶಗಳನ್ನು ಸರ್ಕಾರವು ಬೃಹತ್ ಮೈಸೂರು ಮಹಾನಗರ ಪಾಲಿಕೆಗೆ ಸೇರ್ಪಡೆ ಮಾಡುವವರೆಗೂ ಹೋರಾಟ ನಡೆಸಬೇಕು ಎಂದು ಅಭಿಪ್ರಾಯಿಸಿದರು. ಅಂತಿಮವಾಗಿ ಸರ್ಕಾರದ ಅಧಿಸೂಚನೆ ಸಂಬಂಧ ಅಂತಿಮ ಗಡುವಿನೊಳಗೆ ಪೌರಾಡಳಿತ ನಿರ್ದೇಶನಾಲಯಕ್ಕೆ ಸಲಹೆ ಹಾಗೂ ಆಕ್ಷೇಪಣೆ ಸಲ್ಲಿಸಿ, ಜಿಲ್ಲಾ ಉಸ್ತುವಾರಿ ಸಚಿವರು ಸೇರಿದಂತೆ ಎಲ್ಲಾ ಜನಪ್ರತಿನಿಧಿಗಳನ್ನು ಆಗ್ರಹಿಸಲು ತೀರ್ಮಾನಿಸಲಾಯಿತು. ಒಂದು ವೇಳೆ ಸಕಾರಾತ್ಮಕ ಸ್ಪಂದನೆ ಸಿಗದಿದ್ದರೆ 'ಬೃಹತ್ ಮೈಸೂರು ಮಹಾನಗರ ಪಾಲಿಕೆ ಹೋರಾಟ ಸಮಿತಿ' ರಚಿಸಿಕೊಂಡು ಹೋರಾಟ ಮುಂದುವರೆಸಲು ನಿರ್ಧರಿಸಲಾಯಿತು.

ಸಭೆಯಲ್ಲಿ ಜಿಲ್ಲಾ ಪರಿಷತ್ ಮಾಜಿ ಅಧ್ಯಕ್ಷ ಕೆ.ಎನ್.ಪುಟ್ಟಬುದ್ಧಿ, ಮೈಸೆಮ್ ಇಂಜಿನಿಯರಿಂಗ್ ಕಾಲೇಜು ಅಧ್ಯಕ್ಷ ಶಿವಪ್ಪ, ಟ್ರಸ್ಟಿ ಕಿಶೋರ್ ಬಿದ್ದಪ್ಪ, ಮಾಜಿ ಮೇಯರ್ ದಕ್ಷಿಣಮೂರ್ತಿ, ಮಂಜುನಾಥ್, ಜಿಪಂ ನಿವೃತ್ತ ಸಿಇಒ ಶಿವಕುಮಾರ್, ಚಿಕ್ಕಹಳ್ಳಿ ಕೃಷ್ಣಮೂರ್ತಿ, ಮಾದಪ್ಪ ಪ್ರವೀಣ್, ಸಿದ್ಧಾರ್ಥ, ಶಿವಸ್ವಾಮಿ, ಲೋಹಿತ್, ವಾಸುದೇವನ್, ಜಯರಾಮ್ ಮತ್ತಿತರರು ಪಾಲ್ಗೊಂಡಿದ್ದರು.

ಹಿಂದೂ ಒಂದಾದರೆ ನಮ್ಮ ಸಂಸ್ಕೃತಿ, ಪರಂಪರೆ ಉಳಿವು

ಆದಿಚುಂಚಗಿರಿ ಮೈಸೂರು ಶಾಖಾ ಮಠದ ಶ್ರೀಗಳ ಕಿವಿಮಾತು

ಮೈಸೂರು, ಜ.24(ಎಸ್‌ಪಿಎನ್)– ಹಿಂದೂ ಧರ್ಮದ ಕುರಿತು ಪ್ರತಿಯೊಬ್ಬ ವ್ಯಕ್ತಿಯಲ್ಲೂ ಅರಿವು ಮೂಡಿಸಬೇಕು. ಇದರಿಂದ ನಮ್ಮತನ, ನಮ್ಮ ಸಂಸ್ಕೃತಿ ಹಾಗೂ ಪರಂಪರೆ ಉಳಿವಿಗೆ ಸಹಕಾರಿಯಾಗುತ್ತದೆ ಎಂದು ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಅಭಿಪ್ರಾಯಪಟ್ಟರು.



ಹಿಂದೂ ಸಮಾಜೋತ್ಸವ ಕಾರ್ಯಕ್ರಮದಲ್ಲಿ ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ದೇವಾಲಯ ಸಂವರ್ಧನಾ ಸಮಿತಿಯ ಪ್ರಚಾರಕ್ ಮನೋಹರ್, ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಕೆ.ಬಿ.ಲಿಂಗರಾಜು ಉಪಸ್ಥಿತರಿದ್ದರು.

ಮೈಸೂರು ಕುಂಬಾರಕೊಪ್ಪಲಿನ ಶ್ರೀ ಮಹದೇಶ್ವರ ದೇವಸ್ಥಾನ ಆವರಣದಲ್ಲಿ ಹಿಂದು ಸಮಾಜೋತ್ಸವ ಸಮಿತಿ ವತಿಯಿಂದ ಏರ್ಪಡಿಸಿದ್ದ ಹಿಂದೂ ಸಮಾಜೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದರು.

ಆರ್‌ಎಸ್‌ಎಸ್‌ಗೆ ನೂರು ವರ್ಷ ತುಂಬಿದ ಹಿನ್ನಲೆಯಲ್ಲಿ ಮೈಸೂರಿನ ಎಲ್ಲಾ ಮೊಹಲ್ಲಾಗಳಲ್ಲೂ ಹಿಂದೂ ಸಮಾಜೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳುವ ಮೂಲಕ ಹಿಂದೂಗಳಲ್ಲಿ ಜಾಗೃತಿ, ಒಗ್ಗಟ್ಟು ಮೂಡಿಸುತ್ತಿರುವುದು ಸಂತೋಷದ ಸಂಗತಿ ಎಂದ ಶ್ರೀಗಳು, ಆರ್‌ಎಸ್‌ಎಸ್ ನೂರು ವರ್ಷಗಳಲ್ಲಿ ಹಿಂದೂ ಸಮಾಜದ ಉಳಿವಿಗಾಗಿ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜಾಗೃತಿ ಮೂಡಿಸುತ್ತಿದೆ. ಈ ಸಂಗತಿಯನ್ನು ಪ್ರತಿ ಮನೆ ಮನೆಗೂ ತಲುಪಿಸುವ ಕೆಲಸವಾಗಬೇಕು ಎಂದು ಕಿವಿಮಾತು ಹೇಳಿದರು.

ಪಕ್ಕದ ಬಾಂಗ್ಲಾದೇಶ, ಪಾಕಿಸ್ತಾನ ಹಾಗೂ ಅಫ್ಘಾನಿಸ್ತಾನ ಸೇರಿದಂತೆ ಇತರೆ ದೇಶಗಳಲ್ಲಿ ಹಿಂದೂಗಳ ಪರಿಸ್ಥಿತಿ ಹೀನಾಯವಾಗಿದೆ. ಇದರ ಬಗ್ಗೆ ಯಾರೊಬ್ಬರು ಮಾತನಾಡುತ್ತಿಲ್ಲ. ಭಾರತದಲ್ಲಿ ವಾಸಿಸುತ್ತಿರುವ ಪ್ರತಿಯೊಬ್ಬ ಹಿಂದೂ ಶಾಂತಿ, ನೆಮ್ಮದಿಯಿಂದ ಬಾಳ್ವೆ ನಡೆಸುತ್ತಿದ್ದಾನೆ. ಇದಕ್ಕೆಲ್ಲಾ ಹಿಂದೂ ಧರ್ಮದಲ್ಲಿನ ಐಕ್ಯತೆ, ಸಹನೆ, ತಾಳ್ಮೆಯೇ ಕಾರಣ ಎಂದು ಅಭಿಪ್ರಾಯಪಟ್ಟರು.

ಹಿಂದೂ ಧರ್ಮದಲ್ಲಿರುವ ಸಣ್ಣಪುಟ್ಟ ಭಿನ್ನಾಪ್ರಾಯಗಳನ್ನು ಮರೆತು ಸದಾ ಒಗ್ಗಟ್ಟಿನ ಬಾಳ್ವೆ ನಡೆಸುವುದನ್ನು ಎಲ್ಲರೂ ಕಲಿಯಬೇಕು. ಇಲ್ಲದಿದ್ದರೆ, ಅನ್ಯರು ನಮ್ಮ ಮೇಲೆ ಸವಾರಿ ಮಾಡಿ, ಹಿಂದೂಗಳ ಒಗ್ಗಟ್ಟು ಹೊಡೆಯಲು ಯತ್ನಿಸುತ್ತಾರೆ ಹಾಗೂ ಅವಕಾಶಗಳಿಗಾಗಿ ಕೆಲಸ ಮಾಡದೇ, ಸಿಕ್ಕಿರುವ ಕೆಲಸದಲ್ಲೇ ತೃಪ್ತಿಪಟ್ಟು ನಮಿಸಬೇಕು ಎಂದು ಕಿವಿಮಾತು ಹೇಳಿದರು.

ದೇವಾಲಯ ಸಂವರ್ಧನಾ ಸಮಿತಿಯ ಪ್ರಚಾರಕ್ ಮನೋಹರ್ ಮಾತನಾಡಿ, ಹಿಂದೂಗಳೇ ಸಣ್ಣಪುಟ್ಟ ಭಿನ್ನಾಪ್ರಾಯ ಬದಿಗೊತ್ತಿ ಎಲ್ಲರೂ ಒಂದೇ ಎನ್ನುವ ಭಾವನೆಯಲ್ಲಿ ಬದುಕು ಕಟ್ಟಿಕೊಳ್ಳಬೇಕು. ಆದರೆ, ಹಿಂದೂಗಳಲ್ಲಿ ಆಸೆ–ಆಮಿಷ ಗಳನ್ನು ತೋರಿಸಿ, ಬೇರೆ ಧರ್ಮಕ್ಕೆ ಸೆಳೆಯುವ ಕೆಲಸವಾಗುತ್ತಿದೆ. ಇದರಲ್ಲೂ ಹೆಣ್ಣು ಮಕ್ಕಳೇ ಹೆಚ್ಚಿನ ಟಾರ್ಗೆಟ್ ಆಗುತ್ತಿದ್ದು, ಇದರ ಎಚ್ಚರವಿರಲಿ ಎಂದು ಎಚ್ಚರಿಸಿದರು.

ನಿಮ್ಮ ಮಕ್ಕಳಿಗೆ ಸಣ್ಣ ವಯಸ್ಸಿನಿಂದಲೇ ಹಿಂದೂ ಧರ್ಮದ ಆಚರಣೆಗಳು, ಸಂಸ್ಕೃತಿ ಮತ್ತು ಪರಂಪರೆ ಕುರಿತು ಪರಿಚಯಿಸಬೇಕು. ಇದರಿಂದ ಮಕ್ಕಳ ಕೌಶಲ ಜ್ಞಾನ ಹೆಚ್ಚಾಗುತ್ತದೆ. ಅಲ್ಲದೆ, ಉತ್ತಮ ಜೀವನ ನಡೆಸಬಹುದು ಎಂದು ಸಲಹೆ ನೀಡಿದ ಅವರು, ನಮ್ಮ ಪೂರ್ವಜರು ಅವಿಭಕ್ತ ಕುಟುಂಬಗಳಿಗೆ ಹೆಚ್ಚು ಪ್ರೋತ್ಸಾಹಿಸುತ್ತಿದ್ದರು. ಆದರೆ, ಎಲ್ಲರೂ ದುಡಿಯುವ ಪರಿಸ್ಥಿತಿ ಎದುರಾಗಿರುವುದರಿಂದ ಕುಟುಂಬಗಳು ಒಡೆದು ಹೋಗುತ್ತಿವೆ. ಹಾಗಾಗಿ ಅವಿಭಕ್ತ ಕುಟುಂಬಗಳಿಗೆ ಹೆಚ್ಚಿನ ಪ್ರೋತ್ಸಾಹ ಮುಖ್ಯ ಎಂದರು.

ಇದಕ್ಕೂ ಮುನ್ನ ಮೈಸೂರು ಬಸವನಗುಡಿ ವೃತ್ತದಿಂದ ಆರಂಭವಾದ ಶೋಭಾಯಾತ್ರೆಯು ನಗರದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ ಕೊನೆಗೆ ಮಹದೇಶ್ವರ ದೇವಸ್ಥಾನ ಆವರಣ ತಲುಪಿತು. ವೇದಿಕೆಯಲ್ಲಿ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಕೆ.ಬಿ.ಲಿಂಗರಾಜು ಸೇರಿದಂತೆ ಇತರರಿದ್ದರು.

ಯಶಸ್ವಿನಿ ನೋಂದಣಿ, ನವೀಕರಣಕ್ಕೆ ಅವಕಾಶ

ಮೈಸೂರು, ಜ.24– ರಾಜ್ಯ ಸರ್ಕಾರದ ಯಶಸ್ವಿನಿ ಆರೋಗ್ಯ ರಕ್ಷಣೆ ಯೋಜನೆಯ ಸದಸ್ಯತ್ವ ನವೀಕರಣ, ಹೊಸ ಸದಸ್ಯರ ನೋಂದಣಿ ಪ್ರಕ್ರಿಯೆ ಪ್ರಾರಂಭವಾಗಿದೆ ಎಂದು ಮೈಸೂರಿನ ಕೊಡಗು ಸಹಕಾರ ಸಂಘ ನಿಯಮಿತ ಪ್ರಕಟಣೆಯಲ್ಲಿ ತಿಳಿಸಿದ್ದು, ಸಂಘದ ಸದಸ್ಯರು ಮಾಹಿತಿಗೆ ಕಚೇರಿ ವೇಳೆಯಲ್ಲಿ 0821–2511987 ಮೂಲಕ ಕಾರ್ಯದರ್ಶಿಯವರನ್ನು ಸಂಪರ್ಕಿಸುವಂತೆ ಕೋರಲಾಗಿದೆ.

ಮೈಸೂರಲ್ಲಿ ವಿಜೃಂಭಣೆಯ ಇಸ್ಕಾನ್‌ನ ಶ್ರೀಕೃಷ್ಣ ಬಲರಾಮ ರಥಯಾತ್ರೆ ; ಭಕ್ತಿಯ ಪರಾಕಾಷ್ಠೆ ಮೆರೆದ ಅಪಾರ ಭಕ್ತರು



ಮೈಸೂರಿನಲ್ಲಿ ಶನಿವಾರ ಅಪಾರ ಭಕ್ತರ ಸಮ್ಮುಖದಲ್ಲಿ ಇಸ್ಕಾನ್‌ನ ಶ್ರೀಕೃಷ್ಣ ಬಲರಾಮರ ರಥಯಾತ್ರೆ ವೈಭವದಿಂದ ನಡೆಯಿತು.

ಮೈಸೂರು,ಜ.24(ಪಿಎಂ)– ಇಸ್ಕಾನ್ ಮೈಸೂರು ವತಿಯಿಂದ ಹಮ್ಮಿಕೊಂಡಿದ್ದ ಶ್ರೀ ಕೃಷ್ಣ ಬಲರಾಮ ರಥ ಯಾತ್ರೆಯು ಅಪಾರ ಭಕ್ತರ ಸಮ್ಮುಖದಲ್ಲಿ ಶನಿವಾರ ವಿಜೃಂಭಣೆಯಿಂದ ನೆರವೇರಿತು.

ಶ್ರೀಕೃಷ್ಣ ಬಲರಾಮರ ವಿಗ್ರಹಗಳನ್ನು ಹೊತ್ತ ಅಲಂಕೃತ ಬೃಹತ್ ರಥವು ಮೈಸೂರಿನ ಹೃದಯ ಭಾಗದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿತು. ರಥದಲ್ಲಿ ಪ್ರತಿಷ್ಠಾಪಿಸಿದ್ದ ಶ್ರೀಕೃಷ್ಣ–ಬಲರಾಮರ ವಿಗ್ರಹಗಳನ್ನು ಕಂಡ ಭಕ್ತರು ಭಕ್ತಿಭಾವದ ಪರಾಕಾಷ್ಠೆ ಮೆರೆದರು. ಆ ಮೂಲಕ 28ನೇ ವರ್ಷದ ರಥಯಾತ್ರೆಯು ವೈಭವದಿಂದ ಜರುಗಿತು.

ಮೈಸೂರಿನ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಎದುರು ಇಸ್ಕಾನ್ ಮೈಸೂರು ಅಧ್ಯಕ್ಷ ಶ್ರೀ ಸ್ತೋಕ ಕೃಷ್ಣಸ್ವಾಮಿ ಅವರ ಸಾನ್ನಿಧ್ಯದಲ್ಲಿ ವಿಧಾನ ಪರಿಷತ್ ಮಾಜಿ ಸದಸ್ಯ ಗೋ.ಮಧುಸೂದನ್ ಹಾಗೂ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಸೇರಿದಂತೆ ಇನ್ನಿತರ ಗಣ್ಯರು ರಥ ಎಳೆದು ಉತ್ಸವಕ್ಕೆ ಚಾಲನೆ ನೀಡಿದರು. ಇದೇ ವೇಳೆ ರಥದಲ್ಲಿದ್ದ ಶ್ರೀಕೃಷ್ಣ ಬಲರಾಮರ ವಿಗ್ರಹಗಳಿಗೆ ಪೂಜಾ ಕೈಂಕರ್ಯ ನೆರವೇರಿಸಲಾಯಿತು.



ರಥಯಾತ್ರೆಗೆ ಮಾಜಿ ಎಂಎಲ್‌ಸಿ ಗೋ.ಮಧುಸೂದನ್ ಹಾಗೂ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಸೇರಿದಂತೆ ಇನ್ನಿತರ ಗಣ್ಯರು ಚಾಲನೆ ನೀಡಿದರು.

ಇದಕ್ಕೂ ಮುನ್ನ ಇಲ್ಲಿ ಹಮ್ಮಿಕೊಂಡಿದ್ದ ಸಭಾ ಕಾರ್ಯಕ್ರಮದಲ್ಲಿ ಅತಿಥಿಯಾಗಿ ಪಾಲ್ಗೊಂಡಿದ್ದ ಗೋ.ಮಧುಸೂದನ್ ಮಾತನಾಡಿ, ಕೃಷ್ಣ ಸರ್ವಜ್ಞ, ಸರ್ವಶಕ್ತಿವಂತ. ಪುರಿಜಗನ್ನಾಥ ರಥಯಾತ್ರೆ ಮಾದರಿಯಲ್ಲಿ ಇಡೀ ಪ್ರಪಂಚದಾದ್ಯಂತ ಪ್ರಭುಪಾದರು ಕೃಷ್ಣ ಬಲರಾಮರ ರಥಯಾತ್ರೆ ಆರಂಭಿಸಿದರು. ಜೊತೆಗೆ ಭಗವದ್ಗೀತೆಯ ಬೋಧನೆ ಕಾರ್ಯಕ್ರಮಗಳನ್ನು ಪ್ರಾರಂಭಿಸಿದರು. ರಥಯಾತ್ರೆಯು ಮೈಸೂರಿನಲ್ಲಿ ಕಳೆದ 27 ವರ್ಷಗಳಿಂದ ನಡೆಯುತ್ತಿದ್ದು, ಇಂದು 28ನೇ ವರ್ಷದ ಯಾತ್ರೆ ನಡೆಯುತ್ತಿದೆ. ಮೈಸೂರಿನಲ್ಲಿ ನಡೆದ ಎಲ್ಲಾ ರಥಯಾತ್ರೆಗಳಲ್ಲಿ ನಾನು ಪಾಲ್ಗೊಂಡಿದ್ದು, ಇದು ನನ್ನ ಪುಣ್ಯವೇ ಸರಿ ಎಂದು ಸಂತಸ ವ್ಯಕ್ತಪಡಿಸಿದರು.

ದೇವಾಲಯ ತಲುಪಿ ಸಮಾಪ್ತಿ: ಚಾಮರಾಜ ಒಡೆಯರ್ ವೃತ್ತ, ದೊಡ್ಡ ಗಡಿಯಾರ ವೃತ್ತ, ಗಾಂಧಿ ಚೌಕ, ಚಿಕ್ಕ ಗಡಿಯಾರ ವೃತ್ತ, ಡಿ.ದೇವರಾಜ ಅರಸು ರಸ್ತೆ, ನಾರಾಯಣ ಶಾಸ್ತ್ರಿ ರಸ್ತೆ, ಚಾಮರಾಜ ಜೋಡಿ ರಸ್ತೆ, ರಾಮಸ್ವಾಮಿ ವೃತ್ತ ಸೇರಿದಂತೆ ಮೊದಲಾದ ರಸ್ತೆಗಳಲ್ಲಿ ಸಂಚರಿಸಿದ ರಥಯಾತ್ರೆಯು, ಜಯನಗರದ ಇಸ್ಕಾನ್ ದೇವಸ್ಥಾನ ತಲುಪಿ ಸಮಾಪ್ತಿಗೊಂಡಿತು. ಬಳಿಕ ಸಂಕೀರ್ತನೆಯೊಂದಿಗೆ ಆರತಿ ನೆರವೇರಿಸಲಾಯಿತು.

ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದರು. ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ, ಇಸ್ಕಾನ್ ಬೆಂಗಳೂರು ಅಧ್ಯಕ್ಷ ಶ್ರೀ ಮಧು ಪಂಡಿತ ದಾಸ, ಮಾಜಿ ಅಧ್ಯಕ್ಷ ಸಾತ್ವಿಕ್ ದಾಸ, ಇಸ್ಕಾನ್ ಹುಬ್ಬಳ್ಳಿ ಅಧ್ಯಕ್ಷ ರಾಜೀವ ಲೋಚನ ದಾಸ, ಇಸ್ಕಾನ್ ಬೆಂಗಳೂರು ಹಿರಿಯ ಉಪಾಧ್ಯಕ್ಷ ವಾಸುದೇವ ಕೇಶವ ದಾಸ, ಚೆನ್ನೈ ಹರೇ ಕೃಷ್ಣ ಆಂದೋಲನದ ಅಧ್ಯಕ್ಷ ಸುವ್ಯಕ್ತ ನರಸಿಂಹ ದಾಸ ಮತ್ತಿತರರು ಸಭಾ ಕಾರ್ಯಕ್ರಮದಲ್ಲಿ ಹಾಜರಿದ್ದರು.

ಗ್ರೇಟರ್ ಮೈಸೂರು ಜಾರಿಗೆ ಮೊದಲು ಪಾಲಿಕೆಯಲ್ಲಿ ಗ್ರೇಟರ್ ಸುಧಾರಣೆ ತರಲಿ

ರಾಜ್ಯ ಸರ್ಕಾರಕ್ಕೆ ಸಂಸದ ಯದುವೀರ್ ಆಗ್ರಹ

ಮೈಸೂರು, ಜ.24(ಬಿಎಲ್‌ಯು)– ಮೈಸೂರು ನಗರ ಪಾಲಿಕೆಯಲ್ಲಿ ಭ್ರಷ್ಟಾಚಾರ ಮಿತಿ ಮೀರಿದ್ದು, ಗ್ರೇಟರ್ ಮೈಸೂರು ಮಾಡುವ ರಾಜ್ಯ ಸರ್ಕಾರ ಮೊದಲು ನಗರ ಪಾಲಿಕೆಯಲ್ಲಿ ಗ್ರೇಟರ್ ಸುಧಾರಣೆ ತರಬೇಕು ಎಂದು ಮೈಸೂರು–ಕೊಡಗು ಲೋಕಸಭಾ ಸದಸ್ಯ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಆಗ್ರಹಿಸಿದ್ದಾರೆ.



ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ನಗರ ಪಾಲಿಕೆಯಲ್ಲಿ ಸಾರ್ವಜನಿಕರ ನಿಧಿಯನ್ನೆ ದುರುಪಯೋಗ ಮಾಡಿಕೊಳ್ಳುವುದನ್ನು ತಡೆಯುವಲ್ಲಿ ಈಗಾಗಲೇ ಈ ಸಂಬಂಧ ಮೂವರು ಮಹಿಳಾ ನೌಕರರನ್ನು ಅಮಾನತು ಮಾಡಿರುವುದು ಇದಕ್ಕೆ ಸ್ಪಷ್ಟ ನಿದರ್ಶನ ಎಂದು ಆರೋಪಿಸಿದ್ದಾರೆ.

ಚುನಾಯಿತ ಪ್ರತಿನಿಧಿಗಳು ಇಲ್ಲದಿರುವುದು, ಸಮರ್ಥ ಮೇಲ್ವಿಚಾರಣೆ ಇಲ್ಲದಿರುವುದು, ಸುಧಾರಣಾ ಕ್ರಮ ಕೈಗೊಳ್ಳದಿರುವುದು, ಉತ್ತರದಾಯಿತ್ವ ಇಲ್ಲದಿರುವುದು ನಗರ ಪಾಲಿಕೆಯ ಅತಿಯಾದ ಭ್ರಷ್ಟಾಚಾರಗಳಿಗೆ ಮೂಲ ಕಾರಣವಾಗಿದೆ ಎಂದು ಯದುವೀರ್ ಅಭಿಪ್ರಾಯಪಟ್ಟಿದ್ದಾರೆ.

ಇಷ್ಟೆಲ್ಲಾ ಅವ್ಯವಸ್ಥೆ ತಾಂಡವಾಡುತ್ತಿದ್ದರೂ ಸರ್ಕಾರ ಮಾತ್ರ ನಗರ ಪಾಲಿಕೆ ಚುನಾವಣೆ ನಡೆಸದೆ ವಿಳಂಬ ಧೋರಣೆ ಅನುಸರಿಸುತ್ತಿದೆ ಎಂದು ಆಪಾದಿಸಿದ್ದಾರೆ.

ಸ್ಥಳೀಯ ಆಡಳಿತದಲ್ಲಿ ಭ್ರಷ್ಟಾಚಾರ ತಾಂಡವವಾಡಲು ರಾಜ್ಯ ಸರ್ಕಾರವೇ ನೇರ ಹೊಣೆಯಾಗಿದೆ. ಈ ಹಿನ್ನೆಲೆಯಲ್ಲಿ ಗ್ರೇಟರ್ ಮೈಸೂರು ಮಾಡಿರುವ ಸರ್ಕಾರ ಮೊದಲು ನಗರ ಪಾಲಿಕೆಯಲ್ಲಿ ಗ್ರೇಟರ್ ಸುಧಾರಣೆ ತರಬೇಕು ಎಂದು ಯದುವೀರ್ ಒತ್ತಾಯಿಸಿದ್ದಾರೆ.

ವಾಲ್ಮೀಕಿ ಜಾತ್ರೆಗೆ ಶ್ರೀಗಳಿಗೆ ಆಹ್ವಾನ



ಹರಿಹರ ತಾಲೂಕು ರಾಜನಹಳ್ಳಿಯ ಶ್ರೀ ಮಹರ್ಷಿ ವಾಲ್ಮೀಕಿ ಗುರುಪೀಠದಲ್ಲಿ ಮಹರ್ಷಿ ವಾಲ್ಮೀಕಿ ಜಾತ್ರೆ ನಡೆಯಲಿರುವ ಹಿನ್ನೆಲೆಯಲ್ಲಿ ಪರಮಪೂಜ್ಯ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ನೇತೃತ್ವದಲ್ಲಿ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರನ್ನು ಆಹ್ವಾನಿಸಲಾಯಿತು. ಈ ವೇಳೆ ಮುಖಂಡರಾದ ಎಂ.ಅಪ್ಪಣ್ಣ, ಲೋಕೇಶ್ ಪಿಯಾ, ಜಗದೀಶ್ ಮೂರ್ತಿ, ಮಹದೇವಸ್ವಾಮಿ, ಅಂಕಪ್ಪ, ರಂಗಸ್ವಾಮಿ, ನಾಗೇಶ್, ಸೋಮಣ್ಣ, ಮಂಜು ಮತ್ತಿತರರಿದ್ದರು.

WANTED HOUSE FOR RENT
3BHK
SPACIOUS INDEPENDENT HOUSE, North / East Facing in K C Layout / Siddhartha Layout, Lakshmipuram, Mysore.
Call: 63631 88705

MUDA APPROVED SITE FOR SALE
KBL GREEN WOOD
50'x80' - E/F
Commercial Site, near Sapthamathruka Layout, attached to JSS & Police Layout, Mysore.
Bank Loan Available: ICICI, HDFC Bank
99865-01159 / 96865-73798

MUDA APPROVED SITE FOR SALE
KBL SILICON CITY LAYOUT
50'x80' - W/F
100 feet Road, Commercial Site, near BEML, L&T, Infosys, Mysore.
Bank Loan Available: ICICI, HDFC Bank
74062-72933 / 96865-73798

SHUBHAYATRA HOLIDAYS
Mysore Branch



CHARDHAM YATRA for 13 Days by Air
Bookings Started
Mob: 74833-73991

LEASE/ ಬಾಡಿಗೆಗೆ/ಭೋಗ್ಯಕ್ಕೆ
2 BHK 20x30 ಗ್ರೌಂಡ್ ಫ್ಲೋರ್, ಪೂರ್ವ ದಿಕ್ಕಿನ ಸುಸಜ್ಜಿತ ಮನೆ ಭೋಗ್ಯಕ್ಕೆ / ಬಾಡಿಗೆಗೆ ಮನೆ, ಜೋಡಿ ಬೇವಿನ ಮರದ ಹತ್ತಿರ/ಕನಕದಾಸನಗರ, ದಟ್ಟಗಳ್ಳಿ, ಮೈಸೂರು, ಆಸಕ್ತರು ಸಂಪರ್ಕಿಸಿ :
9886667224 / 9449728001
ONLY FOR VEGETARIANS

ಬೇಕಾಗಿದ್ದಾರೆ
ಗೋಕುಲಂನಲ್ಲಿ ಪ್ರತಿಷ್ಠಿತ ಸರ್ವೀಸ್ ಅಪಾರ್ಟ್‌ಮೆಂಟ್‌ಗೆ ರೂಮ್ ಬಾಯ್ ಕೆಲಸಕ್ಕೆ ತಕ್ಷಣ ಹುಡುಗರು ಬೇಕಾಗಿದ್ದಾರೆ. ಊಟ ಮತ್ತು ವಸತಿ ಉಚಿತ. ವಯಸ್ಸು: 18–30 ವಿದ್ಯಾರ್ಹತೆ: 10ನೇ ತರಗತಿ ಫೇಲ್/ಪಾಸ್
ಸಂಪರ್ಕಿಸಿ: +91 8792045556

30x40
Sites for sale
MUDA Approved
PRAKRUTHI ENCLAVE
Dadadahalli Village
Jayapura Hobli
Mysuru Taluk
9880730690

PUBLIC NOTICE
That, my client **Smt. MAMATHA B.J.** W/o. Sri. Sathish Murthy C.M., resident of Door No. 46, School Master Street, Chinnenahalli Village, K. Shettalli Hobli, Srirangapattana Taluk, Mandya District - 571807, is intending to purchase the below mentioned schedule properties from its Owners by name **Sri. Madesh B.S.,** S/o. G. Shivaiah and Sri. Manjunatha H., S/o. Huchha Hegade. Hence, if any General Public having any objections, claims, right, title, interest whatsoever over the schedule properties may file their respective objections if any along with the title documents and other related relevant documents within 07 days from the date of this publication to the below mentioned address. Otherwise my client will be constrain to deem that, there is no objections from any persons/public and will proceed to purchase the schedule mentioned properties. Any objections received there after will not bind my client and my client will not be held responsible for any consequences thereof.

SCHEDULE PROPERTIES
Item No. 1: All that piece and parcel of the Vacant **Site Property bearing No. 86, having Unique ID No. 152200200735823346, measuring East to West 15.24 mtrs.,** and North to South 9.14 mtrs., in total 139.29 mtrs., situated at Dodda Kadanahalli Village, Comes with the Manuganahalli Grama Panchayath, Hunsur Taluk, Mysuru Disrict and bounded on the; East by : Road, West by: 3 mtrs, Pathway and Garden, North by: Site No. 85, South by: Site No. 87 Item No. 2: All that piece and parcel of the Vacant **Site Property bearing No. 87, having Unique ID No. 152200200735823348, measuring East to West 15.24 mtrs., and North to South 9.14 mtrs., in total 139.29 mtrs.,** situated at Dodda Kadanahalli Village, Comes with the Manuganahalli Grama Panchayath, Hunsur Taluk, Mysuru Disrict and bounded on the; East by : Road, West by: 3 mtrs, Pathway and Garden, North by: Site No. 86, South by: Site No. 88,

Sd/- H.S. Kumar, B.A.L., LL.B,
Advocate, Law Lexicon Associates, #1411, 1st Floor, 6th Cross, Thyagaraja Road, K.R.Mohalla, Mysore.

ವ್ಯೋಮ್ ಗೋಲ್ಡ್
ನಿಮ್ಮ ಚಿನ್ನ, ಬೆಳ್ಳಿಯನ್ನು ನಾವು ಖರೀದಿಸುತ್ತೇವೆ
ನಿಮ್ಮ ಅಡವಿಟ್ಟ ಚಿನ್ನವನ್ನು ನಾವು ಬಿಡಿಸುತ್ತೇವೆ
ಹೆಚ್ಚಿನ ಮೌಲ್ಯವನ್ನು ಖಾತರಿ ಪಡಿಸುತ್ತೇವೆ
ನಿಮ್ಮ ಚಿನ್ನವನ್ನು ನಾವು ಅಡವಿಟ್ಟುಕೊಳ್ಳುತ್ತೇವೆ
A Unit of Darla Group
#118, 1ST FLOOR, D.D. URS ROAD, OPP: BHIMA & BROTHERS, MYSURU - 570001
7338162999

STAR OF MYSORE

SPECIAL ISSUE

Star of Mysore is completing **48** years of service on **16th February 2026** and entering **49th** year of publication. As in the past, this year too we will be publishing a Special Issue.

We request our advertisers & patrons to release their advertisements before **5th February** to facilitate printing as per schedule.

HEAD OFFICE

0821-2496520 (5-LINES) Ad Dept. - 0821-2496522 / 23
Email : ad@starofmysore.com
Maria G. Fernandes - Advt. Manager: 94485-25060/80730-30835
Joy Anthony Dove - Sr. Executive-Ad Sales - 89516-68960
Prema - Sr. Executive Advertising - 96805-49879
• K.R. Circle Office : 0821-2431774 • D.D. Urs Road Office : 0821-2428695
• Kodagu Office : 97314-69871 • Mandya Office : 87629-60325
• Chamarajanagar : 92422-65657 • T.N. Pura : 94483-05750
• Nanjangud : 98805-09200 • Bengaluru : 98440-46761

ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ಶ್ರೀ ಟಿ.ಪಿ. ಚನ್ನಬಸಪ್ಪನವರು
ನಿವೃತ್ತ ಪ್ರಾಧ್ಯಾಪಕರು, ಜೆಎಸ್‌ಎಸ್ ಸಂಸ್ಥೆ

ಇವರು 15.1.2026 ರಂದು ಲಿಂಗೈಕ್ಯರಾಗಿದ್ದು ತತ್ಸಂಬಂಧವಾಗಿ 26.1.2026ನೇ ಸೋಮವಾರ ಮಲ್ಲನಮೂಲೆ ಪೂಜ್ಯ ಶ್ರೀ ಇಮ್ಮಡಿ ಸಿದ್ಧಲಿಂಗ ಮಹಾಸ್ವಾಮಿಗಳವರ ಪಾದಪೂಜೆ ಮತ್ತು ಮಧ್ಯಾಹ್ನ 12 ಗಂಟೆಗೆ ಕೈಲಾಸ ಗಣಾರಾಧನೆಯನ್ನು ಏರ್ಪಡಿಸಲಾಗಿದೆ. ಆಹ್ವಾನ ಪತ್ರಿಕೆ ತಲುಪದೇ ಇದ್ದವರು ಇದನ್ನೇ ಆಹ್ವಾನವೆಂದು ತಿಳಿದು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.

ಸ್ಥಳ : ತೊರವಳ್ಳಿ, ನಂಜನಗೂಡು ತಾ., ಮೈಸೂರು ಜಿ.
ಇಂತಿ ದುಃಖಿತಪ್ತರು : ಶ್ರೀಮತಿ ವಿಜಯಾಂಬಿಕ ಹಾಗೂ ಕುಟುಂಬಸ್ಥರು

WE ARE HIRING FOR A PETROL BUNK @ BOGADI, MYSURU

PUMP BOYS / GIRLS
6am to 9am - 4 Nos
9am to 6pm - 4 Nos
6pm to 10pm - 4 Nos
10pm to 6pm - 1 No.

SHIFT SUPERVISORS
2 Nos
With computer Knowledge & experience in any service industry

◆ AIR BOY: 1 NO. 9am to 6pm

CALL: 9448116337

ಲಾರಿ ಡ್ರೈವರ್ - 3 Nos
ಬೇಕಾಗಿದ್ದಾರೆ
ಕಾವೇರಿ ಕಾಂಕ್ರೀಟ್ ಪ್ರೊಡಕ್ಟ್ಸ್ – ಚಿಲ್ಕುಂದ
ಮೈಸೂರು ಮಡಿಕೇರಿ ಮುಖ್ಯರಸ್ತೆ, ಹುಣಸೂರು ತಾಲೂಕು - 571 113
ಭತ್ಯ ಸೇರಿ ತಿಂಗಳಿಗೆ ಸಂಬಳ : ರೂ. 25,000/-
ಉಚಿತ ವಸತಿ ಸೌಕರ್ಯ, ಫ್ಯಾಮಿಲಿ ಕ್ವಾರ್ಟರ್ಸ್, ಬೇಕಿದ್ದರೆ ಲಭ್ಯವಿದೆ.
Call: 96862 44144 / 94490 04191

ಖಾಲಿ ಜಮೀನು ಬೇಕಾಗಿದೆ
ಮೈಸೂರಿನ ರಿಂಗ್ ರಸ್ತೆಯ ಒಳಗೆ ವಾಣಿಜ್ಯ ಉದ್ದೇಶಕ್ಕಾಗಿ ಖಾಲಿ ಜಮೀನು ಲೀಸ್ ಗೆ ಬೇಕಾಗಿದೆ.
ಸಂಪರ್ಕಿಸಿ: +91 96118 72626


ಬಾಡಿಗೆಗೆ ದೊರೆಯುತ್ತದೆ
ಮಂಡ್ಯ ನಗರ ಬನ್ನೂರು ರಸ್ತೆ, ಚಾಮುಂಡೇಶ್ವರಿ ದೇವಸ್ಥಾನದ ಪಕ್ಕ ಅಮ್ಮ ಪ್ಲಾಜಾ, ಶ್ರೀ ಗುರುರಾಘವೇಂದ್ರ ಕೃಪ ವಾಣಿಜ್ಯ ಸಂಕೀರ್ಣ, ನಾಲ್ಕು ಅಂತಸ್ತಿನ ಕಟ್ಟಡ ಬಾಡಿಗೆಗೆ ದೊರೆಯುತ್ತದೆ. ನೆಲ ಮಳಿಗೆ– 25x75 ಅಳತೆವುಳ್ಳ ಕೊಠಡಿ, ಒಂದನೇ ಅಂತಸ್ತು– 25x75 ಅಳತೆ, 2ನೇ ಮಹಡಿಯಲ್ಲಿ 5 ರೂಂಗಳು (25x13 1/2 ಅಡಿ), 3ನೇ ಮಹಡಿ– 5 ರೂಂಗಳು (25x13 1/2 ಅಡಿ) ವಾಣಿಜ್ಯ ಕಟ್ಟಡ ಬಾಡಿಗೆಗೆ ದೊರೆಯುತ್ತದೆ. ಬಾಡಿಗೆ ರೂ. 1,60,000 ರೂ. (ನೆಗೋಸೇಬಲ್). ಸಂಪರ್ಕಿಸಿ: ಬಿ. ಭೂತೇಗೌಡ
9845266630 / 9900858850




ಗೃಹಪ್ರವೇಶ

ಆತ್ಮೀಯರೇ,
ದಿನಾಂಕ 25.01.2026 ಭಾನುವಾರ ಮೈಸೂರಿನ ಜೆ.ಪಿ.ನಗರದ ಪೊಲೀಸ್ ಬೂತ್ ಸರ್ಕಲ್ ನಲ್ಲಿ ನಾವು ನೂತನವಾಗಿ ನಿರ್ಮಿಸಿರುವ ಮನೆಯ **ಗೃಹ ಪ್ರವೇಶ**ವನ್ನು ಏರ್ಪಡಿಸಿರುವುದರಿಂದ ತಾವುಗಳು ದಯಮಾಡಿ ಆಗಮಿಸಬೇಕೆಂದು ಕೋರುತ್ತೇವೆ. ಸಮಯದ ಅಭಾವದಿಂದ ಎಲ್ಲರಿಗೂ ಆಹ್ವಾನ ಪತ್ರಿಕೆ ತಲುಪಿಸಲು ಸಾಧ್ಯವಾಗಲಿಲ್ಲ, ದಯಮಾಡಿ ಎಲ್ಲಾ ನನ್ನ ಸ್ನೇಹಿತರು, ಹಿತೈಷಿಗಳು, ಸಂಬಂಧಿಕರು ಬಂದು ಆಶೀರ್ವದಿಸಬೇಕಾಗಿ ಕೋರುತ್ತೇವೆ.

ಶ್ರೀಮತಿ ರೂಪ ಶ್ರೀ ಗೆಜ್ಜಗಳ್ಳಿ ಲೋಕೇಶ್
ಮಾಜಿ ಜಿಲ್ಲಾ ಪಂಚಾಯತ್ ಸದಸ್ಯರು ಕಡಕೊಳ ಕ್ಷೇತ್ರ
ಗೆಜ್ಜಗಳ್ಳಿ ಗ್ರಾಮ, ಮೈಸೂರು ತಾಲ್ಲೂಕು



ಕರ್ನಾಟಕ ರಾಜ್ಯ ಕಂಡ ಅಪರೂಪದ ಸರಳ, ಸಜ್ಜನ, ಪ್ರಾಮಾಣಿಕ, ಹಿರಿಯ ರಾಜಕಾರಣಿ, ಸಹಕಾರಿ ಧುರೀಣ
ಮಾಜಿ ಸಚಿವರಾದ
ದಿ|| ಶ್ರೀ ಎಸ್. ನಂಜಪ್ಪನವರ
ಹನ್ನೆರಡನೇ ವರ್ಷದ ಪುಣ್ಯಸ್ಮರಣೆ
ದಿನಾಂಕ : 26-01-2026



ಸದಾ ನಿಮ್ಮ ನೆನಪಲ್ಲಿ :
ಶ್ರೀಮತಿ ಲಲಿತಮ್ಮ ಮತ್ತು ಮಕ್ಕಳು
ನವನಗರ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ.
ಎಸ್. ನಂಜಪ್ಪ ಎಜುಕೇಷನ್ ಚಾರಿಟಬಲ್ ಟ್ರಸ್ಟ್
ಉದಯರವಿ ಚಿಟ್ಸ್ ಪ್ರೈ. ಲಿ.
ಉದಯರವಿ ಗೃಹ ನಿರ್ಮಾಣ ಸಹಕಾರ ಸಂಘ
ಭಾಗೀರಥಿ ವಿವಿದೋದ್ದೇಶ ಸಹಕಾರ ಸಂಘ
ಕಾವೇರಿ ಸ್ಪೋರ್ಟ್ಸ್ & ರಿಕ್ರಿಯೇಷನ್ ಕ್ಲಬ್
ಎಸ್. ನಂಜಪ್ಪ ಅಭಿಮಾನಿ ಬಳಗ

ಸ್ಥಳ : ಹೆಚ್.ಡಿ.ದೇವೇಗೌಡ ಸಮುದಾಯ ಭವನ ಕೆ.ಆರ್.ನಗರ
ಸಮಯ : ಮಧ್ಯಾಹ್ನ 12.30 ಗಂಟೆಗೆ

ಬೆಳಗ್ಗೆ 10 ಗಂಟೆಗೆ ಸಾರ್ವಜನಿಕ ಆಸ್ಪತ್ರೆಯಲ್ಲಿ ಹಣ್ಣು ಹಂಪಲು ವಿತರಣಾ ಕಾರ್ಯಕ್ರಮ

"ಉಚಿತ ಆರೋಗ್ಯ ಹಾಗೂ ನೇತ್ರ ತಪಾಸಣಾ ಶಿಬಿರ ಕಾರ್ಯಕ್ರಮ ಏರ್ಪಡಿಸಲಾಗಿದೆ"

GSS School of Music
BRINGING MUSIC TO LIFE
GUITAR | PIANO | DRUMS | VOCAL | MUSIC PRODUCTION



LEARN & PERFORM MUSIC LIKE NEVER BEFORE!
OFFLINE & ONLINE CLASSES AVAILABLE
8197236500 www.gssmusicschool.com
GSS, #1104, Udayaravi Road, Kuvempunagar, Mysuru

MAHAVEER VIDYA MANDIR
CA-2, LIC COLONY II STAGE, SRIRAMPURA, MYSORE – 34
Qualified Candidates with Experience required :

	POST
1.	PRINCIPAL
2.	SOCIAL TEACHER
3.	KANNADA TEACHER
4.	MATHS TEACHER
5.	NURSERY TEACHER

Note :
- **Principal:** M.A, M.Sc, with B.Ed and minimum 10–12 years experience.
- **Social Teacher:** B.A, M.A, B.Ed.
- **Kannada Teacher:** B.A, D.Ed/B.Ed.
- **Maths Teacher:** B.Sc, M.Sc, B.Ed.
- **Nursery Teacher:** Any Degree with Montessari Training. minimum 2 years experience for above all Teachers.
- Proficiency in English is must for all teaching posts.

SCHEDULE FOR WALK-IN INTERVIEW :
For all Posts : 26th January 2026 (Monday) Time: 10:30 AM

For Applying / Connecting Details :
Phone: 8147471375
Email: mvmjainmysore@gmail.com

ಹೊಸ ಮನೆ (*B* ಖಾತಾ) ಭೋಗ್ಯ / ಮಾರಾಟಕ್ಕಿದೆ
(GENERAL PROPERTY)
22½x30 (15 ಚದರ, ನೆಲ & 1 ಮಹಡಿ 2 ಮಹಡಿಯಲ್ಲಿ 1 ರೂಂ ರಾಮಾನುಜ ರಸ್ತೆ 12ನೇ ಕ್ರಾಸ್, ಮೈಸೂರು, ಸಿಟಿ ಬಸ್ ನಿಲ್ದಾಣದಿಂದ ಕೇವಲ 2 ಕಿ.ಮೀ ಬೆಲೆ 95 ಲಕ್ಷ
8296442979

Exchange your old sofa set to brand new sofa set. Also repair done.
Mob: 9591012944

ತಕ್ಷಣ ಬೇಕಾಗಿದ್ದಾರೆ
ನಾನ್ ವೆಜ್ ಹೊಟೇಲ್‌ಗೆ ಅಡುಗೆ ಮಾಡುವವರು, ಸಪ್ಲೈಯರ್, ಸಹಾಯಕರು, ಕ್ಲೀನಿಂಗ್ ಮಾಡುವವರು ಬೇಕಾಗಿದ್ದಾರೆ. ಸಂಪರ್ಕಿಸಿ:
9555561555 / 9555114111
K R MESS ಕೆ.ಆರ್ ಮೆಸ್ಸ್
ಸ್ಥಳ: ಕುವೆಂಪುನಗರ

G9 projects — Designing your Dreams
Vee2 Developers
POORVA SHELTERS PHASE - I , II & III
Go easy on your pockets
INVESTMENT FRIENDLY PLOTS
20×30 | 30×40 & 20×40 | 30×50
Near to Marvel PU College
Lalithadripura Ring road Mysuru
8055-004-400